
# ಅಪರಂಜಿ

ತಿಳಿನಗೆಯ ಕಾರಂಜಿ



ಮೇ - 2012





# ಅಪರಂಜಿ

ತಿಳಿನಗೆಯ ಕಾರಂಜಿ






ಸಂಪುಟ 29

ಸಂಚಿಕೆ – 8

ಮೇ – 2012



**ಸಂಪಾದಕ ಮಂಡಳಿ**

*ಸಂಪಾದಕರು*
ಶ್ರೀ ಎಂ. ಶಿವಕುಮಾರ್

*ಉಪ ಸಂಪಾದಕರು*
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.


**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಕ್ರಿಸ್ ಗೇಲನ ಅಮೂಲ್ಯ.. | **ವತ್ಸನ** | 3 |
| ಐಪಿಎಲ್ ಮತ್ತು ಆರ್‌ಎಂಎಲ್ | **ಇ.ಆರ್. ರಾಮಚಂದ್ರನ್** | 8 |
| ಒಂದು ಬಹಿರಂಗ ಪತ್ರ | **ಆನಂದ** | 11 |
| ಐಪಿಎಲ್ ಕ್ವಿಜ್ | **ದಾಂಡಿಗ** | 13 |
| ಆರಾಮ ನವಮಿ | **ಗಣೇಶ್ ಹೆಗ್ಗಡೆ** | 15 |
| ತುಂತುರು | **ದಂನಾಅ** | 19 |
| ಗೋವಿಂದಜ್ಜ ಬರ್ಲೇ ಇಲ್ಲೆ | **ಹೆಚ್. ಶಾಂತರಾಜ್ ಐತಾಳ್** | 20 |
| ಅಸಹಕಾರ ಆಂದೋಲನ | **ಅರುಂಧತಿ ಜೋಶಿ** | 23 |
| ಸೆಕ್ಯುರಿಟಿ ತಂದ ಪಜೀತಿ | **ಡಿ.ವಿ. ಗುರುಪ್ರಸಾದ್** | 26 |
| ಗಾಸಿಪ್‌ರಾಜ | **ಅಣ್ಣಾಸ್ವಾಮಿ ಮೊದಲಿಯಾರ್** | 29 |
| ಕನ್ನಡ-ತೆಲುಗು (ಸಂವಾದ) | **ಶ್ಯಾಮಲಾ ರವಿಶಂಕರ್** | 36 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 38 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಕಾವೇರಿ ವಿವಾದ; ನ್ಯಾಯ ಮಂಡಲಿ ಅಧ್ಯಕ್ಷರ ರಾಜೀನಾಮೆ – ಸುದ್ದಿ

**● ವಾತಾವರಣ ಕಾವೇರಿದಂತಿದೆ !!**

★★★

ಬೆಂಗಳೂರಿನಲ್ಲಿ ಭೂಕಂಪ – ಸುದ್ದಿ

**● ಟ್ರಾಫಿಕ್ ಗಲಾಟೇಲಿ ನಮಗೆ ತಿಳಿಯಲೇ ಇಲ್ಲ !!**

★★★

ಹಂಪಿ ದೇಗುಲದ ಸುತ್ತ ಕಟ್ಟಡ ಸಲ್ಲ – ಪತ್ರಿಕಾ ಸುದ್ದಿ

**● ಭಗವಂತನಿಗೆ ಸಂತಸವಂತೆ !!**

★★★

ಬರ ಇರುವಾಗ ಸಿ.ಎಂ. ವಿದೇಶ ಪ್ರವಾಸ ಬೇಡ – ಹೇಳಿಕೆ

**● ವಿದೇಶದವರೇ 'ಬರ'ಬಾರದು ಎನ್ನಬೇಕು !!**

★★★

ಮೌಲ್ಯ ಮಾಪನ ಮಾಡುವವರ ಮುಷ್ಕರ – ಸುದ್ದಿ

**● ಬೇಲಿಯೇ ಎದ್ದು ಹೊಲ ಮೇಯ್ದಂತೆ !!**

★★★

ಮಹಿಳಾ ಕಲ್ಯಾಣ ಇಲಾಖೆ ಅಧಿಕಾರಿ ಬಂಧನ – ಪತ್ರಿಕೆ

**● 'ಕಲ್ಯಾಣ' ಅಂದರೇನು ಅಂತ ಅವರಿಗೆ ತಿಳಿಯದೇನೋ !!**

★★★

ಕೆ.ಆರ್. ಮಾರ್ಕೆಟ್ ಹೂವು ಮಾರಾಟ ಬಂದ್ – ಸುದ್ದಿ

**● ಅರೆ, ಇನ್ನು ಮಂತ್ರಿಗಳ ಹಾರಗಳ ಗತಿ !!**

★★★



# ಕ್ರಿಸ್ ಗೇಲನ ಅಮೂಲ್ಯ ಬ್ಯಾಟು

**- ವತ್ಸನ**

**ಅಂ**ದು ಸಂಜೆ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಅವರ ಮನೆಯ ದಿವಾನಖಾನೆಯಲ್ಲಿ ನಾವೆಲ್ಲಾ ಕುಳಿತಿದ್ದೆವು. ಅಮೆರಿಕೆಯಿಂದ ಮಗಳು, ಅಳಿಯ ಮನೆಗೆ ಬಂದಿದ್ದ ಸಂಭ್ರಮವನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಶರಲೇಖನೊಂದಿಗೆ ನನ್ನನ್ನೂ ಮನೆಗೆ ಆಹ್ವಾನಿಸಿದ್ದರು ಮಿತ್ರ ಉಳ್ಳಾಗಡ್ಡಿಯವರು. ಅಂದಿನ ಮುಖ್ಯ ಕಾರ್ಯಕ್ರಮ ಐ.ಪಿ.ಎಲ್. ಮ್ಯಾಚಿನ ವೀಕ್ಷಣೆ. ಅವತ್ತಿನ ಮ್ಯಾಚೂ ಸಹಾ ಕುತೂಹಲ ಮೂಡಿಸುವಂತಹದೇ. ಬೆಂಗಳೂರಿನ ರಾಯಲ್ ಛಾಲೆಂಜರ್ಸ್ ಮತ್ತು ಪುಣೆಯ ಪುಣೆ ವಾರಿಯರ್ಸ್ ಇವರಿಬ್ಬರ ನಡುವಣ ಸೆಣೆಸಾಟ ಆ ಸಂಜೆಯದು. ಬೆಂಗಳೂರಿನವರು ಹಿಂದಿನ ಮೂರು ಮ್ಯಾಚುಗಳನ್ನು ಸೋತು ಚಿಂತಾಜನಕ ಸ್ಥಿತಿಯಲ್ಲಿದ್ದರೆ ಪುಣೆಯವರು ಈಗಾಗಲೇ ಆರು ಪಾಯಿಂಟುಗಳನ್ನು ಜೇಬಿಗೆ ಸೇರಿಸಿ ಬೀಗುತ್ತಿದ್ದರು. ಮ್ಯಾಚು ಪ್ರಾರಂಭವಾಗುವುದಕ್ಕೆ ಮುಂಚಿನಿಂದಲೇ ಚಹಾ, ಅವಲಕ್ಕಿ ಮತ್ತು ಮೆಣಸಿನಕಾಯಿ ಭಜಿ ಇವುಗಳ ಸರಬರಾಜು ಸಮೃದ್ಧವಾಗಿ ನಡೆದಿತ್ತು. ಮ್ಯಾಚಿನ ಮುಂಚಿನ ಸ್ಲಾಟಿನಲ್ಲಿ ಎಕ್ಸ್‌ಟ್ರಾ ಇನ್ನಿಂಗ್ಸ್ ಸೂತ್ರಧಾರಿಣಿ ಅರ್ಚನಾ ವಿಜಯ, ಜಡೇಜಾ ಮತ್ತು ಸಂಜಯ್ ಮಂಜ್ರೇಕರ್ ಇವರುಗಳೊಂದಿಗೆ ಪಾಟೀ ಸವಾಲು ನಡೆಸಿದ್ದಳು. ಅಲ್ಲಾ ಈಗಿನ ಕಾಲದ ಈ ಆ್ಯಂಖರ್‌ಗಳು ಎಷ್ಟು ಚೂಟಿಯಾಗಿ ಇರ್ತಾರೆ ಅಂತೀನಿ. ಅರಳು ಹುರಿದ ಹಾಗೆ ಮಾತು. ಚೈತನ್ಯ ಚಿಮ್ಮುತ್ತಿರುವ ಮುಖ. ನಮ್ಮ ಐ.ಪಿ.ಎಲ್. ಜನ ಪರವಾಗಿಲ್ಲ ಎಂದುಕೊಳ್ಳುತ್ತಿರುವಂತೆಯೇ ಮ್ಯಾಚು ಪ್ರಾರಂಭವಾಯಿತು.

ಈ ಐ.ಪಿ.ಎಲ್. ಮ್ಯಾಚುಗಳನ್ನು ನೋಡುವಾಗ ನನ್ನದೊಂದು ದೂರು. ಆಟ ಆಡುತ್ತಿರುವ ಫೀಲ್ಡರ್ ಒಬ್ಬನಿಗೆ ಒಂದು ಮೈಕ್ ತಗುಲಿಸಿ ಆಟದ ಮಧ್ಯೆ ಅವನೊಂದಿಗೆ ಸಂಭಾಷಣೆ/ಹರಟೆ ಪ್ರಾರಂಭಿಸುತ್ತಾನೆ ಕಾಮೆಂಟೇಟರ್ ಮಹಾಶಯ. ಅಲ್ಲಾ ಸ್ವಾಮಿ ಲಕ್ಷಾಂತರ ರೂಪಾಯಿ ಗೆಲ್ಲುವ ಅವಕಾಶ ಇರುವ ಆ ಮ್ಯಾಚುಗಳನ್ನು ಅತಿ ಮುತುವರ್ಜಿಯಿಂದ ಏಕಾಗ್ರತೆಯಿಂದ ಆಡಬೇಕಾದದ್ದು ಆಟಗಾರನ ಧರ್ಮ ಅಲ್ಲವೇ. ಆಟದ ಮಧ್ಯೆ ಅವನೊಂದಿಗೆ ಹರಟುತ್ತಾ ಕುಳಿತು ಅವನ ಏಕಾಗ್ರತೆಯನ್ನು ಕೆಡಿಸುವುದು ಯಾವ ನ್ಯಾಯ? ಕೆಲವೊಮ್ಮೆ ಅಂಪೈರ್‌ಗಳಿಗೂ ಮೈಕ್ ತೊಡಿಸಿ ಈ ರೀತಿ ಏಕಾಗ್ರತಾ ಭಂಗ

ಆಗುವುದನ್ನು ನಾನು ನೋಡಿದ್ದೇನೆ. ಅವತ್ತಿನ ಮ್ಯಾಚಿನಲ್ಲಿಯೂ ಸಹಾ ಪುಣೆ ವಿಕೆಟ್ ಕೀಪರ್, ಬೆಂಗಳೂರು ಹುಡುಗ ರಾಬಿನ್ ಉತ್ತಪ್ಪನಿಗೆ ಮೈಕ್ ತೊಡಿಸಿ ಆಟದ ಮಧ್ಯೆ ಸಂಭಾಷಣೆಗೆ ಇಳಿಸಿದ್ದರು. ಅವನೇನೋ ನಮ್ಮ ಎದುರಾಳಿ ಟೀಮಿನವನು. ಅವನ ಏಕಾಗ್ರತೆ ಕೆಟ್ಟರೆ ನಮಗೇ ಲಾಭ ಎಂದು ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಆಟ ಮುಂದುವರಿಯಿತು. ಪುಣೆಯವರು ನೂರ ಎಂಭತ್ತೆರಡು ರನ್ನುಗಳನ್ನು ಪೇರಿಸಿ, ಇನ್ನೇನು ಜಯಲಕ್ಷ್ಮಿ ಅವರಿಗೇ ಒಲಿಯುತ್ತಾಳೆ ಎಂಬ ಭಾವನೆಯನ್ನು ನಮ್ಮಲ್ಲೆಲ್ಲಾ ತುಂಬಿ ನಮ್ಮವರಿಗೆ ಆಟ ಬಿಟ್ಟುಕೊಟ್ಟರು. ಕ್ರಿಸ್ ಗೇಲ್ ಹೇಗೆ ಆಡುತ್ತಾನೆ ಎಂಬುದೇ ಅಂದು ನಮ್ಮ ಮುಂದಿದ್ದ ಜ್ವಲಂತ ಪ್ರಶ್ನೆ. ನಮ್ಮ ಆಶಯವನ್ನು ಗೇಲ್ ಹುಸಿಮಾಡಲಿಲ್ಲ. ಎಂಟು ಸಿಕ್ಸರುಗಳನ್ನು ಬಾರಿಸಿ ಎಂಭತ್ತೊಂದು ರನ್‌ಗಳನ್ನು ಪೇರಿಸಿ ನಾವೆಲ್ಲಾ ಸಮಾಧಾನದ ಉಸಿರು ಬಿಡುವಂತೆ ಮಾಡಿದ ಕ್ರಿಸ್. ಆದರೂ ಕೊನೆಯ ಘಳಿಗೆಯವರಗೆ ಆಟವನ್ನು ಎಳೆದು ಕೊನೆಯ ಬಾಲಿನಲ್ಲಿ ನಾವು ಗೆಲ್ಲುವಂತೆ ಆಯಿತು ಅಂದಿನ ಆಟ. ಅಟ ಮುಗಿದ ಮೇಲೆ ಅಂದಿನ ನಮ್ಮ ವಿಜಯಕ್ಕೆ ಮುಖ್ಯ ಕಾರಣರು ಯಾರು ಎಂಬ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಸಮರ್ಥ್ (ಉಳ್ಳಾಗಡ್ಡಿಯವರ ಅಳಿಯ) ಕ್ರಿಸ್‌ಗೇಲನ ಇನ್ನಿಂಗ್ಸೇ ಇದಕ್ಕೆ ಕಾರಣ ಎಂದು ಹೇಳಿದರೆ, ಸೀಮಾ ಡಿವಿಲಿಯರ್ಸ್‌ನ ನಾಟೌಟ್ ಇನ್ನಿಂಗ್ಸ್ ಬಗ್ಗೆ ಮೆಚ್ಚುಗೆ ತೋರಿಸಿ ಅವನ ಪರವಾಗಿ ವಾದಿಸಿದಳು. ಉಳ್ಳಾಗಡ್ಡಿಯವರ ಸರದಿ ಬಂದಾಗ ಅವರು ದೃಢ ನಿಶ್ಚಯದಿಂದ ''ಇಂದಿನ ನಮ್ಮ ಗೆಲುವಿಗೆ ಶರಲೇಖನೇ ಕಾರಣ'' ಎಂದು ಸ್ಪಷ್ಟವಾಗಿ ಹೇಳಿ ನಮಗೆಲ್ಲಾ ಅಚ್ಚರಿಯನ್ನುಂಟು ಮಾಡಿದರು.

ಅನಂತರ ಉಳ್ಳಾಗಡ್ಡಿಯವರು ತಮ್ಮ ಮಾತಿನ ಸತ್ಯಕ್ಕೆ ನೀಡಿದ ಪುರಾವೆಗಳನ್ನು ಅವರ ಧಾರವಾಡ ಭಾಷೆಯಿಂದ ಕನ್ನಡಕ್ಕೆ ತರ್ಜುಮೆ ಮಾಡಿ ಇಲ್ಲಿ ನೀಡಿದ್ದೇನೆ.

ಉಳ್ಳಾಗಡ್ಡಿ ಹೇಳಿದ್ದು:

ಇಂದು ಬೆಳಗ್ಗೆ ನಮ್ಮ ಛೀಫ್‌ರಿಂದ ಒಂದು ಕರೆ ಬಂತು. ''ಅರ್ಜೆಂಟಾಗಿ ಕೆ.ಎಸ್.ಸಿ.ಎ. ಸ್ಟೇಡಿಯಂಗೆ ಹೋಗಿ ಅಲ್ಲಿ ಶ್ರೀ.... ಅವರನ್ನು ಕಾಣು. ಏನೋ ಎಮರ್ಜೆನ್ಸಿ ಬಂದಿದೆಯಂತೆ'' ಅಂತ ಛೀಫ್ ಹೇಳಿದರು. ನಾನು ಬೆಳಗಿನ ತಿಂಡಿಯನ್ನೂ ತಿನ್ನದೇ ಅಲ್ಲಿಗೆ ದೌಡಾಯಿಸಿದೆ. ಶ್ರೀ.... ಅವರು ನನ್ನ ಬರವನ್ನೇ ಕಾಯುತ್ತಿದ್ದರು. ನನ್ನನ್ನು ನೋಡಿದ ತಕ್ಷಣ ನೇರವಾಗಿ ರಾಯಲ್ ಛಾಲೆಂಜರ್ಸ್ ಡ್ರೆಸ್ಸಿಂಗ್ ರೂಮಿಗೆ ನನ್ನನ್ನು ಕರೆದೊಯ್ದರು. ಅಲ್ಲಿ ಇದ್ದವರು ಇಬ್ಬರೇ. ವೆಟೋರಿ ಮತ್ತು ಕ್ರಿಸ್. ಕ್ರಿಸ್ ಕಂಗೆಟ್ಟಿದ್ದ. ವೆಟೋರಿ ಅವನನ್ನು ಸಮಾಧಾನ ಪಡಿಸುತ್ತಿದ್ದ. ನನ್ನನ್ನು ಪೋಲೀಸ್ ಅಧಿಕಾರಿಯೆಂದು ವೆಟೋರಿಗೆ ಪರಿಚಯಿಸಿದ ತಕ್ಷಣ ಅವನು ತನ್ನ ಸಮಸ್ಯೆಯನ್ನು ನನ್ನ ಮುಂದಿಟ್ಟ. ಕ್ರಿಸ್ ಗೇಲನ ಬ್ಯಾಟು ನಾಪತ್ತೆಯಾಗಿತ್ತು. ಬಹುಕಾಲದಿಂದ ಕಾಪಾಡಿಕೊಂಡು ಬಂದಿದ್ದ ಬ್ಯಾಟಂತೆ ಅದು. ಅದಿಲ್ಲದೇ ತನ್ನ ಆಟ ಚೆನ್ನಾಗಿರಲು ಅಸಾಧ್ಯ ಎಂದು ಕ್ರಿಸ್ ಹಲುಬುತ್ತಾ ಕುಳಿತುಬಿಟ್ಟಿದ್ದ. ನಾನು ಅಲ್ಲಿನ ಭದ್ರತಾ ವ್ಯವಸ್ಥೆಯ ಬಗ್ಗೆ ವಿಚಾರಿಸಿದೆ. ಎರಡೂ ತಂಡಗಳ ಡ್ರೆಸ್ಸಿಂಗ್ ರೂಮುಗಳಿಗೆ

ಸರ್ಪಗಾವಲಿನಂತಹ ಭದ್ರತೆಯಂತೆ. ಆತಂಕವಾದಿಗಳ ಹೆದರಿಕೆಯಿಂದ ಆಟಗಾರರನ್ನು ಹಾಗೂ ಟೀಮುಗಳ ಮೇಲ್ವಿಚಾರಕರನ್ನು ಹೊರತಾಗಿ ಇನ್ನಾರಿಗೂ ಆ ರೂಮುಗಳಿಗೆ ಪ್ರವೇಶವೇ ಇಲ್ಲವಂತೆ. ಹಿಂದಿನ ಸಂಜೆ ಕ್ರಿಸ್ ಪ್ರಾಕ್ಟೀಸ್ ಮಾಡುವಾಗ ಆ ಬ್ಯಾಟ್ ಅವನ ಬಳಿಯೇ ಇತ್ತಂತೆ.

''ರೂಮನ್ನು ಚೆನ್ನಾಗಿ ಹುಡುಕಿದ್ದೀರಾ?'' ಅಂತ ನಾನು ಪ್ರಶ್ನಿಸಿದೆ. ''ಒಂದು ಸೂಜಿ ಇದ್ದಿದ್ದರೂ ಸಿಗುತ್ತಿತ್ತು. ಅಷ್ಟು ಚೆನ್ನಾಗಿ ಹುಡುಕಿದೆವು. ಎಲ್ಲೂ ಸಿಗಲಿಲ್ಲ'' ಅಂತ ಕ್ರಿಸ್ ನುಡಿದ. ನನಗೆ ದಿಕ್ಕೇ ತೋಚದಂತಾಯಿತು. ಸಂಜೆಯೇ ಈ ಮ್ಯಾಚು ಬೇರೆ. ಶ್ರೀ.... ಅವರು ಚಿಂತಾಕ್ರಾಂತರಾಗಿ ''ಬೇಗ ಏನಾದರೂ ಮಾಡಿ ಸಾರ್'' ಅಂತ ನನ್ನನ್ನು ಅವಸರಪಡಿಸಿದರು. ಕೊನೆಗೆ ಇನ್ನೇನೂ ತೋಚದೇ ಶರಲೇಖನಿಗೆ ಫೋನ್ ಮಾಡಿದೆ. ಪಾಪ ಈತ ನನ್ನ ಕರೆಗೆ ಎಂದೂ ಇಲ್ಲ ಎಂದಿಲ್ಲ. ತಕ್ಷಣವೇ ಬರಲು ಸಿದ್ಧನೆಂದು ಹೇಳಿದ. ನಾನು ಪೋಲೀಸ್ ವ್ಯಾನನ್ನು ಕಳಿಸಿ ಅವನನ್ನು ಒಡನೆಯೇ ಕರೆಸಿಕೊಂಡೆ. ಶರಲೇಖ ನೇರವಾಗಿ ಕ್ರಿಸ್ ಬಳಿ ಹೋಗಿ, ''ಕ್ರಿಸ್ ಈ ನಾಪತ್ತೆಯಾಗಿರುವ ಬ್ಯಾಟು ಪುನಃ ನಿನಗೆ ಸಿಗುವಂತೆ ಮಾಡಲು ಶಕ್ತಿ ಮೀರಿ ಪ್ರಯತ್ನಿಸುತ್ತೇನೆ. ಆದರೆ ಅದಕ್ಕೆ ಮೊದಲು ಆ ಬ್ಯಾಟಿನ ವಿವರಗಳೇನು, ಅದು ನಿನಗೆ ಅದೇಕೆ ಅಷ್ಟು ಅಮೂಲ್ಯ, ಈ ಎಲ್ಲ ಮಾಹಿತಿಗಳನ್ನು ಒಂದು ಸಣ್ಣ ಅಂಶವೂ ಬಿಡದಂತೆ ತಿಳಿಸಬೇಕು'' ಎಂದು ಹೇಳಿ ಕ್ರಿಸ್‌ನ ಮುಂದೆ ಕಣ್ಣು ಮುಚ್ಚಿ ಧ್ಯಾನ ಮಗ್ನನಾದಂತೆ ಕುಳಿತ.

ಕ್ರಿಸ್ ತನ್ನ ಮಾತನ್ನು ಶುರುಮಾಡಿದ. ''ಈ ಬ್ಯಾಟು ನನಗೆ ಅತಿ ಪ್ರಿಯವಾಗಿರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಈ ಬ್ಯಾಟನ್ನು ನಾನು ಮೊದಲು ಬಳಸಿದ್ದು 2009ರಲ್ಲಿ. ಟ್ವೆಂಟಿ ಟ್ವೆಂಟಿ ವರ್ಲ್ಡ್ ಕಪ್ ಸಮಯದಲ್ಲಿ ನಮ್ಮ ವೆಸ್ಟ್ ಇಂಡೀಸ್ ಟೀಮು ಶ್ರೀಲಂಕಾ ಮೇಲೆ ಆಡುವಾಗ ನಾನು ಓಪನಿಂಗ್ ಆಟಗಾರನಾಗಿ ಆಡಲು ಶುರುಮಾಡಿದೆ. ಇನ್ನಿಂಗ್ಸ್ ಕೊನೆಯವರೆಗೂ ಆಡಿ ಅಜೇಯನಾಗಿ ಉಳಿಯಲು ಸಹಾಯಮಾಡಿದ ಬ್ಯಾಟು ಇದು. ಅಂದು ನಾನು ಮೊದಲ ಬಾರಿಗೆ ಬ್ಯಾಟನ್ನು ಕ್ಯಾರಿ ಮಾಡಿದೆ.''

''ಹಾಗೆಂದರೇನರ್ಥ?'' ಶರಲೇಖ ಪ್ರಶ್ನಿಸಿದ.

''ಕ್ರಿಕೆಟ್ ಆಟದ ಪ್ರಾರಂಭದ ದಿನಗಳಲ್ಲಿ ಒಂದು ತಂಡದ ಆಟಗಾರರು ಒಂದೇ ಬ್ಯಾಟನ್ನು ಬಳಸುತ್ತಿದ್ದರು. ಒಬ್ಬ ಆಟಗಾರ ಔಟ್ ಆದಮೇಲೆ ಅವನು ಬ್ಯಾಟನ್ನು ಅಲ್ಲೇ ಕ್ರೀಸಿನ ಮೇಲಿಟ್ಟು ನಿರ್ಗಮಿಸುತ್ತಿದ್ದ. ಮುಂದಿನ ಆಟಗಾರ ಆ ಬ್ಯಾಟನ್ನು ಉಪಯೋಗಿಸಿ ಔಟಾದ ನಂತರ ಬ್ಯಾಟನ್ನು ಅಲ್ಲೇ ಇಟ್ಟು ಹೋಗುತ್ತಿದ್ದ. ಒಬ್ಬ ಓಪನಿಂಗ್ ಆಟಗಾರ, ಮಿಕ್ಕ ಎಲ್ಲ ಆಟಗಾರರು ಔಟಾದರೂ ತಾನು ಕೊನೆಯವರೆಗೂ ಔಟಾಗದೇ ಉಳಿದರೆ ಅವನು ಬ್ಯಾಟನ್ನು ಕ್ಯಾರಿ ಮಾಡಿದ ಎನ್ನುತ್ತಾರೆ. ನನಗೆ 2009ರಲ್ಲಿ ಈ ಅಪೂರ್ವ ಅವಕಾಶವನ್ನು ದೊರಕಿಸಿಕೊಟ್ಟ ಬ್ಯಾಟ್ ಇದು. ಈಗ ಬೇರೆ ಬೇರೆ ಬ್ಯಾಟುಗಳಲ್ಲಿ ಆಡಿದರೂ ನನ್ನ ಕಿಟ್‌ನಲ್ಲಿ ಈ ಬ್ಯಾಟ್ ಇಲ್ಲದಿದ್ದರೆ ನನ್ನ ಆತ್ಮವಿಶ್ವಾಸವೇ ಹೋಗಿಬಿಡುತ್ತದೆ. ಏನಾದರೂ ಮಾಡಿ ನನ್ನ ಬ್ಯಾಟನ್ನು ಹುಡುಕಿಸಿಕೊಡಿ'' ಅಂತ ಕ್ರಿಸ್ ಹಲುಬಿದ.

''ನಿನ್ನ ಬ್ಯಾಟೆಂದು ಗುರುತಿಸಲು ಏನಾದರೂ ವಿಶೇಷ ಚಿನ್ಹೆಗಳಿವೆಯೇ?''

''ಹೌದು. ಮೊದಲಿಗೆ ನನ್ನ ಸಹಿ ಇದೆ. ಎರಡನೆಯದಾಗಿ ಕೆಳ ಅಂಚಿನಲ್ಲಿ ಒಂದು ಕೆಂಪು ಪಟ್ಟಿ ಇದೆ'' ಎಂದ ಕ್ರಿಸ್.

ಶರಲೇಖ ಮತ್ತು ನಾನು ಒಟ್ಟಿಗೆ ಈ ಡ್ರೆಸ್ಸಿಂಗ್ ರೂಮನ್ನು ಹುಡುಕಲು ಶುರುಮಾಡಿದೆವು. ಒಟ್ಟು ಏಳು ಆಟಗಾರರ ಕಿಟ್ಟುಗಳು ಅಲ್ಲಿದ್ದವು. ಎಲ್ಲ ಕಿಟ್ಟುಗಳನ್ನು ಪರಿಶೀಲನೆಗಾಗಿ ಆ ಆಟಗಾರರೇ ಸ್ವತಃ ತೆರೆದು ಇಟ್ಟಿದ್ದರು. ಒಂದು ಘಂಟೆ ಕೂಲಂಕುಷವಾಗಿ ಹುಡುಕಿದ ನಂತರವೂ ಬ್ಯಾಟು ಸಿಗಲಿಲ್ಲ. ಶರಲೇಖ ಅಷ್ಟರಲ್ಲಿ ಏನೋ ಹೊಳೆದಂತೆ ಆ ಏಳು ಕಿಟ್ಟುಗಳ ಆಟಗಾರರ ಹೆಸರುಗಳನ್ನು ಕೇಳಿ ಪಡೆದ. ಅನಂತರ ಹಲವು ಫೋನ್ ಕರೆಗಳನ್ನು ಮಾಡಿ ನನ್ನ ಪೋಲೀಸ್ ವ್ಯಾನನ್ನು ಎರವಲು ಪಡೆದು ಎಲ್ಲಿಗೋ ಹೊರಟ. ನಾನು ಕ್ರಿಸ್ ಮತ್ತು ವೆಟೋರಿ ಅವರುಗಳಿಗೆ ಬ್ಯಾಟನ್ನು ದೊರಕಿಸುವ ಆಶ್ವಾಸನೆ ನೀಡಿ ಅವರನ್ನು ಮತ್ತೆ ಊಟದ ವೇಳೆಗೆ ಭೇಟಿಮಾಡುವುದಾಗಿ ಹೇಳಿ ಆಫೀಸಿಗೆ ಹೊರಟೆ.

ಬೆಳಗ್ಗೆ ಹನ್ನೊಂದೂವರೆಯ ಸುಮಾರಿಗೆ ಶರಲೇಖ ಆಫೀಸಿಗೆ ಬಂದ. ಕೈಯಲ್ಲಿ ಅವನ ಪಿಟೀಲು ಪೆಟ್ಟಿಗೆ ಇತ್ತು. ''ಇದೇನಿದು?'' ಅಂತ ನಾನು ಕೇಳಿದೆ. ''ನನ್ನ ಪಿಟೀಲು, ರಿಪೇರಿಗೆ ಕೊಟ್ಟಿದ್ದೆ'' ಎಂದು ಹೇಳಿ ''ಈಗ ನಮ್ಮ ಆಟಗಾರರನ್ನು ಭೇಟಿ ಮಾಡುವ ಸಮಯ ಸ್ಟೇಡಿಯಮ್‌ಗೆ ಹೋಗೋಣ'' ಎನ್ನುತ್ತಾ ವ್ಯಾನ್ ಹತ್ತಿದ.

ಸ್ಟೇಡಿಯಂ ಸೇರಿದಾಗ ಘಂಟೆ ಹನ್ನೆರಡಾಗಿತ್ತು. ವೆಟೋರಿ, ನಾವು ಬಂದದ್ದನ್ನು ತಿಳಿದು ಕ್ರಿಸ್‌ನನ್ನೂ ಜೊತೆಯಲ್ಲಿ ಕರೆದುಕೊಂಡು ಓಡಿ ಬಂದ. ಡ್ರೆಸ್ಸಿಂಗ್ ರೂಮಿನಲ್ಲಿ ನಾವೆಲ್ಲಾ ಕುಳಿತೆವು. ಶರಲೇಖ ತನ್ನ ಪಿಟೀಲಿನ ಪೆಟ್ಟಿಗೆಯನ್ನು ಮೇಜಿನ ಮೇಲಿಟ್ಟು ಕ್ರಿಸ್‌ಗೆ ಅಭಿಮುಖವಾಗಿದ್ದ ಕುರ್ಚಿಯಲ್ಲಿ ಕುಳಿತ. ಕ್ರಿಸ್ ''ಬ್ಯಾಟ್ ಬಗ್ಗೆ ಏನಾದರೂ ಮಾಹಿತಿ ದೊರಕಿತೇ'' ಅಂತ ಕಾತರದಿಂದ ಕೇಳಿದ. ''ನನ್ನ ಪತ್ತೇದಾರಿ ಕೆಲಸವನ್ನು ಪ್ರಾರಂಭಿಸಿದ್ದೇನೆ. ಹಲವು ಕ್ಲೂಗಳು ಸಿಕ್ಕಿವೆ. ಅಷ್ಟರಲ್ಲಿ ನನ್ನ ಕೆಟ್ಟುಹೋಗಿದ್ದ ಪಿಟೀಲು ರಿಪೇರಿಯಾಗಿದ್ದ ವಿಷಯ ತಿಳಿಯಿತು. ದಾರಿಯಲ್ಲಿ ಬರುತ್ತಾ ಅಂಗಡಿಗೆ ಹೋಗಿ ಅದನ್ನು ತೆಗೆದುಕೊಂಡು ನೇರವಾಗಿ ಇಲ್ಲಿಗೆ ಬಂದೆ'' ಎಂದ ಶರಲೇಖ.

ನನಗೆ ಇದೇನು ಶರಲೇಖ ಹೀಗೆ ಅಸಂಬದ್ಧವಾಗಿ ಏನೇನೂ ಹೇಳುತ್ತಿದ್ದಾನಲ್ಲಾ ಪಿಟೀಲಿನ ಬಗ್ಗೆ ಈ ಆಟಗಾರರಿಗೇನು ಆಸಕ್ತಿ ಅನ್ನಿಸಿತು. ಅಷ್ಟರಲ್ಲಿ ಶರಲೇಖ ಕ್ರಿಸ್‌ನನ್ನು ಕುರಿತು, ''ನಿನಗೆ ಗಿಟಾರ್ ಬಾರಿಸುವ ಹವ್ಯಾಸವಿದೆ ಎಂದು ಕೇಳಿ ಬಲ್ಲೆ. ಸ್ವಲ್ಪ ನನ್ನ ಪಿಟೀಲನ್ನು ನೋಡಿ ನಿನ್ನ ಅಭಿಪ್ರಾಯ ತಿಳಿಸಲಾದೀತೇ?'' ಎಂದು ವಿನಂತಿಸಿಕೊಂಡ. ಕ್ರಿಸ್ ಶರಲೇಖನ ಮಾತಿಗೆ ಇಲ್ಲ ಎನ್ನಲಾರದೇ ಒಲ್ಲದ ಮನಸ್ಸಿನಿಂದ ಪಿಟೀಲು ಪೆಟ್ಟಿಗೆಯನ್ನು ತೆರೆದ. ಮರುಕ್ಷಣವೇ ಕ್ರಿಸ್ ''ನನ್ನ ಬ್ಯಾಟು ನನ್ನ ಬ್ಯಾಟು'' ಎಂದು ಕುಣಿದಾಡಲು ಪ್ರಾರಂಭಿಸಿದ. ಅವನ ಪ್ರಿಯವಾದ ಬ್ಯಾಟು ಆ ಪಿಟೀಲು ಪೆಟ್ಟಿಗೆಯಲ್ಲಿ ಬೆಚ್ಚಗೆ ಕುಳಿತಿತ್ತು.

ಇಷ್ಟು ಹೇಳಿದ ನಂತರ ಉಳ್ಳಾಗಡ್ಡಿಯವರು ಶರಲೇಖನ ಕಡೆ ತಿರುಗಿ ''ಈಗ ನೀವು ಅದು ಹ್ಯಾಂಗ ಆ ಬ್ಯಾಟನ್ನ ಅಷ್ಟು ಲಗೂನೆ ಪತ್ತೆ ಹಚ್ಚಿದ್ರಿ ಹೇಳ್ರಲಾ?'' ಎಂದು ಕೇಳಿದರು.

ಶರಲೇಖ ತನ್ನ ವಿವರಣೆಯನ್ನು ಪ್ರಾರಂಭಿಸಿದ.

''ಬ್ಯಾಟು ನಾಪತ್ತೆ ಎಂದು ತಿಳಿದ ತಕ್ಷಣ ಅದನ್ನು ಯಾರೋ ಕಳವು ಮಾಡಿರಬೇಕು ಎಂದು ಖಚಿತವಾಯಿತು. ಅಷ್ಟು ದೊಡ್ಡ ವಸ್ತು ಕಳೆದುಹೋಗುವುದಕ್ಕಾಗುತ್ತದೆಯೇ. ಡ್ರೆಸ್ಸಿಂಗ್ ರೂಮಿಗೆ ಯಾರನ್ನೂ ಬಿಡುವುದಿಲ್ಲ ಎಂದ ಮೇಲೆ ಇದು ಒಳಗಿನವರು ಯಾರೋ ಎಸಗಿದ ಕೃತ್ಯ ಎಂಬುದು ಸಾಬೀತಾಯಿತು. ಇನ್ನು ಯಾರು ಈ ಬ್ಯಾಟನ್ನು ಅಪಹರಿಸಿರಬಹುದು ಅಂತ ಯೋಚಿಸಿದೆ.'' ಅಷ್ಟುಹೊತ್ತಿಗೆ ಇಂತಹ ಬ್ಯಾಟುಗಳನ್ನು ಇಂಗ್ಲೆಂಡಿನ ಖ್ಯಾತ ಹರಾಜು ಮಳಿಗೆ ಸಾಥ್‌ಬೀಯವರು ಹರಾಜಿಗೆ ಇಡುವ ವಿಷಯ ನೆನಪಿಗೆ ಬಂತು. ತಕ್ಷಣ ಲಂಡನ್ನಿನಲ್ಲಿರುವ ಸ್ಕಾಟ್‌ಲೆಂಡ್ ಯಾರ್ಡಿನ ಜಿಮ್‌ಗೆ ಫೋನ್ ಮಾಡಿ ನನ್ನ ಅನುಮಾನ ತಿಳಿಸಿದೆ ಒಂದು ಅರ್ಧಘಂಟೆಯ ನಂತರ ಅವನು ನನಗೆ ಫೋನ್ ಮಾಡಿ ಶ್ರೀಲಂಕಾದಿಂದ ಇಂತಹ ಬ್ಯಾಟುಗಳು ಸರಬರಾಜಾಗುತ್ತಿರುವ ವಿಷಯ ತಿಳಿಸಿದ. ಕ್ರಿಸ್‌ನ ಟೀಮಿನಲ್ಲಿ ಇರುವ ಆಟಗಾರರ ಏಳು ಕಿಟ್‌ಗಳು ಮಾತ್ರ ಆ ರೂಮಿನಲ್ಲಿದ್ದವು. ಮಿಕ್ಕ ಆಟಗಾರರ ಕಿಟ್‌ಗಳು ಅವರುಗಳೊಂದಿಗೆ ಇದ್ದದ್ದು ತಿಳಿಯಿತು. ಅವರಲ್ಲಿ ಶ್ರೀಲಂಕಾ ಸಂಬಂಧ ಇರುವ ಆಸಾಮಿಯನ್ನು ಹುಡುಕಿ ಅವನು ಇದ್ದ ಹೋಟೆಲಿಗೆ ಹೋಗಿ ಅವನನ್ನು ವಿಚಾರಿಸಿದೆ. ಪಾಪ ಆತ ಅಮಾಯಕ. ಕ್ರಿಸ್‌ನ ಬ್ಯಾಟು ಕಳುವಾಗಿರುವುದನ್ನು ಕೇಳಿ ಬಹಳ ಪೇಚಾಡಿಕೊಂಡ. ನನ್ನ ಮುಂದೆಯೇ ಅವನು ತನ್ನ ಕಿಟ್ಟನ್ನು ತೆರೆದು ಪರೀಕ್ಷೆಗಿಟ್ಟ. ಅವನ ಪರಿಕರಗಳ ಮಧ್ಯದಲ್ಲೇ ಕ್ರಿಸ್‌ನ ಬ್ಯಾಟ್ ಕಾಣಿಸಿತು. ಆತನ ಮುಖ ಕಪ್ಪಾಯಿತು. ತನ್ನ ತಮ್ಮ ತನ್ನ ಕುಟುಂಬದ ಬ್ಲಾಕ್ ಷೀಪ್ ಎಂದು ದುಗುಡದಿಂದ ಹೇಳಿದ. ಬ್ಯಾಟನ್ನು ವಶಪಡಿಸಿಕೊಂಡು ವ್ಯಾನ್ ಹತ್ತಿ ಉಳ್ಳಾಗಡ್ಡಿ ಅವರ ಆಫೀಸಿಗೆ ಹೊರಟೆ. ದಾರಿಯಲ್ಲಿ ಸ್ವಲ್ಪ ನಾಟಕೀಯವಾಗಿರಲಿ ಅಂತ ಮನೆಗೆ ಹೋಗಿ ಈ ಪಿಟೀಲು ಪೆಟ್ಟಿಗೆಯನ್ನು ತೆಗೆದುಕೊಂಡು ಬಂದೆ. ಕ್ರಿಸ್‌ನ ಆನಂದ ನೋಡಿದ ತಕ್ಷಣ ಅವನ ಆಟ ಇಂದು ಸಂಜೆ ಚೆನ್ನಾಗಿರುತ್ತೆ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇರಲಿಲ್ಲ. ಶ್ರೀ....ಯವರು ಬಹು ವಿಶ್ವಾಸದಿಂದ ಉಳ್ಳಾಗಡ್ಡಿ ಅವರನ್ನೂ ನನ್ನನ್ನೂ ನಮ್ಮ ಬಂಧು ಮಿತ್ರರೊಂದಿಗೆ ವಿ.ಐ.ಪಿ. ಬಾಕ್ಸ್‌ಗೆ ಆಹ್ವಾನಿಸಿದರು.''

''ಓಹೋ ಈಗ ಅರ್ಥವಾಯಿತು, ಅವನು ಯಾಕೆ ಹಾಗೆ ಆಟ ಆಡದೇ ಸಪ್ಪಗೆ ಕೂತಿದ್ದ ಅಂತ. ಅದಿರಲಿ ನಮ್ಮನ್ನೆಲ್ಲಾ ಯಾಕೆ ವಿ.ಐ.ಪಿ. ಬಾಕ್ಸ್‌ಗೆ ಕರೆದೊಯ್ಯಲಿಲ್ಲಾ, ಛೇ ಎಂತಹ ಗೋಲ್ಡನ್ ಆಪರ್ಚ್ಯುನಿಟಿ ಮಿಸ್ ಆಯಿತು'' ಅಂತ ಸೀಮಾ ಆಕ್ಷೇಪಿಸಿದಳು.

''ಅಲ್ಲಿ ಇಂತಹ ದಿವಿನಾದ ಮೆಣಸಿನಕಾಯಿ ಭಜಿ ಸಿಗುತ್ತಿರಲಿಲ್ಲವಲ್ಲಾ'' ಎಂದ ಶರಲೇಖ. ಅವನ ಮಾತು ನನಗೂ ಸರಿ ಎನ್ನಿಸಿತು.

✵

# ಐಪಿಎಲ್ ಮತ್ತು ಆರ್‌ಎಂಎಲ್

**- ಇ.ಆರ್. ರಾಮಚಂದ್ರನ್**

**ಐ**ಪಿಎಲ್ ಬಂತೂಂದ್ರೆ ಬೇರೆ ಎಲ್ಲಾ ಎಂಟರ್‌ಟೈನ್‌ಮೆಂಟ್ ಠುಸ್ಸು. ಸಿನಿಮಾ, ಸರ್ಕಸ್ ಎಲ್ಲಾ ನೊಣಾ ಹೊಡೀತಾ ಕೂತಿವೆ. ನಮ್ಮೆಲ್ಲರ ಅಜ್ಜೀಕಾಲದ ರಾಮನವಮಿ ಮ್ಯೂಸಿಕ್ ಕಛೇರಿಯೊಂದೇ ಅದಕ್ಕೆ ಸರಿಸಮನಾಗಿ ಟೊಂಕ ಕಟ್ಟಿ ನಿಂತಿದೆ. ಐಪಿಎಲ್ ಜೊತೆ ಈಗ ರಾಮನವಮಿ ಮ್ಯೂಸಿಕ್ ಲೀಗ್ - ಆರ್ ಎಂ ಎಲ್ - ಸೇರಿಕೊಂಡಿದೆ.

ಎರಡೂ ಸುಮಾರು ಹೆಚ್ಚು ಕಡಿಮೆ ಬೆವರು ಕಿತ್ತುಕೊಂಡು ಬೆಂದು ಹೋಗುವ ಬೇಸಿಗೆಯಲ್ಲೇ ಬರೋದು. ಎರಡೂ ಸುಮಾರು 3 ಘಂಟೆಗಳ ಕಾಲ. ಮಳೆ ಬಂದರೆ ಆರ್‌ಎಂಎಲ್ ನಲ್ಲಿ ಪೈಸ ವಾಪಸ್ಮಾಡಲ್ಲ, ಐಪಿಎಲ್ ನಲ್ಲಿ ಡಕ್ವರ್ತ-ಲೂಯಿಸ್, ಲೂಸು ಅಂತ ಏನೇನೋ ಹೇಳಿ ಮ್ಯಾಚ್ ಹತ್ತು ಓವರನ್ನಾದರೂ ಆಡಿಸ್ತಾರೆ. ಆರ್‌ಎಂಎಲ್‌ನಲ್ಲಿ ಚಪ್ಪರ ಕಿತ್ಕೊಂಡ್ಹೋಗೋ ಹಾಗೆ ಮಳೆ ಬಂದ್ರೆ ಪ್ರೋಗ್ರಾಂ ಕ್ಯಾನ್ಸಲ್.

**ರಾಮನವಮಿಯಲ್ಲಿ ನಡೆಯುತ್ತಿರುವ ಕಛೇರಿಗಳಲ್ಲಿ ಐಪಿಎಲ್ ಎಫೆಕ್ಟ್ ಹೇಗೆ ಬಂತು?**

ವ್ಯತ್ಯಾಸ ಇನ್ನೊಂದೆರಡಷ್ಟೆ. ಪವರ್ ಕಟ್ ಆದಾಗ, ಸಂಗೀತಗಾರರು ಇನ್ನಷ್ಟು ಬೆವರು ಸುರಿಸಿ ಗಂಟಲು ಕೀಲರ್ಜು ಆಗೋತನಕ ಹಾಡ್ತಾರೆ. ಪಿಟೀಲು ಕುಯ್ದು ಕುಯ್ದು ಸುಸ್ತಾಗಿ ತೊಪ್ಪೆ ಆಗ್ತಾರೆ. ಮೃದಂಗ ಬಾರ್ಸಿ ಬಾರ್ಸಿ ಬೆಟ್ಟು ಬೆಂಡೆದ್ದು ಹೋಗಿರುತ್ತೆ. ಶ್ರೋತೃಗಳು ಬೀಸಣಿಗೆ, ಇಲ್ಲ ಕಾರ್ಯಕ್ರಮದ ಕಾರ್ಡನ್ನು ಬೀಸಣಿಗೆ ಹಾಗೆ ಮಡಿಸಿ ಸ್ಕಾಮ್‌ಗೆ ಶಾಪ ಹಾಕುತ್ತಾ ಬೀಸಿಕೊಳ್ಳುವುದಕ್ಕೆ ಶುರು?

ಐಪಿಎಲ್‌ಗೆ ಪವರ್ ಕಟ್ಟೇ ಇಲ್ವಲ್ಲ! ಕುಂಬ್ಳೆ, ಶ್ರೀನಾಥ್ ಯಾವಾಗಲೂ 'ಮಾಮೂಲಾಗಿರುವ' 500 ಪುಗಸಟ್ಟೆ ವಿಐಪಿ ಪಾಸ್ ಕೊಡಲ್ವೋ ಆವಾಗ್ಲೇ ಪವರ್ ಕಟ್, ವಾಟರ್ ಕಟ್ ಮತ್ತು ಬಿಬಿಎಂಪಿ ಅವರ ಕೆಂಗಣ್ಣು.

ಆರ್‌ಎಂಎಲ್ ನಲ್ಲಿ ಈಗ 'ಚಿಯರ್ ಗರ್ಲ್ಸ್' ಇಲ್ಲ. ಮುಂದೆ ಬರ್ತಾರೋ ನೋಡ್ಬೇಕು.... ಬರಲಿ ಅಂತಾ ಎಲ್ಲಾರಿಗೂ ಆಸೆ.

ಈಗ ರಾಮನವಮಿಯಲ್ಲಿ ನಡೆಯುತ್ತಿರುವ ಕಛೇರಿಗಳಲ್ಲಿ ಐಪಿಎಲ್ ಎಫೆಕ್ಟ್ ಹೇಗೆ ಬಂತು? ಬನ್ನಿ ನೋಡೋಣ...

ಸಾಮಾನ್ಯವಾಗಿ ಪ್ರತಿ ವರ್ಷ ಮೊದಲನೇ ದಿನದ ಆರ್‌ಎಂಎಲ್ ಕಾರ್ಯಕ್ರಮ ಮಂಗಳವಾದ್ಯ ಹಾಗೂ ಇತ್ತೀಚಿಗೆ ಪಾಪ್ಯುಲರ್ ವಾದಕ ಮತ್ತು ವಾದನ, ಕದ್ರಿ ಗೋಪಾಲನಾಥರ ಸ್ಯಾಕ್ಸಫೋನ್‌ನಿಂದಲೇ ಶುರುವಾಗುತ್ತೆ.

ಈ ವರ್ಷ ಕದ್ರಿ ಮತ್ತು ಅವರ ಪಕ್ಕವಾದಕಿ ಪಿಟೀಲು ಕನ್ಯಾಕುಮಾರಿ ಕಛೇರಿಗೆ ಬಂದಾಗ ಎಲ್ಲರಿಗೂ ಅಚ್ಚರಿಯಾಗುವಂತೆ ಇಬ್ಬರೂ ಕೆಂಪು ಮತ್ತು ನೀಲಿ ಬಟ್ಟೆ ತೊಟ್ಟಿದ್ದರು. ಕದ್ರಿ ಕೆಂಪು

ಪಂಚೆ ಮೇಲೆ ನೀಲಿ ಕುರ್ತ ಹಾಕಿದ್ರೆ, ಕನ್ಯಾಕುಮಾರಿ ಕೆಂಪು ಸೀರೆ, ನೀಲಿ ಬ್ಲೌಸ್ನಲ್ಲಿ ಬಂದರು. 'ನಾವು ಆರ್‌ಸಿಬಿ ಅಂಬಾಸೆಡರ್ಸ್, ವಿಜಯ್ ಮಲ್ಯ ಅವರೇ ಖುದ್ದಾಗಿ ನಮ್ಮನ್ನು ಆರ್‌ಸಿಬಿಗೆ ಇನ್ವೈಟ್ ಮಾಡಿದ್ರು. ಇವತ್ತು ಆರ್‌ಸಿಬಿ ಮ್ಯಾಚಿದೆ. ನಮದೊಂದು ರಿಕ್ವೆಸ್ಟ್, ಎರಡೆರಡು ಹಾಡಿನ ಮಧ್ಯೆ ನಮಗೆ ಒಂದೂವರೆ ನಿಮಿಷ 'ಸ್ಟ್ರಾಟೆಜಿ ಬ್ರೇಕ್' ಬೇಕು . ನಾವು ಸ್ಕೋರ್ ಎಷ್ಟೂಂತ ತಿಳ್ಕೊಳ್ತಿವಿ. ನಮ್ಮಿಂದ ಏನಾದ್ರು ಐಡಿಯಾ ಇದ್ರೆ ಕೋಚ್ ಜೆಂಕಿನ್ಸ್‌ಗೆ ನೇರವಾಗಿ ಮೊಬೈಲ್‌ನಲ್ಲಿ ತಿಳಿಸಿ ಅಂತ ಮಲ್ಯ ಹೇಳಿದ್ದಾರೆ. ಆದಕ್ಕೆ ಅವಕಾಶ ಮಾಡಿಕೊಡಬೇಕು. ನಮಗೆ ಬೇರೇನೂ ಬೇಡ. ಬಾಯಾರಿಕೆ ಆದ್ರೆ ಮಲ್ಯಾ ಅವರೇ ಅದಕ್ಕೆ ಅರೇಂಜ್ ಮಾಡಿದ್ದಾರೆ. ನಮ್ಮ ಹತ್ರಾನೆ ಇಟ್ಟುಕೊಂಡಿದೀವಿ' ಅಂದ್ರು.

'ಮಲ್ಯಾ ಅವರು ನಮಗೂ ಅರೇಂಜ್ ಮಾಡ್ಲಿಲ್ವಾ'? ಅಂತ ಕೇಳಕ್ಕೆ ಹೊರಟ ಸೆಕ್ರೆಟರಿ ಯಾಕೋ ಅಲ್ಲಿಗೇ ನಿಲ್ಲಿಸಿಬಿಟ್ರು!

ಇನ್ನೊಂದು ರಾಮನವಮಿ ಕಛೇರೀಲಿ ಹಾಡ್ತಾ ಇದ್ದ ಫೇಮಸ್ ವೋಕಲಿಸ್ಟ್ ಉಣ್ಣಿಕೃಷ್ಣನ್ ಕಲ್ಯಾಣಿ ಆಲಾಪನೆ ಮಧ್ಯೆ ನಿಲ್ಲಿಸಿ, 'ಎನಕು ಸರಿಯಾ ಪಾಡ ಮುಡಿಯಿಲೆ ಇನ್ನಿಕಿ... ರೊಂಬ ಟೆನ್ಷನ್... ಚೆನ್ನೈ ಸೂಪರ್ ಕಿಂಗ್ಸ್ ಸ್ಕೋರ್ ಎವಳ? ಕೊಂಚೊ ಟಿವಿ ಪಾರ್ತು ಶೊಲ್ಲುಂಗೋ.. ಧೋನಿ ಇರುಕಾನಾ ಇಲ್ಲೆ ಔಟಾ?.......' ಅಂದರು. ಉಣ್ಣಿಕೃಷ್ಣನ್ ಸ್ವತಃ ಕ್ರಿಕೆಟ್ ಆಟಗಾರರಾಗಿದ್ದರು ಮತ್ತು ಈಗಲೂ ಕ್ರಿಕೆಟಿನ ಹುಚ್ಚು ಹೋಗಿಲ್ಲ ಎಂದು ಒಮ್ಮೆ ಹೇಳ್ಕೊಂಡಿದಾರೆ.

ತಕ್ಷಣವೇ ಅಲ್ಲಿ ಇಲ್ಲಿ ಓಡಿ ಹೋಗಿ ಅವರಿಗೆ ಕಾಣುವ ಹಾಗೆ 14'' ಟಿವಿ ಇಟ್ಟಾಗ, 'ವಾಲ್ಯೂಮ್ ವೇಂಡ.. ಪಿಕ್ಚರ್ ಪೋರುಂ' ಅಂದರು. ಸಿಎಸ್‌ಕೆ ಗೆದ್ದ ಖುಶಿಯಲ್ಲಿ ರಾತ್ರಿ 11 ಘಂಟೆ ತನಕ ಅವರಿಗೆ ಗೊತ್ತಿದ್ದ ಎಲ್ಲಾ ರಾಗಗಳಲ್ಲಿ 'ರಾಗಂ ತಾನಂ ಪಲ್ಲವಿ' ಹಾಡಿದರು. ಕೊನೆಗೆ ರವಿ ಶಾಸ್ತ್ರಿ ಮ್ಯಾಚ್ ಪ್ರೆಸೆಂಟೇಷನ್‌ಗೆ ಬಂದಾಗಲೇ ಅವರ ಪವಮಾನ ಶುರು!

ಅದಕ್ಕೆ ಮುಂಚೆ ಹೈದರಾಬಾದ್ ಬ್ರದರ್ಸ್ ಎಂದು ಫೇಮಸ್ ಆಗಿರುವ, ರಾಘವಾಚಾರಿ, ಶೇಷಾಚಾರಿ ತಮ್ಮ ಕಛೇರಿಗೆ ಇಬ್ಬರೂ ನೀಲಿ ಪಂಚೆ, ನೀಲಿ ಜುಬ್ಬ ಹಾಕಿಕೊಂಡು ಬಂದರು. ನಾವು ಕೇಳುವುದಕ್ಕೆ ಮುಂಚೆಯೇ ರಾಘವಾಚಾರಿ, 'ಮೇಮು 'ಹೈದ್ರಾಬಾದ್ ಚಾರ್ಜರ್ಸ್' ಫ್ಯಾನ್ಸ್. ದಾನ್ಕೇ ಬ್ಲೂ ಡ್ರೆಸ್ ವೇಸಿನ್ನಾಮು. ಪೋನ ಸಂವತ್ಸರಾಲೊ ಮಾ ಟೀಮ್ ಕ್ಯಾಪ್ಟನ್ ಆಡಮ್ ಗಿಲ್ಕ್ರಿಸ್ಟ್ ಉನ್ನಪ್ಪುಡು ಬಾಗ ಆಡಿನ್ನಾಮು. ಅಯ್ತೆ ಚಾಂಪಿಯನ್ ಪಟ್ಟಮ್ ದೊರಕಲೇದು. ಇಪ್ಪುಡು ಸಂಗಕಾರ ಕ್ಯಾಪ್ಟನ್ಸೀಲೊ ಈ ಸಂವತ್ಸರಂ ಟ್ರೋಫಿ ಮನಕು ಒಸ್ತಿಂದಿ ಅನ್ಕೊನ್ನಾಮು...' ಅಂದರು.

ಈಗೀಗ ರಾಮನವಮಿಯಲ್ಲಿ ಕಚೇರಿ ಕೊಡುವವರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗಳೂ ಸೇರಿರುತ್ತಾರೆ. ಅವರುಗಳು ಬಂದು ಸಭಾಂಗಣದಲ್ಲಿ ಕೂತರೆ ಅವರ ಸುತ್ತ ಮುತ್ತ ಸಣ್ಣ ಪುಟ್ಟ ಉಪಕರಣಗಳೇ! ಮಿನಿಯೇಚರ್ ಮೈಕ್ಸ್, ಇಯರ್ ಫೋನ್ಸ್, ಫಳಫಳ ಹೊಳೆಯುವ ಎಲ್‌ಇಡಿ, ಎಲ್‌ಸಿಡಿ ಲೈಟ್‌ಗಳು.

ಮೊನ್ನೆ ಪಟ್ಟಾಭಿರಾಮ್ರರ ಸಂಗೀತದಲ್ಲಿ ಘಟಂನ ಘಟಾನುಘಟಿಯಾದ ಬೆಂಗಳೂರ್ ಮಂಜುನಾಥರ ಶಿಷ್ಯ – ಸುಮಾರು ವಯಸ್ಸಾದವರೊಬ್ಬರು – ಸ್ಟೇಜಿಗೆ ಹತ್ತಿದವರು ತಕ್ಷಣವೇ

ಹೌಹಾರಿ ಅಲ್ಲಿಂದ ಜಿಗಿದು ಬಿಟ್ಟರು. ಅಲ್ಲಿ ಹೊಳೆಯುವ ಉಪಕರಣಗಳನ್ನು ನೋಡಿ ಟೆರರಿಸ್ಟು ಟೈಮ್ ಬಾಂಬ್ ಇಟ್ಟಿದ್ದಾರೋ ಎಂದು ಅವರಿಗೆ ಗಾಬರಿ! ಬಹಳ ಹೊತ್ತು ಪುಸಲಾಯಿಸಿದ ಮೇಲೆ ಒಂದು ಕಂಡಿಷನ್ ಮೇಲೆ ಸ್ಟೇಜ್ ಹತ್ತುವುದಕ್ಕೆ ಒಪ್ಪಿಕೊಂಡರು. ಅವರ ಪಕ್ಕದಲ್ಲಿ ರಾಮಸೇವಾಮಂಡಲಿಯ ಕಾರ್ಯದರ್ಶಿಯೂ ಮೂರು ಘಂಟೆ ಕೂರಬೇಕಾಯಿತು!

ಪ್ರತಿ ವರ್ಷ ಹೊಸ ಹೊಸಾ ಉಪಕರಣಗಳು ಬರ್ತಾ ಇವೆ ಸ್ಟೇಜಿನ ಮೇಲೆ. ಮುಂದೆ, ತಂಬೂರಿಯನ್ನು ಅವರೇ ರೀ-ಡಿಸೈನ್ ಮಾಡಿ ಅವರಿಗೆ ಬೇಕಾದ ಎಲ್ಲಾ ಸಾಮಾನುಗಳೂ, ಅಂದರೆ ಐ-ಪ್ಯಾಡ್, ಐ-ಫೋನ್ ಮುಂತಾದವು ಅದರಿಂದಲೇ ಬರುವ ಹಾಗೆ ಮಾಡ್ಕೋತಾರೆ ಅಂತ ಅನ್ಸುತ್ತೆ.

ತಂಬೂರೀಲಿ ಬೇರೆ ಬೇರೆ ಬಿರಟೆಗಳಿರುತ್ತವೆ. ಅದರಲ್ಲಿ ಇವರು ಐ-ಪ್ಯಾಡ್, ಐ-ಫೋನ್ ಸ್ಕ್ರೀನ್‌ಗಳು, ಆಪ್ಸ್, ಹಾಕಿಕೊಂಡು, ವೈಲಿನ್ನವನು 'ತನಿ' ಆಲಾಪನೆ ಬಾರಿಸುವಾಗ, ತಮಗೆ ಬೇಕಾದ ಪ್ರೋಗ್ರಾಂಗಳು ನೋಡಬಹುದು. ಸ್ನ್ಯಾಕ್ಸ್ ಬೇಕೆಂದರೆ, ವಾತಾಪಿ, ಇಲ್ವಲರ ಹಾಗೆ ತಂಬೂರಿಯ ಹೊಟ್ಟೆಯಿಂದಲೇ ಕಲ್ಸಕ್ರೆ, ಮೆಣಸು ತೊಗೋಬೋದು; ಮೂಡಿದ್ದವರಿಗೆ ಸುಬ್ಬಮ್ಮನ ಅಂಗಡಿಯ ಹುರಿಗಾಳು, ಮಯ್ಯಾ ಅವರ ತೇಂಗೋಳು ಕೂಡಾ ಸ್ಟೋರ್ ಮಾಡಿ ಅಲ್ಲೇ ಉದುರಿಸ್ಕೋಬಹುದು !

ಐಪಿಎಲ್‌ನಲ್ಲಿ ಆಟಗಾರರನ್ನು ಹೋಟಲ್ನಿಂದ ಸ್ಟೇಡಿಯಮ್ ಮತ್ತೆ ವಾಪಸ್ಸು ಹೋಟೆಲಿಗೆ ಕರೆದುಕೊಂಡು ಹೋಗಲು ಅವರದೇ ಸ್ಪೆಷಲ್ ಬಸ್ಸುಗಳಿವೆ. ಕ್ರಿಕೆಟ್ ಫ್ಯಾನ್ಸಿಗೂ ಬಹಳ ಅನುಕೂಲ ಮಾಡಿಕೊಟ್ಟಿದ್ದಾರೆ.

ಆರ್‌ಎಂಎಲ್ ನಲ್ಲಿ ಈ ತರಹದ ವ್ಯವಸ್ಥೆ ಶ್ರೋತೃಗಳಿಗೆ ಬಹಳ ಅವಶ್ಯಕತೆ ಇದೆ. ಇಲ್ಲಿ ಬೇಕಾಗಿರುವುದು ಕಲಾಭಿಮಾನಿಗಳನ್ನು ಮನೆಗೆ ಮುಟ್ಟಿಸುವುದು ಹೇಗೆ ಅಂತ. ಸುಮಾರು ಎಲ್ಲಾ ಊರುಗಳಲ್ಲೂ ರಾತ್ರಿ ಎಂಟು ಘಂಟೆ ಆದಮೇಲೆ ಬೀದಿಯಲ್ಲಿ ಆಟೋರಿಕ್ಷಾದವರದೇ ದರ್ಬಾರು, ರೋಪು! ಯಾಕೋ ಗೊತ್ತಿಲ್ಲ.... ಟ್ರಾಫಿಕ್ ಪೊಲೀಸಿನವರೂ ಇಲಿ ಮರಿಗಳ ಹಾಗೆ ಹೆದರಿ ಎಲ್ಲೋ ಬಚ್ಚಿಟ್ಟುಕೊಂಡು ಕೂತಿರುತ್ತಾರೆ! ಸಾರಿಗೆ ಬಸ್ಸುಗಳು ಕೂಡಾ ಮಲಗಿಬಿಡುತ್ತವೆ! ಆಟೋ ಚಾಲಕರು ಕೇಳಿದ್ದೇ ಬೆಲೆ; ಹೋಗಿದ್ದೇ ಡೆಸ್ಟಿನೇಷನ್. ಅದಕ್ಕೆ ಟಿವಿಎಸ್ ಅಥವಾ ಇನ್ಫೋಸಿಸ್‌ನಂಥ ಕಂಪನಿಗಳು ಕಛೇರಿಯಾದ ಮೇಲೆ ಒಂದೆರೆಡು ಸ್ಪೆಷಲ್ ಬಸ್ಸು ಏರ್ಪಾಡು ಮಾಡಿ, ಶ್ರೋತೃಗಳನ್ನು ಅವರವರ ಮನೆಯ ಹತ್ತಿರದ ಮೈನ್ ರೋಡಿನಲ್ಲಿ ಡ್ರಾಪ್ ಕೊಟ್ಟರೆ ಇದು ಕೂಡ ಕಲೆಗೆ ಅವರು ಮಾಡುವ ದೊಡ್ಡ ಸೇವೆಯಾಗುತ್ತೆ. ಮನೆಯವರಿಗೂ, 'ಅಬ್ಬ! ಸುರಕ್ಷಿತವಾಗಿ ಮನೆಗೆ ಬಂದರಲ್ಲ' ಅಂತ ಸಮಾಧಾನ. ರಾಮಸೇವಾಮಂಡಲಿಯವರಿಗೂ ಆಸಾಮಿ ನಾಳೆ ಬಂದೇ ಬರ್ತಾನೆ ಅನ್ನುವ ನಂಬಿಕೆ ಬರುತ್ತೆ.

ಅಭಿಮಾನಿಗಳಿದ್ದರೇನೆ ಕಲೆಯೋ ಕ್ರಿಕೆಟ್ಟೋ ನಡೆಯೋದು / ಓಡೋದು... ಐಪಿಎಲ್ ಇದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದೆ. ಆರ್‌ಎಂಎಲ್‌ಗೂ ಇದು ಬಂದರೆ ಚೆನ್ನಾಗಿರುತ್ತೆ.

# ಒಂದು ಬಹಿರಂಗ ಪತ್ರ

**ಮೈ** ಡಿಯರ್ ಕಾರ್ಪೊರೇಟರ್ ಅಂಕಲ್,

ತುಂಬಾ ವಿಷಾದದಿಂದ ಈ ಪತ್ರ ಬರೆಯುತ್ತಿದ್ದೇನೆ ಅಂಕಲ್. ಈ ಐಪಿಎಲ್ ಕ್ರಿಕೆಟ್‌ವಾಲಾಗಳು ನಿಮಗೆಲ್ಲ ಹೀಗೆ ಮಾಡಬಾರದಿತ್ತು. ನೀವೆಲ್ಲ ಕೇಳಿದ್ದು ಯಃಕಶ್ಚಿತ್ ವಿಐಪಿ ಪಾಸ್. ಅದನ್ನು ನಿರಾಕರಿಸುವ ದಾಷ್ಟ್ಯತನವನ್ನು ಅವರು ತೋರಿಸಿದ್ದಾರೆ. ಹೀಗಾಗಬಾರದಿತ್ತು.

ಅಂಕಲ್, ಅವರನ್ನು ಕ್ಷಮಿಸಿ. ಅವರೇನು ಮಾಡುತ್ತಿದ್ದಾರೆಂದು ಅವರಿಗೇ ಗೊತ್ತಿಲ್ಲ. ನಮ್ಮ ಪುರಪಿತೃಗಳನ್ನು ಹೀಗೆ ಅವರು ನಡೆಸಿಕೊಳ್ಳುವುದು ಸಲ್ಲ ಎಂದೇ ನನ್ನ ಭಾವನೆ. ಅವರು ನಿಮಗೆ ಆರ್ಡಿನರಿ ಪಾಸ್‌ಗಳನ್ನು ಕೊಟ್ಟಿರುವುದು ಇನ್ನಷ್ಟು ಖೇದಕರ ಸಂಗತಿ. ಅದು ಉಪ್ಪಿಗೇ ಗಾಯ ಸವರುವಂತಹ ಕೃತ್ಯ. ನೀವೇ ನಿಮ್ಮ ಆಸ್ತಿಯನ್ನು (ಭಾಗಶಃ) ಘೋಷಿಸಿರುವಂತೆ ನೀವೆಲ್ಲ ಕೋಟ್ಯಾಧಿಪತಿಗಳು (ಪುನಿತ್ ಹೇಳುವಂತೆ ಕೋಟ್ಯಾಧಿಪತಿಗಳಲ್ಲ ಇರಲಿ). ಹಾಗಾಗಿ ನಿಮ್ಮಂತಹ ಕೋಟ್ಯಾಧಿಪತಿಗಳನ್ನು ವೆಂಕಯ್ಯ, ನಾಣಯ್ಯ, ಸೀನಯ್ಯ ಮುಂತಾದವರ ಜತೆ ಕೂರಿಸುವುದು ಎಂದರೇನು?

ಈ ಕೋಟ್ಯಾಧಿಪತಿಗಳು ತಮ್ಮ ಟಿಕೆಟ್ ತಾವೇ ಕೊಳ್ಳಬಾರದೇಕೆ? ಎಂದು ನನ್ನ ಗೆಳೆಯನೊಬ್ಬ ಒಂದು ಮೂರ್ಖ ಪ್ರಶ್ನೆ ಕೇಳಿದ. ನಮ್ಮೆಲ್ಲರ ಜನಪ್ರತಿನಿಧಿಗಳಿಗೆ ಅತ್ಯಂತ ಗೌರವಾದರಗಳನ್ನು ತೋರಿಸಿ ಅವರು ಏನೇ ಕೇಳಿದ ತಕ್ಷಣ ಕೊಡುವುದು ಶಿಷ್ಟಾಚಾರ ಎಂದು ಅವನ ಬಾಯಿ ಮುಚ್ಚಿಸಿದೆ. ಅವನು ಬಾಯಿ ಇನ್ನೂ ತೆರೆದೇ ಇಲ್ಲ; ಟಿಕೆಟ್‌ಗಾಗಿ ಇನ್ನೂ ಬಿರು ಬಿಸಿಲಿನಲ್ಲಿ ಕ್ಯೂನಲ್ಲಿ ನಿಂತಿದ್ದಾನೆ. ನಿಲ್ಲಲಿ ಬಿಡಿ. ಮುಂದೊಂದು ದಿನ ಈ ನಗರದ ಪೂಜ್ಯ ಮಹಾಪೌರರಾಗುವಂತಹ ಗೌರವಾನ್ವಿತ ಕಾರ್ಪೊರೇಟರ್‌ಗಳ ವಿರುದ್ಧ ಹೀಗೆ ಮಾತನಾಡಿದ್ದಕ್ಕೆ ಅದು ತಕ್ಕ ಶಿಕ್ಷೆ ಎಂದೇ ನಮ್ಮ ಭಾವನೆ. ಸರಿ ಅಲ್ಲವೆ ಅಂಕಲ್?

ಐಪಿಎಲ್ ಪಂದ್ಯಗಳನ್ನು ನೋಡುವ ಎಲ್ಲ ಅರ್ಹತೆಗಳು ನಿಮಗಿವೆ. ಏಕೆಂದರೆ ಅವುಗಳಿಗಿಂತ ಹೆಚ್ಚು ಮನರಂಜನೆ ಕೊಡುವಂತಹ ಕ್ರೀಡೆ ಇನ್ನೊಂದಿಲ್ಲ. ನಿಮಗೋ ಅದೆಷ್ಟು ಕೆಲಸಗಳಿರುತ್ತವೆ. ಕಂಟ್ರಾಕ್ಟರ್ ಮತ್ತು ಅಧಿಕಾರಿಗಳ ಜತೆ ಟೆಂಡರ್‌ಗಳ ಬಗ್ಗೆ ಚರ್ಚಿಸಿ ಪರ್ಸೆಂಟೇಜ್ ನಿರ್ಧರಿಸುವ ಹೊತ್ತಿಗೆ ನೀವು ಹೈರಾಣಾಗಿರುತ್ತೀರಿ. ಆ ಸಮಯದಲ್ಲಿ ಚಿಯರ್ ಗರ್ಲ್‌ಯುಕ್ತ ಐಪಿಎಲ್ ಪಂದ್ಯ ನೋಡುತ್ತಾ ನೀವು ರಿಲಾಕ್ಸ್ ಮಾಡಿಕೊಳ್ಳಬಹುದು. ಅದಕ್ಕೆ ವಿಐಪಿ ಪಾಸ್ ಅತ್ಯಗತ್ಯ. ಅಂದಹಾಗೆ ಈ ಮೀಟಿಂಗ್‌ಗಳಿಗೆ ಹೋಗುವಾಗ ಹುಷಾರಾಗಿ ಡ್ರೈವ್ ಮಾಡಿ. ರಸ್ತೆಯಲ್ಲಿ ಅನೇಕ ಗುಂಡಿಗಳಿರುತ್ತವೆ. ಅವುಗಳನ್ನು ನೀವು ನೋಡಿಲ್ಲದೆ ಇರಬಹುದು.

ಪಾಸ್ ಸಿಕ್ಕಿದ್ದರೆ ನೀವು ಅದನ್ನು ನಿಮ್ಮ ಕ್ಷೇತ್ರದ ಮಂದಿಗೆ ಕೊಡಲು ಬಯಸಿದ್ದೀರಿ ಎಂದು ಕೇಳಿದೆ. ಆದರೆ ಅಂಕಲ್, ನಿಮಗೆ ಸಿಗುವ ಅಥವಾ ಸಿಗಬಹುದಾಗಿದ್ದ ಎರಡು ಪಾಸ್‌ಗಳನ್ನು ಅಷ್ಟು ಮಂದಿಯಲ್ಲಿ ಯಾರಿಗೆ ಹಂಚುತ್ತೀರಿ? ಹೇಗೆ? ನೀವೇ ಇಬ್ಬರನ್ನು ಆಯ್ಕೆ ಮಾಡಿದರೆ ನಿಮಗೆ ಚುನಾವಣಾ ಟಿಕೆಟ್ ತಪ್ಪಿದರೆ ಎಷ್ಟು ನಿರಾಶೆ ಆಗುತ್ತದೆಯೋ ಅಷ್ಟು ನಿರಾಶೆ ನಿಮ್ಮ ಕ್ಷೇತ್ರದ ಐಪಿಎಲ್ ಕ್ರಿಕೆಟ್ ವಂಚಿತರಿಗೆ ಆಗುತ್ತದೆ. ಆದುದರಿಂದ ನನ್ನ ಸಲಹೆ ಏನೆಂದರೆ ನೀವು ಇಂತಹ ಪಾಸ್‌ಗಳನ್ನು ಪಾರದರ್ಶಕವಾಗಿ ಹರಾಜು ಹಾಕಿ, ಬಂದ ದುಡ್ಡನ್ನು ಏನು ಮಾಡಬೇಕು ಎಂಬುದನ್ನು ನೀವೇ ನಿರ್ಧರಿಸಿ. ಹಣಕಾಸು ವಿಷಯಗಳಲ್ಲಿ ನಾನು ಮೂಗು ತೂರಿಸುವುದು ಸರಿಯಲ್ಲ.

ಅಂಕಲ್, ಅಂದಹಾಗೆ ನಾನೂ ಒಬ್ಬ ಕಾರ್ಪೊರೇಟರ್ ಆಗಲು ಬಯಸಿದ್ದೆ. ಆದರೆ ಐಪಿಎಲ್ ಪಂದ್ಯಗಳಿಗೆ ವಿಐಪಿ ಪಾಸ್ ಸಿಗಲಾರದು ಎಂದಿರುವುದರಿಂದ ನನ್ನ ಆ ಆಸೆ ಕಮರಿದೆ. ಅದರ ಬದಲು ಈಗಿನಿಂದಲೇ ಹಣ ಕೂಡಿಡುತ್ತಾ ಬಂದು ಮುಂದಿನ ಐಪಿಎಲ್‌ಗೆ ನಾನೇ ಟಿಕೆಟ್ ಕೊಳ್ಳಲು ನಿರ್ಧರಿಸಿದ್ದೇನೆ. ವಿಐಪಿ ಪಾಸ್ ಇಲ್ಲದ ಕಾರ್ಪೊರೇಟರ್‌ನನ್ನು ಜನ ಸ್ಟೇಡಿಯಂನಲ್ಲಿ ಶೇಖರವಾಗಿದ್ದ ಕಸದಂತೆ ಕಾಣಬಹುದು. ಅಲ್ಲವೆ ಅಂಕಲ್?

ವಂದನೆಗಳೊಡನೆ,

ಚಿಂಕು

***ಘೋಸ್ಟ್ ರೈಟರ್: ಆನಂದ***

✵

## ಹಣದ ಹೊಳೆ

ಹರೆಯದಲ್ಲೇ ಗಳಿಸುತ್ತಾನೆ
ಕೋಟಿ ಕೋಟಿ ಈ ಪೋರ
ನಿಜವೇ ನುಡಿದಿದ್ದ ನಮ್ಮ
ಓಣಿಯ ಭವಿಷ್ಯಕಾರ
ಏಕೆಂದರೆ ಈ ಪೋರ
ಈಗ ಐ.ಪಿ.ಎಲ್. ಆಟಗಾರ

*-ಆರತಿ ಘಟಿಕಾರ, ದುಬೈ*

# ಐಪಿಎಲ್ ಕ್ವಿಜ್

- ದಾಂಡಿಗ

- **ಲಿಟಲ್ ಮಾಸ್ಟರ್ ಬ್ಲಾಸ್ಟರ್ ಎಂದು ಯಾರಿಗೆ ಹೇಳಬಹುದು?**

  1 ಸಚಿನ್ 2 ಸುನಿಲ್ 3 ಇಬ್ಬರಿಗೂ

- **ದೋನಿಯ ಕೂದಲು ಹಳೆಯ ಸ್ಟೈಲಿಗೆ ಬರಲು ಎಷ್ಟು ತಿಂಗಳು ಬೇಕು?**

  1 ಸಾಕ್ಷಿಗೆ ಗೊತ್ತು 2 ಹೆಂಡತಿಯನ್ನೇ ಕೇಳಿ 3 ದೋನಿಗೇ ಗೊತ್ತು

- **ಷೊಯಬ್ ಅಕ್ತರ್ ಬೌಲಿಂಗ್ ಲೆಂಗ್ತ್ ಆಧಾರದ ಮೇಲೆ ದ್ರಾವಿಡ್ ಮಕ್ಕಳು ಓದುತ್ತಿರುವ ಶಾಲೆ ಮನೆಯಿಂದ ಎಷ್ಟು ದೂರ?**

  1 ಆರು ಬಾಲ್‌ಗಳಷ್ಟು 2 1.5 ಓವರ್‌ನಷ್ಟು 3 ನಿಮ್ಮ ಊಹೆ

- **ಪ್ರತಿ ಐಪಿಎಲ್ ಮ್ಯಾಚ್‌ನಿಂದ ಸ್ಟೇಡಿಯಂನಲ್ಲಿ ಎಷ್ಟು ಲಾರಿ ಕಚಡ ಜಮಾ ಆಗುತ್ತದೆ?**

  1 ಡೆಪ್ಯುಟಿ ಮೇಯರ್‌ಗೆ ಗೊತ್ತು 2 ಡೆ.ಮೇ. ಮಾತ್ರ ಗೊತ್ತು
  3 ಮಾಜಿ ಉಪ ಮೇಯರ್ ಹರೀಶ್ ಅವರನ್ನು ಕೇಳಬೇಕು

- **ಕಾರ್ಪೊರೇಟರ್‌ಗಳಿಗೆ ವಿಐಪಿ ಪಾಸ್ ಕೊಟ್ಟರೆ ಶಾಸಕರಿಗೆ ವಿವಿಐಪಿ ಪಾಸ್ ಕೊಡಲೇ ಬೇಕೆ?**

  1 ಹೌದು 2 ಖಂಡಿತ ಹೌದು 3 ಬೇರೆ ದಾರಿ ಇಲ್ಲ

- **ರಾಯಲ್ ಚಾಲೆಂಜರ್ಸ್ ಟೀಂ ಓಡಾಡಲು ಕಿಂಗ್ ಫಿಶರ್ ವಿಮಾನಗಳನ್ನೇಕೆ ಬಳಸುತ್ತಿಲ್ಲ?**

  1 ಪೆಟ್ರೋಲ್ ಇಲ್ಲ 2 ಪೈಲಟ್‌ಗಳು ಇಲ್ಲ 3 ಆಟಗಾರರಿಗೆ ಬೇಕಿಲ್ಲ

- **ಮಂತ್ರಾಲಯದ್ದೊಂದು ಟೀಂ ಇದ್ದರೆ ಅದನ್ನು ರಾಯರ ಚಾಲೆಂಜರ್ಸ್ ಎಂದು ಕರೆಯಬಹುದೆ?**

  1 ಸಾಧ್ಯ 2 ಏಕಾಗಬಾರದು? 3 ಮಲ್ಯ ಆಕ್ಷೇಪಿಸಬಹುದು

- **ಎಲ್ಲ ರಾಜಕೀಯ ಪಕ್ಷಗಳು ತಮ್ಮ ತಮ್ಮ ಟೀಂ ಆಟಕ್ಕೆ ಇಳಿಸಿ, ಅದನ್ನೂ ಐಪಿಎಲ್ ಎಂದೇ ಕರೆದು ಇಂಡಿಯನ್ ಪೊಲಿಟಿಕಲ್ ಲೀಗ್ - ಪಂದ್ಯಾವಳಿ ನಡೆಸಿದರೆ?**

  1 ಮ್ಯಾಚ್ ಫಿಕ್ಸಿಂಗ್ ಹೆಚ್ಚಬಹುದು 2 ಆಟಗಾರರಿಗೆ ಸೂಟ್‌ಕೇಸ್‌ಗಳನ್ನು ಕೊಡಬಹುದು 3 ಚುನಾವಣಾ ಆಯೋಗ ಅಂಪೈರ್ ಆಗಬಾರದು ಎಂದು ಷರತ್ ವಿಧಿಸಬಹುದು

- **ವಿರಾಟ್ ಕೊಹ್ಲಿ ಪಡೆಯುವ ಸಂಭಾವನೆಯ ಮೊತ್ತವನ್ನು ಅವರು ಗಳಿಸುವ ರನ್‌ಗಳಿಂದ ಭಾಗಿಸಿದರೆ ಬರುವ ಉತ್ತರ ಏನು?**

  1 ಉತ್ತರ ತಡೆಹಿಡಿಯಲಾಗಿದೆ 2 ಉತ್ತರ ಐಪಿಎಲ್ ನಂತರ ಲಭ್ಯ
  3 ಸಂಭಾವನೆಯ ಮೊತ್ತ ಅಲಭ್ಯ

- **ಬೆಣ್ಣೆ ಮಸಾಲೆಗೆ ಪ್ರಸಿದ್ಧಿಯಾದ ಊರಿನಿಂದ ಬರುವ ಐಪಿಎಲ್ ಆಟಗಾರನ ಹೆಸರೇನು?**

  1 ವಿನಯ್ 2 ವಿನಯ್ 3 ವಿನಯ್

- **ಲಲಿತ್ ಮೋದಿ ಈಗೇನು ಮಾಡುತ್ತಿರುತ್ತಾರೆ?**

  1 ನನಗೆಷ್ಟು ಲಾಸಾಯಿತು ಎಂದು ಕೈಕೈ ಹಿಸುಕಿಕೊಳ್ಳುತ್ತಿರುತ್ತಾರೆ 2 ನಲಾಎಕ್ಕೈಹಿ
  3 ಅದೇ ಉತ್ತರ

- **ಹುರಿದುಂಬಿಗಳು ಅಥವಾ ಪ್ಯೂರ್ ಕನ್ನಡದಲ್ಲಿ ಹೇಳುವದಾದರೆ ಚಿಯರ್ ಗರ್ಲ್ಸ್‌ಗಳು ನರ್ತಿಸುವುದನ್ನು ನೋಡಿ ಬೌಂಡರಿ ಅಥವಾ ಸಿಕ್ಸರ್ ಎಂದು ಹೇಳಲು ಸಾಧ್ಯವೆ?**

  1 ಸಾಧ್ಯ 2 ಅಸಾಧ್ಯ 3 ಗೆಸ್ ಮಾಡಲು ಸಾಧ್ಯ

- **ಬ್ಯಾಟ್ ಮಾಡುವ ಸಮಯದಲ್ಲಿ ತಮ್ಮ ಕೂದಲು ಕಣ್ಣಿಗೆ ಅಡ್ಡ ಬಂದರೆ ಗೇಲ್ ಏನು ಮಾಡುತ್ತಾರೆ?**

  1 ಸಿಕ್ಸರ್ ಹೊಡೆಯರು 2 ಔಟಾಗಬಹದು 3 ಪಕ್ಕಕ್ಕೆ ಸರಿಯಬಹುದು

- **ಕಾಳಸಂತೆಯಲ್ಲಿ ಟಿಕೆಟ್ ಖರೀದಿಸುವಾಗ ಚೌಕಾಸಿ ಮಾಡುವಿರಾ?**

  1 ಅವಸರವನ್ನವಲಂಬಿಸಿದೆ 2 ಗರ್ಲ್ ಫ್ರೆಂಡ್ ಜತೆಗಿದ್ದರೆ ಇಲ್ಲ 3 ಖಂಡಿತ

ಉತ್ತರಗಳು: ನಿಮ್ಮ ಉತ್ತರಗಳು ನಮ್ಮ ಉತ್ತರಗಳಿಗಿಂತ ಚೆನ್ನಾಗಿವೆ. ಅಭಿನಂದನೆಗಳು.

---

## ಧಾರಣೆ

ನನ್ನ ಕೋರಿಕೆ ಚಿನ್ನ ಕೊಡಿಸಿ
ಇವರು ಮೌನ ಧಾರಣೆ
ಕೇಳಿದ ಮೇಲೆ
ಚಿನ್ನದ ಧಾರಣೆ

*-ಆರತಿ ಘಟಿಕಾರ, ದುಬೈ*

# ಆರಾಮ ನವಮಿ

**- ಗಣೇಶ್ ಹೆಗ್ಗಡೆ**

ಇವತ್ತು ಯಾವ ಘಳಿಗೆಯಲ್ಲಿ ಎದ್ದಿದ್ದನೋ ಏನೋ. ನಮ್ಮೂರಿನ ಯೂನಿಟಿ ಸರ್ಕಲ್ ಬಳಿ ಪ್ರೊ|| ತೋಲಾಂಡರಾಯರ ದರ್ಶನವಾಯಿತು.

''ನೀನು ಸಿಕ್ಕಿದ್ದು ಒಳ್ಳೆಯದೆ ಆಯಿತು. ಮಧ್ಯಾಹ್ನದವರೆಗೂ ಜತೆಗಿರು. ಪರ್ಸನಲ್ ಕೆಲಸಗಳಿವೆ'' ಎಂದಾಗ ಸಬೂಬು ಹೇಳಿ ತಪ್ಪಿಸಿಕೊಳ್ಳಲು ಮಾರ್ಗವೇ ಹೊಳೆಯದಾಗಿ ''ವಿಥ್ ಪ್ಲೆಷರ್ ಸರ್'' ಎಂದೆ ಹುಸಿನಗೆಯಿಂದ.

ಅವರು ಕೋರ್ಟ್ ಜಡ್ಜ್ ಇದ್ದ ಹಾಗೆ. ಅವರ ಮುಂದೆ ಸತ್ಯವನ್ನೇ ಹೇಳಬೇಕು. ಸತ್ಯವನ್ನಲ್ಲದೆ ಬೇರೇನನ್ನೂ ಹೇಳಲು ಧೈರ್ಯವೇ ಬರುವುದಿಲ್ಲ. ಏಪ್ರಿಲ್ ತಿಂಗಳ ಸುಡು ಬಿಸಿಲಿನ ನೆನಪು ತರಿಸಿ ಕೊಂಚ ಹೆದರಿಸಲು ಪ್ರಯತ್ನಿಸಿದೆ. ನನಗೇ ಮುಳುವಾಗಿ ತಿರುಗುಬಾಣವಾಯಿತು.

**ಆರಾಮ ಖುರ್ಚಿ ಖರೀದಿಸಲು ಹೊರಟ ಪ್ರೊ|| ತೋಲಾಂಡರಾಯರು ತಮ್ಮ ನಿರ್ಧಾರವನ್ನು ಬದಲಿಸಿದ್ದೇಕೆ?**

''ಇಕಾ, ಬ್ಯಾಗಲ್ಲಿ ಛತ್ರಿ ಇರುವುದೇ ಮರೆತು ಹೋಗಿತ್ತು. ತಲೆಗೆ ಸರಿಯಾಗಿ ಹಿಡಿ'' ಅಂದರು. ಛತ್ರಿ ಬಿಡಿಸಿದೆ. ಕಾಶಿಯಾತ್ರೆ ನೆನಪಾಯಿತು.

''ಏನ್ಸಾರ್? ಈ ಸುಡು ಬಿಸಿಲಿನಲ್ಲಿ ತಮ್ಮ ಸವಾರಿ?''

''ಒಂದು 'ಆರಾಮ' ಕುರ್ಚಿ ಖರೀದಿಸಬೇಕಿತ್ತು ಕಣಯ್ಯ. ಹಬೀಬ್ ಫರ್ನಿಚರ್ ಅಂಗಡಿ ಇದೇ ರೋಡಿನಲ್ಲಿ ತಾನೆ?''

''ಹೌದು ಸರ್. ನಮ್ಮ ಎಂ.ಎಲ್.ಎ. ವಿಷಕಂಠಪ್ಪನವರ ಬಂಗಲೆ ಪಕ್ಕದ ಗಲ್ಲೀಲಿ. ಅದ್ಸರಿ ತಮಗ್ಯಾಕೆ ಈಗ ಆರಾಮ ಕುರ್ಚಿ?''

''ಇನ್ನೂ ಬುದ್ದು ಕಣಯ್ಯ ನೀನು. ಇಡೀ ದೇಶದ ವ್ಯವಸ್ಥೆಯೆ 'ಆರಾಮ'ವಾಗಿದೆ. ನಾವ್ಯಾಕಯ್ಯ..... ಅದೂ.....ಇದೂ ಅಂತ ಸಮಸ್ಯೆಗಳನ್ನ ತಲೆಗೆ ಹಚ್ಚಿಕೊಂಡು ಚಿಂತೆ ಪಡುವುದು. ಈ ಜೀವನವಿರುವುದೇ 'ಆರಾಮ'ವಾಗಿರಲಿಕ್ಕೆ ಕಣಯ್ಯ.''

''ನನಗೆ ತಲೆ-ಬುಡ ಅರ್ಥವಾಗಲಿಲ್ಲ ಸರ್.''

''ನಿನಗೆ ಅರ್ಥವಾಗುವುದೂ ಇಲ್ಲ. ನಿದರ್ಶನಗಳನ್ನು ಕೊಡುತ್ತಾ ಹೋಗುತ್ತೇನೆ, ಸರಿಯಾಗಿ ಕೇಳಿಸಿಕೊ. ಮೊನ್ನೆ ಭೂಕಂಪವಾಯ್ತು ಗೊತ್ತು ತಾನೆ? ದೂರದ ಆದರೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಈ ವಿಷಯ ತಿಳಿದಿದ್ದು ಟಿ.ವಿ. ಮಾಧ್ಯಮದಲ್ಲಿ ಸುದ್ದಿ ಬಿತ್ತರವಾದ ನಂತರ. ಅವರ ಕುರ್ಚಿ ನಡುಗಿದ್ದರೂ ಇದು ಟ್ರಾನ್ಸ್‌ಫರ್ ಸೀಸನ್ ಅಂತಂದುಕೊಂಡು ಕಛೇರಿಯ ಕುರ್ಚಿಯಲ್ಲಿ 'ಆರಾಮ'ವಾಗಿಯೇ ಕುಳಿತಿದ್ದರು ಅವರು. ಇನ್ನು ನಮ್ಮ ಮುಖ್ಯಮಂತ್ರಿ ಡಿ.ವಿ.ಎಸ್.ರವರಿಗಾದ ಅನುಭವ ಕೇಳು. ಭೂಕಂಪದ

ಸಮಯದಲ್ಲಿ ಅವರೂ ವಿಧಾನಸೌಧದ ಕಛೇರಿಯ ಕುರ್ಚಿಯಲ್ಲೇ ಕುಳಿತಿದ್ದರು. ಅವರಿಗೂ ಜೋರಾಗಿ ಕುರ್ಚಿ ನಡುಗಿದ ಅನುಭವ. ಅನುಮಾನಗೊಂಡು ಪಕ್ಷದ ಅಧ್ಯಕ್ಷರಿಗೆ ಫೋನಾಯಿಸಿದರು.''

''ಚಿಂತಿಸಬೇಡಿ ಸರ್, ಕಳೆದ ನಾಲ್ಕು ತಿಂಗಳಿನಿಂದ ತಮ್ಮ ಕುರ್ಚಿ ಅಲ್ಲಾಡುತ್ತಿರುವುದು ಬೇರೆ......ಬೇರೆ ಕಾರಣಗಳಿಂದ. ಆದರೆ ಇವತ್ತು ಮಧ್ಯಾಹ್ನ ಮಾತ್ರ ನಿಜಕ್ಕೂ ಭೂಕಂಪವಾಗಿ ತಮ್ಮ 'ಕುರ್ಚಿ' ಅಲ್ಲಾಡಿದೆ. ಭಯಬೇಡ ತಾವು 'ಆರಾಮ'ವಾಗಿರಿ'' ಎಂದಿದ್ದರು ಅಧ್ಯಕ್ಷರು. ಇನ್ನೂ ದೇಶವನ್ನೇ ಅಲ್ಲಾಡಿಸಲು ಹೊರಟ ಅಣ್ಣಾ ಹಜಾರೆಯವರ ಪರಿಸ್ಥಿತಿ ಕೇಳು. 'ಆರಾಮ'ವಾಗಿ ಮಾಮೂಲು ಕೊಟ್ಟು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದ ಜನಕ್ಕೆ ಅಣ್ಣಾ ಹಜಾರೆಯವರೇ ಒಗಟಾಗಿ ಕಂಡರು. ಕೊನೆಗೂ ಭ್ರಷ್ಟಾಚಾರವೆಂಬ ಭೂಕಂಪ 10.5 ರಿಚರ್ (ಶ್ರೀಮಂತರ) ಸ್ಕೇಲಿನಲ್ಲಿ ದೇಶಕ್ಕೆ ಬಡಿದು ನನ್ನ..... ನಿನ್ನಂಥ ಬಡ ಪ್ರಾಮಾಣಿಕರ ಮಾನಸಿಕ ಮೌಲ್ಯಗಳೇ ಕುಸಿದು ನೆಲಪಾಯ ಕಚ್ಚಿದ್ದವು. ಮೊನ್ನೆ, ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಒಂದು ಸ್ವಾರಸ್ಯಕರ ಪ್ರಸಂಗ ಜರುಗಿತು. ಪ್ರಧಾನ ಮಂತ್ರಿಗಳು ಐ.ಪಿ.ಎಲ್. ಬಗ್ಗೆ ಮಾಹಿತಿ ಕೊಡಿ ಎಂದು ಸಿಬ್ಬಂದಿಯವರಿಗೆ ಕೇಳಿದಾಗ, ಅವರು ಆರಾಮವಾಗಿ ಈ ವಿಷಯವನ್ನು ಪರಿಗಣಿಸಿ, ಐ.ಪಿ.ಎಲ್ ಕ್ರಿಕೆಟ್ ಪಂದ್ಯಗಳ ಬಗ್ಗೆ ಸುದೀರ್ಘ ಮಾಹಿತಿಯನ್ನು ಕೊಟ್ಟು ಪ್ರಧಾನಿಯವರ ಸಿಟ್ಟಿಗೆ ಗುರಿಯಾಗಿದ್ದರು. ಐ.ಪಿ.ಎಲ್. ಎಂದರೆ 'ಇಂಡಿಯನ್ ಪಾವರ್ಟಿ ಲೈನ್' ಎನ್ನುವುದು ಅಧಿಕಾರಿ ವರ್ಗದವರಿಗೆ ವಿಶದವಾಗಲು ಸಮಯವೇ ಹಿಡಿದಿತ್ತು.''

ಪ್ರೊ|| ತೋಲಾಂಡರಾಯರು ಮಾತು ನಿಲ್ಲಿಸಿ ಮೌನಕ್ಕೆ ಜಾರಿ ಕೊಂಡರು.

''ಸರ್ ಅಲ್ನೋಡಿ. ಅದು ನಮ್ಮ ಎಂ.ಎಲ್.ಎ. ವಿಷಕಂಠಪ್ಪನವರ ಬಂಗಲೆಯಲ್ಲವೆ?'' ಎಂದೆ.

''ಹೌದು ಕಣಯ್ಯ. ಅದ್ಯಾಕೆ ಹಾಗೆ ಸಾವಿರಾರು ಜನ ಅವರ ಮನೆ ಮುಂದೆ ಜಮಾಯಿಸಿದ್ದಾರೆ? ಯಾರನ್ನಾದರು ವಿಚಾರಿಸು'' ಎಂದರು ಆತಂಕದಿಂದ.

ಆ ಗುಂಪಿನಲ್ಲಿದ್ದವರನ್ನು ಕುರಿತು ''ನಮ್ಮ ಎಂ.ಎಲ್.ಎ. ಸಾಹೇಬರು ಹುಷಾರಾಗಿದ್ದಾರೆ ತಾನೆ?'' ಎಂದು ಕೇಳಿದೆ.

''ಅವರಿಗೇನ್ಸಾರ್ ಧಾಡಿ. ಗುಂಡು ಕಲ್ಲು ಇದ್ದ ಹಾಗೆ ಇದ್ದಾರೆ. ಇಷ್ಟು ದಿನ ರಾಜಧಾನಿಯಲ್ಲೇ ಮನೆ ಮಾಡಿ ಅಲ್ಲಿಯ ರಾಜಕಾರಣ ಬೇಜಾರಾಗಿ, ರೆಸಾರ್ಟಿನಲ್ಲಿ ಕೊಂಚ ದಿನ ವಿಶ್ರಾಂತಿ ತೆಗೆದುಕೊಂಡು ಪ್ರಪ್ರಥಮ ಬಾರಿಗೆ ಚುನಾಯಿತ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಈಗಲಾದರೂ 'ಬರ' ಬಾರದೆ.... 'ಬರ' ಬಾರದೆ.... ಎಂಬ ಪಕ್ಷದ ಶಿಸ್ತಿನ ಕಾರ್ಯಕರ್ತರ ಒತ್ತಾಸೆ ಮೇರೆಗೆ ಇಲ್ಲಿಗೆ ಬಂದಿದ್ದಾರೆ'' ಎಂದ ವ್ಯಕ್ತಿ ಮತ್ತೆ ಗುಂಪಿನಲ್ಲಿ ಮಾಯವಾದ.

''ನೋಡಯ್ಯ ಎಂಥಹ ಮುಗ್ಧ ಜನ. ಎಲ್ಲರೂ ಇಲ್ಲಿ 'ಆರಾಮ'ವಾಗಿದ್ದಾರೆ ಕಣಯ್ಯ. ಯಾರಿಗೂ ಭುಗಿಲೆದ್ದಿರುವ ಸಮಸ್ಯೆಗಳ ಅರಿವೇ ಇಲ್ಲ. 'ನೊರೆ' ಹಂಚಿದರೆ 'ನೆರೆ'ಯನ್ನೇ

ಮರೆಯುವ ಅಮಾಯಕರು. ನಾವು ದಾಪುಗಾಲು ಹಾಕಿದೆವು.''

ದೂರದಲ್ಲೆಲ್ಲೋ ಮೈಕ್‌ನ ಧ್ವನಿ –

''ಬಡ ಪ್ರಜೆಗಳೆ, ನನ್ನ ದೇಹ ಎಲ್ಲಿದ್ದರೂ 'ಆತ್ಮ' ಈ ಕ್ಷೇತ್ರದಲ್ಲಿ ಸದಾ ಸುತ್ತುತ್ತಿರುತ್ತದೆ. ಈಗ ತಾಲ್ಲೂಕಿನಲ್ಲಿ ಭೀಕರ ಬರಗಾಲ ಬಂದಿರುವ ವಿಚಾರ ಕೇಳಿ ನನಗೆ ಅತ್ಯಂತ ಖೇದವಾಗಿದೆ. ತಮಗೆ ಕಳೆದ ವರ್ಷದ 'ನೆರೆ'ಯ ಪರಿಹಾರ ನಿಧಿಯೇ ತಲುಪಿಲ್ಲವೆಂಬ ವಿಚಾರ ಕೇಳಿ ವಿಷಾದವೂ ಆಗಿದೆ. 'ಬರ' 'ನೆರೆ' ಇವೆರಡರ ಒಟ್ಟು ಪರಿಹಾರಗಳೂ ಒಟ್ಟಿಗೆ ತಮಗೆ ತಲುಪಿಸುವ ಕಾರ್ಯ ಪ್ರವೃತ್ತದಿಂದ ಈ ಸಂಜೆ ಉನ್ನತ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ತಾವೆಲ್ಲರೂ ನನ್ನನ್ನು ನಂಬಿ ಇನ್ನು ಮುಂದೆ 'ಆರಾಮ'ವಾಗಿರಿ.''

''ನೋಡಯ್ಯ ನಿನಗೆ ಬುದ್ಧನಿಗೆ ದರ್ಶನ ಮಾಡಿಸಿದಂತೆ ವಿಚಾರ ದರ್ಶನ ಮಾಡಿಸಿದ್ದೇನೆ. ಎಲ್ಲರ ಬಾಯಿಯಲ್ಲೂ 'ಆರಾಮ'..... 'ಆರಾಮ'..... ಎಂಬ ಮಾತು ಕೇಳಿ ತಲೆಚಿಟ್ಟು ಹಿಡಿದು ಹೋಗಿ ಕೊನೆಗೆ 'ಆರಾಮ' ಕುರ್ಚಿಯನ್ನು ಖರೀದಿಸಲು ಹೊರಟಿದ್ದೇನೆ.''

''ಸರ್, ಯು ಆರ್ ಎ ಪ್ರಾಕ್ಟಿಕಲ್ ಮೈಂಡೆಡ್ ಪರ್ಸನ್'' ಎಂದೆ. ''ಥ್ಯಾಂಕ್ಸ್'' ಅಂದರು.

ಆಗಲೇ..... ನಮ್ಮೂರಿನ ರಾಮ ಮಂದಿರದ ಸೆಕ್ರೆಟರಿ ಗೋವಿಂದಯ್ಯ ಎದುರಾಗಿದ್ದು ನಮ್ಮಿಬ್ಬರನ್ನೂ ನೋಡಿ ಖುಷಿಗೊಂಡ ಗೋವಿಂದಯ್ಯ,

''ನೀವಿಬ್ಬರೂ ದೇವರು ಸಿಕ್ಕ ಹಾಗೆ ಸಿಕ್ಕಿದಿರಿ. ರಾಮ ಮಂದಿರ ಇಲ್ಲೇ ಹತ್ತಿರವಿದೆ. ರಾಮನವಮಿ ಪ್ರಯುಕ್ತ ಪಾನಕ, ಕೋಸಂಬ್ರಿ ಮಾಡಿಸಿದ್ದೇನೆ. ದಯವಿಟ್ಟು ಪರಾಂಬರಿಸಬೇಕು'' ಎಂದು ವಿನಂತಿಸಿಕೊಂಡಾಗ, ಸಂತೋಷದಿಂದ ಒಪ್ಪಿಕೊಂಡ ಪ್ರೊ॥ ತೋಲಾಂಡರಾಯರು ಗೋವಿಂದಯ್ಯನ ಎರಡೂ ಕೈಗಳನ್ನು ಕಣ್ಣಿಗೊತ್ತಿಕೊಂಡು ''ನೀನೊಬ್ಬ ಮುತ್ಠಾಳ ಕಣಯ್ಯ. ದೇಶದಲ್ಲಿ ಎಲ್ಲರೂ 'ಆರಾಮ' ನವಮಿ ಆಚರಿಸುತ್ತಿರುವಾಗ ನೀನೊಬ್ಬ ತಪ್ಪದೇ 'ರಾಮ' ನವಮಿ ಆಚರಿಸುತ್ತಿದ್ದೀಯ. ರೇರ್ ಸ್ಪಿಷೀಸ್. ಮೆ ಯುವರ್ ಟ್ರೈಬ್..... ಇಂಕ್ರೀಸ್'' ಅಂತಂದರು.

ನನಗೂ ಪ್ರೊ॥ ತೋಲಾಂಡರಾಯರ ಮಾತು ಆ ಕ್ಷಣದಲ್ಲಿ ದಿಟವೆನ್ನಿಸಿತು.


''ಸರ್, ಹಬೀಬ್ ಫರ್ನೀಚರ್ ಅಂಗಡಿ ಪಕ್ಕದ ಗಲ್ಲಿಯಲ್ಲೇ ಇರುವುದು.'' ಎಂದು ಜ್ಞಾಪಿಸಿದೆ.

'''ಆರಾಮ' ಕುರ್ಚಿ ಖರೀದಿ ಕ್ಯಾನ್ಸಲ್ ಕಣಯ್ಯ, ನಾವೆಲ್ಲ ಇನ್ನು ಮುಂದೆ ಶ್ರೀ ರಾಮನ ಹಾಗೆ ಆಪ್ಟಿಮಿಸ್ಟಿಕ್ ಆಗಿ ಜೀವನ ಸಾಗಿಸಬೇಕಯ್ಯ. ನಿರಾಶಾವಾದಿಗಳಾದರೆ ಈಗಿನ ನವ ಪೀಳಿಗೆಗೆ ಕೆಟ್ಟ ಸಂದೇಶ ರವಾನೆಯಾಗುತ್ತದೆ'' ಅಂತಂದರು ಪ್ರೊ॥ ತೋಲಾಂಡರಾಯರು.

''ಸರ್, ನನಗೊಂದು ಬಲವಾದ ಅನುಮಾನ ಕಾಡುತ್ತಿದೆ. ಸೀತೆ ಇರುವಾಗಲೇ ಶ್ರೀರಾಮ ಮತ್ತೊಂದು ಮದುವೆಯಾಗಿದ್ದರೆ ರಾಮಾಯಣದ ಕಥೆ ಏನಾಗುತ್ತಿತ್ತು?''

''ಆಗ ಕುಮಾರಾಯಣವಾಗುತ್ತಿತ್ತು.'' ✵

# ನವಿಲುಗರಿಯ ನವಿಲು ಪೊರಕೆ




ನಾಗೇಶ ಹೆಗಡೆ ಕ್ಲಿಷ್ಟ ವೈಚಾರಿಕ ವಿಷಯಗಳನ್ನು ಸ್ವಚ್ಛ ಕನ್ನಡದಲ್ಲಿ ಅಂದವಾಗಿ ಹೇಳಬಲ್ಲ ಪ್ರತಿಭಾವಂತ ಲೇಖಕರು. 'ಅಪರಂಜಿ' ಪತ್ರಿಕೆಗೆಂದು ಬರೆದ ಈ ಲೇಖನಗಳಲ್ಲಿ ಅವರು ತಮ್ಮ ಇನ್ನೊಂದು ನಗುಮುಖವನ್ನು ತೆರೆದಿಟ್ಟಿದ್ದಾರೆ. ಹಾಸ್ಯದ ಹೊನಲು ಹರಿಸುತ್ತಲೇ ಡಾಂಭಿಕ ರಾಜಕಾರಣಿಗಳಿಗೆ, ಹಾದಿ ತಪ್ಪಿದ ಪ್ರಾಣಿಪ್ರೇಮಿಗಳಿಗೆ, ಅಂತೆಯೇ ಮೌಢ್ಯ ಮತ್ತು ದುರಾಸೆ ತುಂಬಿದ ಜನರಿಗೆ ನವಿಲುಗರಿಯ ಪೊರಕೆಯ ರುಚಿ ಕಾಣಿಸುತ್ತಾರೆ. ಹಳೆಯ ಸ್ಯಾನಿಟರಿ ಪ್ಯಾಡನ್ನು ಬೇಟೆಯಾಡುವ ಅವರ ನೆಚ್ಚಿನ ನಾಯಿ, ಪ್ಲಾಸ್ಟಿಕ್ ಕೊಳವೆಯಿಂದ ಬಂಧಮುಕ್ತವಾಗಲು ಬಯಸದ ನಾಗರ ಹಾವು, ಸಾಕು ತಾಯಿಯ ಪ್ರೀತಿಯಿಂದಾಗಿ ಆಜನ್ಮ ಬ್ರಹ್ಮಚಾರಿಯಾಗಿ ಅಥವಾ ಪ್ರಾಣಿದಯಾಪರರ ಕೃಪೆಯಿಂದಾಗಿ ಉಪವಾಸ ಉಳಿಯಬೇಕಾದ ಸಂಧಿಗ್ಧಕ್ಕೆ ಸಿಲುಕಿದ ಮಾರುತಿ ಕೋತಿ ಮುಂತಾದ ಪ್ರಾಣಿಗಳು ಮನುಷ್ಯ ಪಾತ್ರಗಳಷ್ಟೇ ಪ್ರಾಮುಖ್ಯ ನೀಡುವ ನಾಗೇಶ ಹೆಗಡೆಯವರ ಹಾಸ್ಯ ನಮ್ಮನ್ನು ಸುಲಲಿತವಾಗಿ ಸೆಳೆಯುತ್ತದೆ.

**– ಡಾ. ಉಲ್ಲಾಸ ಕಾರಂತ**
**(ಬೆನ್ನುಡಿಯಲ್ಲಿ)**

**ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ**

**ಲೇಖಕರು:** ನಾಗೇಶ್ ಹೆಗಡೆ

**ಬೆಲೆ ರೂ. 75, ಪುಟಗಳು 92**

**ಪ್ರಕಾಶಕರು:** ಭೂಮಿ ಬುಕ್ಸ್

150, ಮೊದಲ ಮುಖ್ಯ ರಸ್ತೆ, ಶೇಷಾದ್ರಿಪುರಂ
ಬೆಂಗಳೂರು 20. ಫೋನ್: 94491 77628

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಆ

- ಸರ್ಕಾರಿ ಕೆಲಸ (ಅಯ್ಯೋ ದೇವರೇ!) ಕೆಲಸ.
- ಉತ್ಪ್ರೇಕ್ಷೆಗೊಂದು ಸಣ್ಣ ಉದಾಹರಣೆ 2+2 = 22
- ರೈತ ಆಶಾವಾದಿ ಆಗಿರಲೇಬೇಕು. ಇಲ್ಲದಿದ್ದರೆ ಅವನು ರೈತನಾಗಿರಲು ಸಾಧ್ಯವಿಲ್ಲ.
- ಪಕ್ಷದ ಸಿದ್ಧಾಂತ ಎಲ್ಲಾ ಗೊತ್ತಿಲ್ಲ. ನನ್ನ ನೆಚ್ಚಿನ ನಟಿ ನಿಮ್ಮ ಪಕ್ಷ ಸೇರಿದಾಳೆ ಎಂದು ಗೊತ್ತಾಯಿತು ಅದಕ್ಕೇ ನಾನೂ ಸೇರಲು ಬಂದೆ.
- Every King was once a crying baby.
- ಒಬ್ಬನಿಗೆ 'ಸಾಕು' ಎನಿಸಿದ್ದು ಇನ್ನೊಬ್ಬನ ಆಸೆಗಳ ಹಾದಿಯ ಮೊದಲನೆ ಮೈಲಿಕಲ್ಲು ಆಗಿರಲಿಕ್ಕೆ ಸಾಕು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ವಾಸ್ತವತೆ ಎಂದರೆ ಗುಂಡಿಲ್ಲದ ರಾತ್ರಿಗಳಲ್ಲಿ ಮನುಷ್ಯನನ್ನು ಆವರಿಸಿಕೊಳ್ಳುವ ಭ್ರಮೆ.
- ಏನಾದರೂ ತಪ್ಪಾದಾಗ ರಾವಣ ಸಹ 'ಅಯ್ಯೋ ರಾಮ!' ಎನ್ನುತ್ತಿದ್ದನೆ?
- I always start the diet on the same day -- tomorrow.
- ಬಡತನವೆನ್ನುವುದೇ ಒಂದು ಅವಮಾನವಲ್ಲ. ಅದನ್ನು ಎದುರಿಸಲಾಗದ ಹೇಡಿತನವಷ್ಟೇ ಅವಮಾನ.
- ಹೊಸ ವರ್ಷ ಎನ್ನುವುದು ಕ್ಯಾಲೆಂಡರ್‌ನಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ಆಚರಣೆ ಅಷ್ಟೆ ಅಲ್ಲವೆ?
- ನಮ್ಮ ಭೂಮಿಯ ವಾಸದ ವೀಸಾ ವಾಯಿದೆ ಮುಗಿದ ಮೇಲೆ ನಾವು ಎಲ್ಲಿಗೆ ಹೋಗಬೇಕಾಗುತ್ತದೆ?
- ನಾವು ಬಯಸಿದ್ದೆಲ್ಲಾ ಸಿಕ್ಕರೆ ಅದನ್ನು ಇಡುವುದಾದರೂ ಎಲ್ಲಿ?
- If you think you are too small to make a difference try sleeping with a mosquito.
- ಯಡ್ಯೂರಪ್ಪನವರಿಗೆ ಬೂದಿಯಿಂದ ಎದ್ದು ಬರುವ ಶಕ್ತಿ ಇರಬಹುದು. ಆದರೆ ಗಣಿದಣಿಗಳಿಗೆ ಇನ್ನೂ ದೂಳಿನಿಂದ ಎದ್ದು ಬರೋಕೆ ಆಗ್ತಾ ಇಲ್ಲ.
- ಪ್ರಭಾವ ಬೀರಲು ದೊಡ್ಡವರು ಕಾಯುತ್ತಲೇ ಇರುತ್ತಾರೆ. ಆದರೆ ಪ್ರಭಾವಿತರಾಗುವ ಸಾಮರ್ಥ್ಯ ಇರಬೇಕಲ್ಲ?

# ಗೋವಿಂದಜ್ಜ ಬರ್ಲೇ ಇಲ್ಲೆ

**– ಹೆಚ್. ಶಾಂತರಾಜ್ ಐತಾಳ್**

**ಬಾ**ರಕೂರು ಬದಿಯಾಂಗೆ ನಮ್ಮ ಅಜ್ಜ ಒಬ್ರು ಇದಿರ್. ಗೋವಿಂದಜ್ಜ ಅಂತ ಹೆಸ್ರು. ಬಾರೀ ಕುಶಾಲ್ ಮಾತಾಡ್ತಿದಿರ್. ಅವ್ರೊಟ್ಟಿಗೆ ಎಲ್ಯಾರೆ ಹ್ವಾರೆ ನಮ್ಮುನ್ನೆಲ್ಲ ಹೋಟ್ಲಿಗೆ ಕರಕೊಂಡು ಹೋಯಿ, ದೋಸಿ ಗೀಸಿ ಕೊಡುಸ್ತಿದಿರ್. ಆಗ್ಳಿಗೆಲ್ಲ ಬಾರಕೂರು ಪೇಟೆಲಿ ಎಂತದೂ ಇರಲ್ಯೇ. ಸಣ್ಣಕ್ಕಿದ್ದಿತು. ಬೈಸರಿ ಹೊತ್ತಿನಾಂಗೆ ಮಿಣಿ ಮಿಣಿ ಲಾಟಾಣ್ ದೀಪ, ಅಷ್ಟೆ – ಹ್ವಾಯಿ, ಕೇಣಿ. ಸಿದ್ಧಾಪುರ ಕಡಿಂದ ದಿನಕ್ಕೆರಡು ಬಸ್ ಬತ್ತಿದಿತು. ಉಡ್ಪಿ ಕಡಿಂದ ನಾಕೈದು ಬಸ್ ಹೊಳಿಂದೀಚಿಗೆ ಬತ್ತಿದಿತು, ಸೈ.

ಗೋವಿಂದಜ್ಜನಿಗೆ ಪ್ರಾಯ ಎಪ್ಪತ್ತು ಆಯಿಕ್ಕು. ಬೆಳಗಾ ಮುಂಚಿ ಬಸ್ಕಿ ತೆಗೆಯುದು. ಮನಿಕ್ಕಂಡೇ ಹೊಟ್ಟಿನ ಮ್ಯಾಲೆ ಕೆಳ್ಗೆ ಮಾಡುದು, ಆಟದ ಯಾಶದ ಹಾಂಗೆ ಕುಮ್‌ಚಾಟ್ ಹಾರುದು ಎಲ್ಲ ಹನುಮನಾಯ್ಕನ ಯಿದ್ಯ ಮಾಡ್ತಿದಿರ್. ಇದೆಲ್ಲ ಯಾಯಾಮ ಮಾಡುತಿಗೆ ಈಗಿನ ಕಣೇಂಗೆ ಚಡ್ಡಿ, ನಿಕ್ಕರ್ ಎಲ್ಲ ಇಲ್ಲೆ. ಅವ್ರುದ್ದು ಡ್ರೆಸ್ ಏನಿದ್ರೂ ಹನುಮಾನ್ ಕಾಚ – ಪೈಲ್ವಾನ್ರೆಲ್ಲ ಹಾಕುತ್ರು ಕಾಣಿ ಹಾಂಗಿದ್ದು. ಅಗ್ಳಿಗೆ ಜವುಳಿ ಅಂಗಡೀಲಿ ಗಂಜಿಪರಾಕ್, ಹನುಮಾನ್ ಕಾಚ ಎಲ್ಲ ಮಾರ್ತಿದಿರ್. ಈಗ ಯಂತದೂ ಇಲ್ಯೇ. ಅಂಗಡಿಗೆ ಹ್ವಾಯಿ ಕೇಣಿ ಕಾಂಬ 'ಗಂಜಿ ಪರಾಕ್ ಇತ್ತೇ?' ಅಂತ ಅಂಗಡಿಯಂವ ನಿಮ್ಮನ್ನೇ ಪಿಳಿಪಿಳಿ ಕಾಂಬುಕಿದ್ದ.

ಗೋವಿಂದಜ್ಜ ಒಂದ್ಸರಿ ಅಂಗಡಿಗೆ ಹ್ವಾಪುತಿಗೆ ಒಟ್ಟಿಗೆ ನಾನೂ ಹೋಯಿದ್ದೆ. ಜವುಳಿ ಅಂಗಡಿಗೆ ಹ್ವಾದವ್ರೇ – ಅಂಗಡಿಲಿದ್ದ ಹೆಂಗ್‌ಸಿನತ್ರ ಕೇಂಡ್ರು – 'ನನ್ನ ಪೈಲ್ವಾನ ಡ್ರೆಸ್ ಕೊಡು ಕಾಂಬ' ಅಂತ. ಆ ಹೆಂಗ್ಸಿಗೆ ಗೋವಿಂದಜ್ಜನ ಗುರ್ತು ಇದಿತ್. ಅವ್ರ ತಮಾಷಿ ಮಾತು ಎಲ್ಲ ಗೊತ್ತಿದಿತು. 'ಯಾವ ಬಣ್ಣ ಅಕ್ಕು ನಿಮ್ಗೆ ಅಜ್ಜಯ್ಯ?' ಅಂತ ಕೇಂಡ್ಳು. ಅಲ್ಲಿ ಇಪ್ಪುದು – ಬಿಳಿ ಬಣ್ಣದ್ದು – ಖಾದಿ ವಸ್ತ್ರದ್ದು – ಹನುಮಾನ್ ಕಾಚ ಮಾತ್ರ. ಅದು ಗೋವಿಂದಜ್ಜಂಗೂ ಗೊತ್ತಿದಿತ್. ಆದ್ರೂ ಅವ್ಳು ಕೇಂಡ್ಳು. ಇವ್ರು ಹೇಳ್ರು. 'ಒಂದು ಪಚ್ಚೆದು ಒಂದು ನೀಲಿಬಣ್ಣದ್ದು – ಎರಡು ಕೊಡು ಕಾಂಬ' ಅಂತ

'ಅಕ್ಕಜ್ಜಾ ಎರಡೂ ಕೊಡುವಾ' ಅಂತ್ಹೇಳಿ ಅವುಳು ಮತ್ತೆ ಕೇಂಡ್ಳು – 'ಕಟ್ಟುದಾ' ಅಂತ.

ಅದಕ್ಕೆ ಗೋವಿಂದಜ್ಜ ಹೇಳ್ರು – ''ಬೇಡ ಮಗಾ ನಾನೇ ಕಟ್ಕಂತೆ'' ಅಂತ. ಅಂಗಡೀಲಿ ಕುಕಂಡಿದಿರ್ ಕಾಣಿ ಜಗ್ಗು ಮಾಸ್ಟ್ರು, ಮಕ್ಕಿ ಗೆದ್ದಿ ಕುಷ್ಟನಾಯ್ಕ ಎಲ್ಲವೂ ಜೋರು ನೆಗಾಡಿರು ಗೋವಿಂದಜ್ಜ ಹೇಳಿದ್ದು ಕೇಂಡು.

ಹೀಗಿಂದಿರ್ ನಮ್ಮ ಗೋವಿಂದಜ್ಜ, ಅವ್ರು ಶಾಲೆಗೆ ಹ್ವಾದ್ದು ಕಮ್ಮಿಯೇ. ಒಂದು ಏಳೆಂಟು ಕ್ಲಾಸ್ ಓದಿರೋ ಏನೋ. ಆರೂ ಗಪ್ಪಾಸ್ ಇಂಗ್ಲಿಷ್ ಹೊಡಿ ಹಾರ್ಸುತಿದಿರ್. ನಾವೆಲ್ಲ ಮಕ್ಕಳು ಕೇಂಬುಕಿದಿತ್ ಅವ್ರ ಹತ್ರ. ಇಂಗ್ಲಿಷಿನಾಗೆ ಅದಕ್ಕೆಂತ ಹೇಳ್ತ್ರು? ಇದಕ್ಕೆಂತ

ಹೇಳುತ್ರು? ಅಂತ. ಒಂದ್ಸರಿ ನಾನು ಅವ್ರತ್ರ ಕೇಂಡೆ. 'ಅಜ್ಜಯ್ಯ ಗೋಂಟಡಿಕೆಗೆ ಎಂತ ಹೇಳುತ್ರು' ಅಂತ. ಅದಕ್ಕವ್ರು ಹೇಳಿರು – 'ಗೋಂಟ್‌ನಟ್' ಅಂತ.

'ಯಂತದೋ ಏನೋ ಇವತ್ತು ಇಪ್ಪವ್ರು ನಾಳಿಗೆ ಇಪ್ಪುದಿಲ್ಲೆ' – ಇದನ್ನ ಇಂಗ್ಲಿಷಿಲಿ ಹ್ಯಾಂಗೆ ಹೇಳಲಕ್ಕು ಅಜ್ಜಯ್ಯ ಅಂತ ಕೇಂಡುದ್ದುಕ್ಕೆ ಅವ್ರು ಹೇಳ್ರು – 'ವಾಟೋ ವಾಟೋ ಟುಡೇ ಸೀನ್ ಮ್ಯಾನ್ ಟುಮಾರೋ ನೋ' ಅಂತ.

ಅಜ್ಜಯ್ಯ ಒಂದ್ಸಾರಿ ನಾವು ಮೂರು ಜನ ಮೊಮ್ಮಕ್ಳನ್ನ ಸಾವ್ಕಾರ್ ಶೀನಪ್ಪ ಶೆಟ್ರ ಮನಿಗೆ ಕರ್ಕೊಂಡು ಹೋಯಿ ಅವ್ರ ಮನೆಲಿದ್ದ ಇಲೆಟ್ರಿ ದೀಪನ್ನ ನಮಗೆ ತೋರ್‌ಸಿರ್. ಗ್ವಾಡಿ ಮೇಲೆ ಒಂದು ಕಪ್ಪು ಬಣ್ಣದ್ ಚಡಿ. ಅದನ್ನ ಕೆಳಗೆ ಒತ್ತಿರೆ ಸಾಕು. ಮಾಡಿಗೆ ನೇಲ್ಸಿ ಹಾಕಿದ ಬಲ್ಬು ಪಳಕ್ ಅಂತ ಮಿಂಚುತ್ತು. ಕೋಣೆ ತುಂಬ ಬೆಳ್ಕು. ಚುಮಣಿ ದೀಪದ್ದ್ ಬೆಳಕೆಲ್ಲಿ ಇದೆಲ್ಲಿ? ಹ್ಯಾಶರೆ ಎಂದು ಹೇಳಿ ನಾವೆಲ್ಲ ಕೊಣುಕೇ ಶುರು ಮಾಡಿ ಬಿಟ್ಟೊ, ನಾವಿನ್ನು ಅಲ್ಲಿ ಹೆಚ್ಚಿನ ಕಿತಾಪತಿ ಮಾಡುಕಾಗ ಅಂತ ಅಜ್ಜಯ್ಯ ನಮ್ಮನ್ನ ವಾಪಾಸ್ ಕರ್ಕೊಂಡು ಹೊರ್‌ಟ್ರು.

ದಾರಿ ಮೇಲೆ ನಾನು ಕೇಂಡೆ. 'ಅದ್ಹೇಂಗೆ ಆ ಬಲ್ಬಿಲಿ ದೀಪ ಬತ್ತುತ್ತು' ಅಂತ. ಅದಕ್ಕೆ ಅಜ್ಜ ಹೇಳ್ರು, 'ಗೌರ್ಮೆಂಟಿನವ್ರು ದೊಡ್ಡ ಟ್ಯಾಂಕಿಲಿ ತುಂಬ ಚಿಮಣಿ ಎಣ್ಣೆ ತುಂಬ್ಸಿಟ್ಟಿದ್ರು. ಆ ಬಲ್ಬಿನ ಮೇಲೆ ಸಪೂರದ್ದು ಬಳ್ಳಿ ಇತ್ತು ಕಂಡಿಯಾ – ಅದ್ರ ಒಳ್ಗೆ ಈ ಎಣ್ಣೆ ಬತ್ತ್‌ತ್ತು. ಗ್ವಾಡಿ ಮ್ಯಾಲಿತ್ತಲೆ ಈ ಚುಚ್ ಹಾಕಿದ್ ಕೂಡ್ಲೆ ಬಲ್ಬಿನ ವಳ್ಗೆ ಬೆಂಕಿ ಬತ್ತು. ಯಣ್ಣೆ ಬೊಟ್ಟು-ಬೊಟ್ಟು-ಬೊಟ್ಟು ಬಲ್ಬಿನೊಳ್ಗೆ ಬೀಳ್ತಾ ಇರ್‌ತ್ತ್. ದೀಪ ನೊಂಗಿ ಹೋತ್ತಿಲ್ಲೆ ಉರಿತಾ ಇರುತ್ತ್. ನಾ ಹೇಳಿದ್ದು ಮಂಡಿಗೆ ಹೊಕ್ಕಿತಾ ಮಕ್ಳೇ' ಅಂತ ಕೇಂಡ್ರು.

ಆರೂ ನನ್ಗೆ ಸಮಾಧಾನ ಆಯಿಲ್ಲೆ. 'ಅಲ್ಲ, ಎಣ್ಣೆ ಬರ್ಲಿ ವಯರಾಂಗೆ ಸಮ. ಪಳಕ್ಕಂತ ದೀಪ ಉರಿತ್ತಲೆ ಅದು ಹೇಂಗೆ' ಅಂತ ಮತ್ತೆ ಕೇಂಡೆ. ಅಜ್ಜಯ್ಯನಿಗೂ ಗೊತ್ತಾಗ್ಲಿಲ್ಲೆ ಅಂತ ಕಾಣುತ್ತು. 'ಮಣಿ, ಸುಮ್ನೆ ಬತ್ತಿಯಾ, ಬೆನ್ನಿಗೆ ಬಡಿಗಿ ಬೇಕಾ?' ಅಂತ ಕೇಂಡ್ರು. ಅವ್ರಿಗೆ ಯಂತಾರೂ ಅಂಜಾಜಾಯಿಲ್ಲೆ ಅಂತಾದ್ರೆ ಹೀಂಗೇ ಹೇಳುದವ್ರು. ನಾವೆಲ್ಲ ಬಾಯ್ಮುಚ್ಚಿಕೊಂಡು ಬಿಟ್ಟೊ.

ಹೀಂಗೆ, ಅಜ್ಜಯ್ಯ ನಮಗೆಲ್ಲ ತೋರ್ಸಿ ಅದ್ಯಂತ, ಅದು ಹೇಂಗೆ ಅಂತೆಲ್ಲ ಹೇಳ್ತಿದಿರು. ಶೆಟ್ರು ಮನಿಗೆ ಗ್ರಾಂಫೋನ್ ಕಾಂಬುಕೆ ನಮ್ಮನ್ನ ಕರ್ಕೊಂಡು ಹೋಪೋತಿಗೇ ನನ್ನ ಕೆಮಿ ಹಿಂಡಿ ಹೇಳಿರ್ – 'ಇಕಾ ಅಲ್ಲಿ ಯಂತ ಸಾ ಮಾತಾಡುಕಾಗ. ಮತ್ತೆ ಮನಿಗೆ ಬಂದ್ಮೇಲೆ ಯಂತ ಬೇಕಾರೆ ಕೇಣಿ – ಗೊತ್ತಾಯ್ತಲ್ದ?' ಅಂತ. ಆಮೇಲೆ ಗೊತ್ತಾಯ್ತು. ಆ ಪ್ಲೇಟು ತಿರುಗುತಿಗೆ ಅದ್ರ ಮೇಲೆ ಮುಳ್ಳು ಇಟ್ಟು ಬಿಟ್ರೆ ಸಾಕು. ಆ ಗ್ರಾಂಫೋನ್ ಪೆಟ್ಟಿಗೆ ವಳ್ಗೆ ಇದ್ರಲೆ ಪದ ಹೇಳು ಪಿಶಾಚಿಗಳು-ಒಂದೊಂದೇ ರಾಗ ತೆಗಿಯುಕೆ ಶುರು ಮಾಡ್ತೊ. ಆ ಮುಳ್ಳು ಅವಕ್ಕೆಲ್ಲ ಯಮ ಯಾತ್ನೆ ಕೊಡುತ್ತಂಬ್ರು. ಅಜ್ಜಯ್ಯನೇ ಹೇಳಿದ್ದು.

ಈ ಗೋವಿಂದಜ್ಜ ಕತೆ ಹೇಳುಕೆ ಶುರು ಮಾಡ್ರೆ ನಾವು ಮೂರು ಜನ ಮಾತ್ರ ಅಲ್ಲ, ಮನಿಲಿದ್ದ ದೊಡ್ಡವ್ರೂ ಬಂದು ಕುಕಂತಿದಿರ್. ಎಲ್ಲ ಕೇಂಬವ್ರೇ. ಎಂತೆಂತಾ ರಾಕ್ಷಸರ ಕತೆ

ಗುತ್ತಿತ್ತಾ? ಕೆಲವುಕ್ಕೆ ಮಂಡಿ ಮೇಲೆ ಒಂದು ಕೊಂಬು ಒಕ್ಕಣ್ಣ ರಾಕ್ಷಸಿ, ಮನುಷ್ಯನ ತಲೆ ಬುರುಡೆ ವಳ್ಗಿಂದ ಸಾರಾಯಿ ಕುಡಿವ ರಾಕ್ಷಸ – ಆಕಾಶದಲ್ಲಿ ತೇಲಿಕೊಂಡೇ ಬಂದು ದೆನಿನ ಮೇಲೋ ಕುದ್ರಿ ಮೇಲೋ ಸವಾರಿ ಮಾಡ್ತನಲೇ, ಆ ರಾಕ್ಷಸ. ಹೀಂಗೆ – ಭಾರೀ ರಂಗು ರಂಗಿನ ಕತೆಗ್ಳನ್ನ ಅಜ್ಜಯ್ಯ ಭಾರೀ ಚಂದ ಮಾಡಿ ಹೇಳ್ತಿದಿರು.

ಹೀಂಗಿದ್ ಗೋವಿಂದಜ್ಜ ಒಂದ್ಸರಿ ಮನಿಕ್ಕಂಬಿಟ್ರು. ಏಳುಕೇ ಆಗ. ನಾವೆಲ್ಲ ಬೈಸರಿ ಶಾಲೆ ಮುಗ್ಸಿ ಬಂದ್ ಅವ್ರು ಮಂಚ್‌ದ ಹತ್ರ ನಿತ್ಕಂಡ್ ಕೇಂಬುಕೆ ಶುರು ಮಾಡಿದೊ. 'ನಿಮ್ಗೆಂತಾಯಿತ್ತ್, ಏಗ್ಳಿಗೆ ನಮ್ಮೊಟ್ಟಿಗೆ ಬತ್ರೀ' – ಅಂತ.

ಅದಕ್ಕವ್ರು – 'ನೀವು ಯಂತ ಹೆದರ್ಬೇಡಿ ಮಕ್ಳೆ. ಅಂವ ಒಬ್ಬ ರಾಕ್ಷಸ. ಮೂರು ಕಣ್ಣಿನವ – ನನ್ಹತ್ರ ಲಡಾಯಿಗೆ ಬಂದಿದ್ದ. ಬರ್ಲಿ – ನಾನವ್ನ ಹತ್ರ ಹೋಯಿಕ್ಕಿ. ಅವನ್ನ ಸೋಲ್ಸಿ ಮತ್ತೆ ಸಮಾ ಆಯಿ ಬತ್ತೆ ಅಕ್ಕಾ' ಅಂತ್ಹೇಳಿರು. ಆಮೇಲೆ ಅವ್ರು ಮಾತಾಡೂದೂ ಕೈದಾಯ್ತು. ಮೂರ್ನೆ, ನಾಕ್ನೆ ಕ್ಲಾಸಿಲಿಪ್ಪೊ ನಮ್ಗೆ ಯಂತದೂ ಗೊತ್ತಾಯಿಲ್ಲೆ. ಒಂದಿನ ಅವ್ರುನ್ನ ಎಲ್ಲವ್ರೂ ಹೊತ್ಕೊಂಡು ಹೋಯಿ ಎದ್ರಿನ ಗೆದ್ದೆಲ್ಯೇ ಸುಟ್ಟು ಹಾಕಿರ್. ಅಲ್ಲಿ ಒಂದು ಬೊಂಡನ್ನ ವಟ್ಟೆ ಮಾಡಿ ಇಟ್ಟಿದ್ರು. ನಾವು ಸುಮಾರು ಒಂದು ತಿಂಗ್ಳು ಬೆಳಗಾ ಮುಂಚೆ ಹೋಯಿ – 'ನಂ ಗೋವಿಂದಜ್ಜ ಬೊಂಡ ಕುಡಿಯುಕೆ ಬಂದಿದ್ರಾ – ರಾಕ್ಷಸನ ಹತ್ರ ಲಡಾಯಿ ಮಾಡಿ ಮಾಡಿ ಅವ್ರಿಗೆ ಎಷ್ಟು ಸಾಕಾಯಿತ್ತೋ ಏನೋ' ಅಂತ ಹೇಳ್ಕೊಂಡು ಬಪ್ಪುದೇ ಆಯ್ತು. ಗೋವಿಂದಜ್ಜ ಮತ್ತೆ ಬರ್ಲೇ ಇಲ್ಲೆ.

✵

---

## ಗೆಲುವು

ಏನಾದ್ರೂ ಮಾಡಿ ಈ ಮ್ಯಾಚ್ ಗೆಲ್ಲಬೇಕು ಹೋರಿ ಹೊಸಾ ಬಾಲ್ ತಗೊಂಬಾ ಅಂತ ಐನೂರು ರೂಪಾಯಿ ಕೊಟ್ಟು ಸುಬ್ಬುನ ಕಳಿಸಿದರೆ ಅವನು ಹೊಸ ಬಾಲ್ ತರಲೇ ಇಲ್ಲ. ಯಾಕೋ ಅಂತ ಕೇಳಿದರೆ ಮ್ಯಾಚ್ ಗೆಲ್ಲೋಕೆ ಹೊಸಾ ಬಾಲ್ ಏನೂ ಬೇಡ, ಐನೂರು ರೂಪಾಯ್ನ ನಾನು ಅಂಪೈರ್‌ಗೆ ಕೊಟ್ಟಿದ್ದೀನಿ ಅಂದ.

-ಸುಕೇಶವ

# ಅಸಹಕಾರ ಆಂದೋಲನ

**- ಅರುಂಧತಿ ಜೋಶಿ**

**ಶೀ**ರ್ಷಿಕೆಯನ್ನು ನೋಡಿ ಯಾವುದೋ ರಾಜಕೀಯ ಆಂದೋಲನ ಎಂದು ತಿಳಿದುಕೊಳ್ಳಬಾರದು. ನಮ್ಮ ನಿಮ್ಮ ದೈನಂದಿನ ಜೀವನದಲ್ಲಿ, ಯಾವಾಗಲಾದರೊಮ್ಮೆ ಅನುಭವಿಸಿರುವ ದೈಹಿಕ ಯಾತನೆಯ ಒಂದು ಮುಖವೆಂದು, ನಾನು ಅನುಭವಿಸಿದ ಮೇಲೆ ಅರಿವಾದ ಸತ್ಯ.

ಮಳೆಗಾಲ ಮುಗಿದು ಮಾಗಿಯ ಚಳಿಯ ನಡುಕ ಶುರುವಾದಾಗ, ಮಂಡಿ ನೋವು ಹೆಚ್ಚಾಗಿ, ಮೊಣಕಾಲ ಕೀಲು ಅಸಹಕಾರ ಆಂದೋಲನವನ್ನು ಸಾರಿದ ಮೇಲೆ, ಆಗಾಗ ಕಾಡುತ್ತಿದ್ದ ನೋವು ''ದಿನ್ ದುಗುನಾ, ರಾತ್ ಚೌಗುನಾ'' ಎಂದು ಉಲ್ಬಣಿಸಿತು.

ನನ್ನ ಚಟುವಟಿಕೆಗಳಿಗೆ ಇತಿ ಶ್ರೀ ಹಾಡಬೇಕಾಗುವುದೇನೋ ಎನ್ನುವ ಅನುಮಾನ ಒಳಗೊಳಗೇ ಕಾಡಲಿಕ್ಕೆ ಶುರುಮಾಡಿತ್ತು. ಆದರೂ ಮನಸ್ಸನ್ನು ಶಾನೆ ಗಟ್ಟಿ ಮಾಡ್ಕೊಂಡು, ಕಿತ್ತೂರು ರಾಣಿ ಚೆನ್ನಮ್ಮ, ಝೂನ್ಸಿ ರಾಣಿ ಲಕ್ಷ್ಮಿಬಾಯಿಯಂತೆ ಟೊಂಕಕ್ಕೆ ಸೆರಗನ್ನು ಬಿಗಿದು, ಎದ್ದುನಿಂತು ಹೋರಾಟಕ್ಕೆ ಸಿದ್ಧವಾಗ ಬೇಕೆನಿಸಿತು. ಸಧ್ಯಕ್ಕೆ ಕಾಲ್ನಡಿಗೆಯಲ್ಲಿ ಹೊರಗೆ ಸುತ್ತಾಡುವುದನ್ನು ಎರಡರಿಂದ ಒಂದು ಕಿಲೋಮೀಟರಿಗೆ ಕುಗ್ಗಿಸಿ, ತೇಕುತ್ತ, ಕುಂಟುತ್ತ ನಡಿಯ ಬೇಕಾಗಿದ್ದರೂ, ಸೋಲನ್ನು ಒಪ್ಪಿಕೊಳ್ಳದೇ, ನಿಧಾನವಾಗಿ ನನ್ನ ನಡಿಗೆ ನಿಲ್ಲದೇ ಮುಂದೆ ಸಾಗಿತ್ತು. ಮೊಣಕಾಲಿಗೆ ಕವಚವನ್ನು ತೊಡಿಸಿ, ಕೀಲುನೋವಿನ ಉಪಶಮನಕ್ಕೆ ದಾರಿ ಹುಡುಕುತ್ತ, ಅದರ ವಿರುದ್ಧ ಸಮರ ಸಾರಲು ಸಿದ್ಧಳಾದೆ.

ಡಿಸೆಂಬರ್ ತಿಂಗಳಿನಲ್ಲಿ ಸಂಗೀತೋತ್ಸವಗಳು ಸಂಭ್ರಮದಿಂದ ನಡೆಯುತ್ತಿದ್ದ ಕಾಲವೊಂದಿತ್ತು. ಈಗ ವರ್ಷವಿಡೀ ಸಂಗೀತಲೋಕದ ಹೆಸರಾಂತ ಸಂತ ಸತ್ಪುರುಷರ ಹೆಸರಿನಲ್ಲಿ ಕಾರ್ಯಕ್ರಮಗಳು ಸಾಲಾಗಿ ನಡೆಯುತ್ತಿರುತ್ತೆ. ತ್ಯಾಗರಾಜರ ಆರಾಧನೆ, ಪುರಂದರ ದಾಸರ ಪುಣ್ಯತಿಥಿ ಮತ್ತು ರಾಮನವಮಿ ಎಂದು ಬಿಡುವಿಲ್ಲದೇ ಸಂಗೀತದ ಪತಾಕೆಯನ್ನು ಹಾರಿಸುತ್ತಾರೆ. ಆದರೂ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಒಂದು ವಿಶಿಷ್ಟ ಕಳೆ ಇರುತ್ತಿತ್ತು. ಚಳಿಗಾಲವನ್ನು ಸ್ವಾಗತಿಸಲು ಕಪಾಟಿನ ಒಳಗಿನಿಂದ ಸ್ವೆಟರ್, ಮಫ್ಲರ್ ಮತ್ತು ಶಾಲುಗಳನ್ನು ಹೊರತೆಗೆದು, ಪ್ರದರ್ಶನಕ್ಕೆ ಯೋಗ್ಯವಾಗಿರಲೆಂದು ಡ್ರೈಕ್ಲೀನಿಂಗ್ ಅಂಗಡಿಗೆ ಒಯ್ದು ಕೊಡುತ್ತಿದ್ದೆವು. ಬಿಸಿಲಿನ ಮುಖ ನೋಡದೇ, ಹೊರಗಿನ ಗಾಳಿಯ ಸೇವನೆ ಮಾಡದೇ, ಗೃಹ ಬಂಧಿಯಾಗಿದ್ದ ಕಾಲ ಮುಗಿದು ಕಪಾಟಿನಿಂದ ಬಿಡುಗಡೆ ಆದೆವಲ್ಲ ಎಂದು ಸಂಭ್ರಮಿಸುತ್ತಾ ತಮ್ಮ ಬಣ್ಣ ಬಣ್ಣದ ಸೌಂದರ್ಯವನ್ನು ಪ್ರದರ್ಶಿಸುತ್ತಾ, ಮೆರೆಯುವುದಕ್ಕೆ ಅವಕಾಶ ಸಿಕ್ಕಿತೆಂದು, ಹಿಗ್ಗುತ್ತಿದ್ದ ಉಣ್ಣೆ ಬಟ್ಟೆಗಳ ಮೆರವಣಿಗೆ ನಡೆಯುತ್ತಿತ್ತು.

ಮಂಡಿ ಕೀಲಿನ ನೋವು ಉಲ್ಬಣಿಸಿದ್ದರೂ, ಸಂಗೀತ ಕೇಳುವುದಕ್ಕೆ, ನೃತ್ಯದ ಕಾರ್ಯಕ್ರಮಗಳನ್ನು ನೋಡುವುದಕ್ಕೆ ಕಿವಿ, ಕಣ್ಣು, ಕೀಲು ಅಡ್ಡಿ ಮಾಡಲಿಲ್ಲ. ಇಂಪಾದ ಸಂಗೀತ ಮತ್ತು ನೃತ್ಯದ ಸೊಬಗು ನೋವನ್ನು ಮರೆಯುವ ಹಾಗೆ ಮಾಡಿತ್ತು. ಕಾರ್ಯಕ್ರಮ ಮುಗಿದ ಮೇಲೆ ಹೊರಡುವಾಗ, ಎದ್ದು ಹೆಜ್ಜೆ ಇಡುವುದಕ್ಕೆ ಸ್ವಲ್ಪ ಕಷ್ಟವೆನಿಸಿದರೂ, ಸಂಗೀತ ಕೇಳಿದ ತೃಪ್ತಿಯಲ್ಲಿ ಅದರ ಕಾಟ ಮರೆತು ಹೋಗಿತ್ತು. ಕಾರಿನ ಕಡೆ ಹೆಜ್ಜೆ ಇಟ್ಟಾಗ, ಯಜಮಾನರ ಹೆಗಲನ್ನು ಹಿಡಿದುಕೊಂಡೇ ಸಾಗಬೇಕಾದ ಅನಿವಾರ್ಯತೆ ಎದುರಾದಾಗ, ಜೀವನಪರ್ಯಂತ ಹೆಗಲು ಕೊಟ್ಟಿರಬೇಕಾದರೆ, ಇದು ಅದರೊಲ್ಲೊಂದು ಅಧ್ಯಾಯ ಎಂದು ಒಪ್ಪಿಕೊಂಡುಬಿಟ್ಟರೆ ರಗಳೆ ಇಲ್ಲ.

ಕಚೇರಿಗಳನ್ನು ಕೇಳುತ್ತ ಆನಂದಿಸುತ್ತ, ಒಂದು ವಾರ ಕಳೆದಿತ್ತು. ಕಚೇರಿ ಕೇಳುತ್ತಿದ್ದಾಗ ಒಮ್ಮೆ ಅತಿಯಾದ ಬಾಯಾರಿಕೆಯ ಕಾಟ ತಡೆಯೋದಿಕ್ಕೆ ಆಗದಿದ್ದಾಗ ನನ್ನ ಪರದಾಟ ಶುರುವಾಯಿತು. ನೀರಿನ ಬಾಟಲಿಯನ್ನು ಮರೆತುಬಂದಿದ್ದೆ. ಸಭಾಂಗಣದಿಂದ ಹೊರಗೆ ಬಂದು ಅಲ್ಲೇ ಚುರುಕಾಗಿ ವ್ಯಾಪಾರ ನಡೆಸುತ್ತಿದ್ದ ಪಾನೀಯದಂಗಡಿಯಲ್ಲಿ ನೀರು ಕುಡಿದು, ಸುಮ್ಮನಿರಬಹುದಿತ್ತು. ಅಲ್ಲಿ ಜ್ಯೂಸ್ ತರಿಸಿ ಕುಡಿಯುವ ಚಪಲ ಜೋರಾದಾಗ, ಅದನ್ನು ತರಿಸಿ ಕುಡಿದಾಗ, ಮುಂದೆ ಅನುಭವಿಸಬೇಕಾದ ಸಂಕಷ್ಟದ ಪರಿವೆ ಇಲ್ಲದೆ ಸಂಗೀತ ಕೇಳಲು ಮತ್ತೆ ಒಳಗೆ ಬಂದು ಕುಳಿತೆ. ಮನೆಗೆ ಬಂದ ಮೇಲೆ ಸುಧಾರಿಸಿಕೊಳ್ಳುವಷ್ಟರಲ್ಲಿ ಗಂಟಲು ಯಾಕೋ ಕೆರೆದಂತಾಗಿ ಕಾಟ ಕೊಡಲು ಶುರುಮಾಡಿತ್ತು. ಬೆಳಗ್ಗೆ ಎದ್ದಾಗ ಗಂಟಲು ಗೊರಗೊರ ಶಬ್ದ ಮಾಡುತ್ತ, ಒಂದು ಶುಭಗಳಿಗೆಯಲ್ಲಿ, ಮಾತನಾಡಿದರೆ ಗಂಟಲನ್ನು ಅದುಮಿ ಹಿಡಿದಂತಾಗಿ ಶಬ್ದ ಹೊರಡದೇ ಬಿಗಿಯಾಗಿ ಮುಷ್ಕರ ಹೂಡಿತ್ತು. ಮಂಡಿಕೀಲಿನ ಜೊತೆ ಈಗ ಗಂಟಲ ಸರದಿ. ಬಿಟ್ಟಿ ಸಲಹೆಗಳನ್ನು ಕೊಡುವ ಹಿತೈಷಿಗಳು ನನ್ನ ಸುತ್ತಮುತ್ತ ಇರುವಾಗ ಆಳಿಗೊಂದು ಸಲಹೆಯನ್ನು ಕೊಡುತ್ತಿದ್ದರು. ಕೈವೈದ್ಯ, ಆಯುರ್ವೇದ, ಹೋಮಿಯೋಪತಿ, ಅಲೋಪತಿ, ನೇಚುರೋಪತಿಯೆಂದು ಪತಿಗಳ ಸಾಲು ಸುತ್ತಿದ್ದರೂ ಕೊನೆಗೆ ನನಗೆ ಬೇಕಾದ ಪತಿಯನ್ನು ಆಯ್ಕೆಮಾಡಿ, ಪತಿರಾಯರ ಜೊತೆ ದವಾಖಾನೆಗೆ ಹೋದರೆ ಅಲ್ಲಿ ಡಾಕ್ಟರ್ ಮಹಾಶಯರು ಸಹ ಸಲಹೆಗಳ ಪಟ್ಟಿಯನ್ನೇ ಮುಂದಿಟ್ಟರು. ಮುಖ್ಯವಾಗಿ ಹತ್ತು ದಿನ ಮಾತನಾಡದೇ ಗಂಟಲಿಗೆ ವಿಶ್ರಾಂತಿ ಕೊಡಿ ಎಂದು ಹೇಳಿದ್ದಲ್ಲದೇ, ಲಿಖಿತ ಸಲಹೆಯನ್ನು ಬರೆದು ಭರ್ಜರಿ ಫೀಸ್ ವಸೂಲಿ ಮಾಡಿ ಕೈ ತೊಳೆದುಕೊಂಡು ಬಿಟ್ಟರು.

ನನ್ನ ಗೆಳತಿಯರ ಗುಂಪಿನಲ್ಲಿ ನನ್ನ ವಾಕಿಂಗ್ ಗೆಳತಿಯರಿಗೆ ನನ್ನ ಅವಸ್ಥೆಯನ್ನು ನೋಡಿ ಕರುಣೆ ಉಕ್ಕಿಬಂದು, ಕನಿಕರದಿಂದ ನನಗೆ ಸಾಂತ್ವನ ಹೇಳಿದರು. ''ಹೋಗಲಿ ಬಿಡಿ ಆಂಟಿ, ಬೇಜಾರು ಮಾಡ್ಕೊ ಬೇಡಿ. ಸ್ವಲ್ಪ ದಿನವಷ್ಟೇ, ಮತ್ತೆ ನಿಮ್ಮ ಮಾತಿನ ಹುರುಪು ನಮ್ಮ ಮಧ್ಯ ಇದ್ದೇ ಇರುತ್ತೆ. ಡಾಕ್ಟರಿನ ಸಲಹೆಯಂತೆ ಒಂದ್ಹತ್ತು ದಿನ ಮೌನವ್ರತವನ್ನು ಆಚರಿಸಿ ಬಿಡಿ. ವಿಶ್ರಾಂತಿ ತೆಗೆದುಕೊಳ್ಳಿ'' ಎಂದು ಸಮಾಧಾನದ ನಾಲ್ಕು ಮಾತನ್ನಾಡಿ ಹೊರಟುಬಿಟ್ಟರು.

ಸಧ್ಯ! ಒಂದ್ಹತ್ತು ದಿನ ಈಯಮ್ಮನ ಕೊರೆತ ತಪ್ಪುತ್ತೆಂದು ಒಳಗೊಳಗೆ ನಿಟ್ಟುಸಿರನ್ನು ಬಿಟ್ಟಿರಲೂಬಹುದು.

ಕಿವಿ ನೆಟ್ಟಗಿದ್ದಿದ್ದರಿಂದ ಸುತ್ತಿನವರ ಮಾತಿಗೆ ಕಿವಿ ಕೊಟ್ಟು ಸಂಭಾಷಣೆ ರಹಿತ ಹಾವಭಾವದ ಪ್ರದರ್ಶನ ಮಾಡ್ತಾ ಓಡಾಡ್ತಿದ್ರೆ, ''ಮೂಕಾಭಿನಯದ ಸ್ಪರ್ಧೆಯಲ್ಲಿ ಭಾಗವಹಿಸಿದರೆ ಖಂಡಿತ ಬಹುಮಾನ ಗಿಟ್ಟಿಸಿ ಕೊಂಡ್ಬಂದ್ಬಿಡ್ತಿ'' ಎಂದು ಮಕ್ಕಳು ಲೇವಡಿ ಮಾಡ್ತಾ ಹಿಂದೆ ಮುಂದೆ ಓಡಾಡ್ತಿದ್ರು. ''ಬೇಗ ಗುಣ ಮಾಡಪ್ಪ, ಗಣಪ್ಪ'' ಎಂದು ದೊಡ್ಡ ಗಣಪತಿಗೆ ಹರಕೆ ಹೊತ್ಕೊಂಡಿದ್ದೂ ಆಯ್ತು.

ಮನೆಯಲ್ಲಿ, ನನ್ನ ಸನ್ನೆಯ ಭಂಗಿ, ನಾಟ್ಯ ಶಾಲೆಯಲ್ಲಿ ನೃತ್ಯವನ್ನು ಕಲಿಯದಿದ್ರೂ ತೋರಿಸುತ್ತಿದ್ದ ನೃತ್ಯ ಭಂಗಿ, ಇವೆಲ್ಲವನ್ನೂ ಅರ್ಥಮಾಡಿಕೊಂಡು, ಜವಾಬು ಕೊಡುತ್ತ ಕಾಲಹರಣ ಮಾಡೋದು ನಿಷ್ಪ್ರಯೋಜಕವೆಂದೂ ಎಲ್ಲರೂ ಹೊರಟು ಬಿಡುತ್ತಿದ್ದರು. ಯಾರೂ ನನ್ನ ಉಸಾಬರಿಗೆ ಬರ್ತಿರಲಿಲ್ಲ. ತಮಗೆ ತೋಚಿದ ಹಾಗೆ, ಟೀಕಾಪ್ರಹಾರದ ಭಯವಿಲ್ದೇ ನಿಭಾಯಿಸಿಕೊಂಡು ಹೋಗ್ತಿದ್ರು. ಬೇರೆ ದಾರಿಯಿಲ್ದೇ ಕುಂಟುತ್ತ ಅಲ್ಲಿ ಇಲ್ಲಿ ಓಡಾಡೋದನ್ನ ಬಿಟ್ರೆ, ಮಾಡೋದಿಕ್ಕೆ ಬೇರೇನು ಕೆಲಸ ಇರಲಿಲ್ಲ. ಕಡೆಯಪಕ್ಷ ಕೆಲಸದ ನಿಂಗಿಯಾದ್ರೂ, ನನ್ನ ಹತ್ರ ಕುಳಿತು, ಹರಟೆ ಕೊಚ್ಚಬಹುದೆಂದು ಕೊಂಡ್ರೆ, ನನ್ನನ್ನು ನೋಡಿದ ಕೂಡಲೇ, ''ಹೇಗಿದ್ದೀರಿ ಅಮ್ಮಾವ್ರೇ'' ಎಂದು ದುಃಖ ವಿಚಾರಿಸುವ ದಾಟಿಯಲ್ಲಿ, ಯೋಗಕ್ಷೇಮವನ್ನು ವಿಚಾರಿಸಿ, ಅಲ್ಲಿಂದ ಜಾರ್ಕೊಂಡು ಹೋಗಿ ಬಿಡುತ್ತಿದ್ಲು. ಮತ್ತೆ ನನ್ನ ಹತ್ತಿರ ಸುಳಿತಿರ್ಲಿಲ್ಲ. ಯಜಮಾನರಂತೂ ತಾವು ಏನು ಮಾಡಿದರೂ ''ಅದು ಸರಿಯಿಲ್ಲ, ಹೀಗೆ ಮಾಡಿ ಹಾಗೆ ಮಾಡಿ'' ಎಂದು ಟೀಕಿಸುವ ತಾಕತ್ತು ಈಗ ನನಗಿಲ್ಲವೆಂದು, ನಿರಾಳವಾಗಿ ಹಾಡನ್ನು ಗುನುಗುತ್ತ, ಆಗೊಮ್ಮೆ, ಈಗೊಮ್ಮೆ, ನನ್ನ ಕಡೆ ಕರುಣಾ ಕಟಾಕ್ಷವನ್ನು ಬೀರುತ್ತ ಓಡಾಡುತ್ತಿದ್ರು.

ಮುಳುಗುವವನಿಗೆ ಮೇಲೇಳಲು ಒಂದು ಹುಲ್ಲು ಕಡ್ಡಿಯ ಆಸರೆ ಸಿಕ್ಕರೆ ಸಾಕಂತೆ. ಹಾಗೇ, ನನ್ನ ಕೊನೆಯ ಅಸ್ತ್ರವಾಗಿ ಪೇಪರು ಪೆನ್ನನ್ನು ಸಂಪರ್ಕದ ಕೊಂಡಿಯಾಗಿ ಬಳಸಬೇಕೆಂದು ನಿರ್ಧಾರ ಮಾಡಿದೆ.

''ಬರೆದಿದ್ದನ್ನಾದರೂ ಓದಿ ಉತ್ತರ ಕೊಡಿ'' ಎಂದು ಬರೆದು ಮುಂದೆ ಹಿಡಿದರೂ ಗುಬ್ಬಿ ಮೇಲೆ ಬ್ರಹಾಸ್ತ್ರ ಬಿಟ್ಟ ಹಾಗೆ ಆಗಿತ್ತು. ಒಟ್ಟಾರೆ ನನ್ನ ಜೀವನ ತಾತ್ಕಾಲಿಕವಾಗಿ ನಿಶ್ಯಬ್ಧದ, ಶಬ್ದರಹಿತವಾದ ಮೌನರಾಗದಲ್ಲಿ ತೇಲಿ ಹೋಗುತ್ತಿತ್ತು. ಶಬ್ದಮಾಲಿನ್ಯದಲ್ಲಿ ನನ್ನ ಪಾತ್ರ ಇಲ್ಲದಿದ್ದ ಮೇಲೆ, ಸುತ್ತಿರುವವರ ಗಲಾಟೆ ಹೆಚ್ಚು ಕೇಳಿಸುತ್ತದೆ. ಆದರೆ ಪ್ರತಿಭಟಿಸುವ ಸ್ಥಿತಿಯಲ್ಲಿ ನಾನಿಲ್ಲ. ಸಧ್ಯದಲ್ಲೇ ಬಲವಂತದ ಮೌನವ್ರತದಿಂದ ಅದರ ಹಿಡಿತದಿಂದ ಹೊರಬಂದರೆ ಬಂದು ಬಾಂಧವರ ಮುಖಾರವಿಂದದ ಮೇಲೆ ಕಾಣಿಸುವ ಪ್ರತಿಕ್ರಿಯೆ ಹೇಗಿರಬಹುದೆಂದು ನೋಡುವ ಕುತೂಹಲ ನನಗಿದೆ.

# ಸೆಕ್ಯುರಿಟಿ ತಂದ ಪಜೀತಿ

- ಡಿ.ವಿ. ಗುರುಪ್ರಸಾದ್

**ಪೊ**ಲೀಸ್‌ಅಧಿಕಾರಿಯಾಗಿ ವಿವಿದ ಬಗೆಯ ವ್ಯಕ್ತಿಗಳಿಂದ ತಮ್ಮ ರಕ್ಷಣೆಗಾಗಿ ಭದ್ರತಾ ಸಿಬ್ಬಂದಿ ನಿಯೋಜಿಸಿ ಎಂಬ ಪದೇ ಪದೇ ಹಲವಾರು ಬೇಡಿಕೆಗಳನ್ನು ಸ್ವೀಕರಿಸಿರುವ ನನಗೆ ಭದ್ರತಾ ಸಿಬ್ಬಂದಿಯಿಂದ ಆಗುವ ಅನುಕೂಲಕ್ಕಿಂತಾ ಅನಾನುಕೂಲವೇ ಹೆಚ್ಚು ಎಂದು ಅವರುಗಳಿಗೆ ಎಷ್ಟೇ ಹೇಳಿದರೂ ಅವರುಗಳಂತೂ ಸುಮ್ಮನಾಗುತ್ತಿರಲೇ ಇಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಮುಂದೆ ಅಥವಾ ಹಿಂದೆ ಸಫಾರಿ ಸೂಟ್ ಧರಿಸಿದ ಜನ ಓಡಾಡುತ್ತಿದ್ದರೆ ಆತ ವಿಐಪಿ. ಇತರರು ಜನರು ಭಾವಿಸುವುದು ಸಹಜವೇ. ಸಮಾಜದಲ್ಲಿ ತಮ್ಮ ಸ್ಥಾನಮಾನವನ್ನು ಇತರರಿಗೆ ತೋರಿಸೋಣ ಎನ್ನುವ ಸ್ಟೇಟಸ್ ಸಿಂಬಲ್‌ಗಾಗಿ ಭದ್ರತಾ ಸಿಬ್ಬಂದಿಯನ್ನು ಪಡೆಯುವುದೇ ವಾಡಿಕೆ. ಆದರೆ ಬಹಳ ಜನ ಮರೆಯುವ ವಿಷಯ ಏನೆಂದರೆ ಹಿಂದೆ ಮುಂದೆ ಓಡಾಡುತ್ತಿರುವ ಸಿಬ್ಬಂದಿಯಿಂದ ಆ ವ್ಯಕ್ತಿಗೆ ತೊಂದರೆ ಕೊಡಬೇಕಾದ ಗುಂಪಿಗೆ ಈತನೇ ವಿಐಪಿ ಎಂದು ಬಹಳ ಬೇಗ ಖಾತ್ರಿಯಾಗುವುದಂತೂ ಖಚಿತ. ಏಕೆಂದರೆ ಹಿಂದೆ ಮುಂದೆ ಯಾರು ಸೆಕ್ಯುರಿಟಿ ಇಲ್ಲದೇ ಹೋದಲ್ಲಿ ಈತನೊಬ್ಬ ಮಾಮೂಲೀ ಜುಜುಬಿ ಮನುಷ್ಯ ಎಂದುಕೊಂಡು ಆತಂಕವಾದಿಗಳು ಅವನತ್ತ ಕಣ್ಣು ಹಾಯಿಸದೇ ಇರಬಹುದು. ಇದೇ ಕಾರಣಕ್ಕಾಗಿಯೇ ನಾನು ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದರೂ ನನ್ನದೇ ವೈಯಕ್ತಿಕ ಭದ್ರತೆಯ ದೃಷ್ಟಿಯಿಂದ ಎಲ್ಲಿ ಹೋದರೂ ನನ್ನ ಹಿಂದೆ ಮುಂದೆ ಸಫಾರಿ ಸೂಟ್ ಧರಿಸಿದ ಅಥವಾ ಸ್ಟನ್‌ಗನ್ ಹಿಡಿದಿರುವ ವ್ಯಕ್ತಿಗಳನ್ನು ಇಟ್ಟುಕೊಳ್ಳದೇ ನಾನೊಬ್ಬನೇ ಓಡಾಡುತ್ತಿದ್ದೆ. ಅನಾಮಿ ಕತನದಲ್ಲೇ ಅತಿ ಹೆಚ್ಚಿನ ಭದ್ರತೆ ಎನ್ನುವ ಮಾತಿನಲ್ಲಿ ನಂಬಿಕೆ ಇಟ್ಟವ ನಾನು. ಅಲ್ಲದೆ ಭದ್ರತಾ ಸಿಬ್ಬಂದಿಯಿಂದ ಮುಜುಗರತೇ ಜಾಸ್ತಿ ಎಂದೂ ನನ್ನ ಭಾವನೆಯಾಗಿತ್ತು.

ಕೆಲವು ವರ್ಷಗಳ ಹಿಂದೆ ನನಗೆ ಕಾರ್ಯ ನಿಮಿತ್ತ ಮಣಿಪುರ ರಾಜ್ಯಕ್ಕೆ ಹೋಗಬೇಕಾಯಿತು. ನನ್ನದೇ ಐಪಿಎಸ್ ತಂಡದ ಅಧಿಕಾರಿ ಆ ರಾಜ್ಯದ ಪೊಲೀಸ್ ಮುಖ್ಯಸ್ಥರಾಗಿದ್ದರು. ಅವನಿಗೆ ಫೋನ್ ಮಾಡಿದ ನಾನು ನನ್ನ ಪ್ರವಾಸದ ಬಗ್ಗೆ ತಿಳಿಸಿ ನನಗೆ ಮಣಿಪುರದಲ್ಲಿ ಓಡಾಡಲು ವಾಹನ ಹಾಗೂ ಉಳಿದುಕೊಳ್ಳಲು ಸ್ಥಳದ ವ್ಯವಸ್ಥೆ ಕೇಳಿದೆ. ಆತ ಬಹಳ ಸಂತೋಷದಿಂದ ಒಪ್ಪಿಕೊಂಡ. ಆತಂಕವಾದಿಗಳ ಹೆದರಿಕೆಯಿಂದ ಮಣಿಪುರಕ್ಕೆ ಯಾರೂ ಬರುವುದೇ ಇಲ್ಲ. ನೀನಾದರೂ ಬರುತ್ತಿದ್ದೀಯಲ್ಲಾ ಇಷ್ಟು ವರ್ಷಗಳ ನಂತರ ನಾವು ಭೇಟಿಯಾಗುತ್ತಿದ್ದೇವೆ. ನಿನಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನೂ ಮಾಡುತ್ತೇನೆ. ಖಂಡಿತ ಬಾ, ಇಬ್ಬರೂ ಸಾಕಷ್ಟು ಸಮಯ ಕುಳಿತು ಹರಟೆ ಹೊಡೆಯೋಣ ಎಂದ.

ನಾನು ಮಣಿಪುರದ ಇಂಫಾಲ್ ವಿಮಾನ ನಿಲ್ದಾಣ ಇಳಿದಾಗ ಪೊಲೀಸ್ ಅಧಿಕಾರಿ ಒಬ್ಬ ನನ್ನ ಹೆಸರಿನ ಫಲಕವನ್ನು ಹಿಡಿದುಕೊಂಡಿದ್ದ. ನಾನು ಅವನತ್ತ ಹೋದ ಕೂಡಲೇ ಅವನು

ನಿಮ್ಮನ್ನು ರಿಸೀವ್ ಮಾಡಿಕೊಳ್ಳಲು ನನ್ನನ್ನು ಕಳುಹಿಸಿಕೊಡಲಾಗಿದೆ. ನಾನು ನಿಮ್ಮ ಭದ್ರತಾ ಅಧಿಕಾರಿ. ನೀವು ಈ ಊರು ಬಿಡುವವರೆಗೂ ನಾನು ನಿಮ್ಮ ಜೊತೆಯೇ ಇರುತ್ತೇನೆ ಎಂದ. ಸರಿ ಬಾರಪ್ಪ ಎಂದೆ. ನಾನು ಸ್ವಲ್ಪ ಮುಂದೆ ಹೋಗುತ್ತಲೇ ನನ್ನನ್ನು ಆರು ಜನ ಕಮಾಂಡೋಗಳು ಸುತ್ತುವರಿದರು. ನೇರವಾಗಿ ಬುಲೆಟ್ ಪ್ರೂಫ್ ವಾಹನವೊಂದಕ್ಕೆ ಕರೆದೊಯ್ದು ನನ್ನನ್ನು ಕೂರಿಸಿ ಬಾಗಿಲು ಹಾಕಿದರು. ನನ್ನ ಮುಂದೆ ಒಂದು ತೆರೆದ ಜೀಪಿನಲ್ಲಿ 10 ಜನ ಬಂದೂಕುದಾರಿ ಕಮಾಂಡೋಗಳು, ನನ್ನ ಹಿಂದುಗಡೆ ತೆರೆದ ಜೀಪಿನಲ್ಲಿ 10 ಜನ ಕಮಾಂಡೋಗಳು ಇಂಫಾಲ್ ವಿಮಾನ ನಿಲ್ದಾಣದಿಂದ ನಾನು ಉಳಿದುಕೊಳ್ಳಬೇಕಾಗಿದ್ದ ವಸತಿಗೃಹದವರೆಗೂ ಹತ್ತು ಕಿ.ಮೀ. ದೂರದ ದಾರಿಯಲ್ಲಿ ನನ್ನ ವಾಹನ ಯಾವ ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಂತರೂ ಮುಂದುಗಡೆ ಅಥವಾ ಹಿಂದುಗಡೆ ವಾಹನದಲ್ಲಿದ್ದ ಕಮಾಂಡೋಗಳು ಬಂದು ನನ್ನ ಕಾರಿನ ಸುತ್ತ ಉಂಗುರದಂತೆ ನಿಂತುಬಿಡುತ್ತಿದ್ದರು. ನನಗೋ ಈ ಅನುಭವ ಹೊಸತು. ಅಂತೂ ನಾನೂ ವಿಐಪಿ ಆಗಿಬಿಟ್ಟೆ ಎಂದು ಸಮಾಧಾನ ಪಟ್ಟುಕೊಂಡು ವಸತಿ ಗೃಹಕ್ಕೆ ಹೋದೆ. ಪೊಲೀಸ್ ವಸತಿಗೃಹವಾದ್ದರಿಂದ ಏಳು ಸುತ್ತಿನಕೋಟೆಯಂತೆ ಅಲ್ಲಿ ಭದ್ರತೆಇತ್ತು. ಅದೇ ದಿನ ಸಂಜೆ ನನ್ನ ಗೆಳೆಯ ಭೇಟಿಯಾದ. ನಿಮ್ಮ ರಾಜ್ಯದ ಪ್ರೇಕ್ಷಣೀಯ ಸ್ಥಳಗಳಿಗೆ ನನ್ನನ್ನು ಕಳುಹಿಸು ಎಂದೆ. ಸಂತೋಷದಿಂದಲೇ ಒಪ್ಪಿಕೊಂಡ.

ಮಾರನೇದಿನ ಬೆಳಿಗ್ಗೆ ಸರಿಯಾಗಿ 6 ಗಂಟೆಗೆ ನನ್ನ ಭದ್ರತಾಅಧಿಕಾರಿ ಹಾಜರಾದ. ಸರ್ ಇಂದು ನಾವು ನಮ್ಮ ರಾಜ್ಯದ ಪ್ರಸಿದ್ದ ಲೋಕ್‌ಟಾಕ್ ಸರೋವರಕ್ಕೆ ಹೋಗುತ್ತಿದ್ದೇವೆ. ಇಲ್ಲಿಂದ ಸರಿಯಾಗಿ 3 ಗಂಟೆಗಳ ಪಯಣ. ಆ ಜಾಗಕ್ಕೆ ಹೋಗಬೇಕಾದರೆ ಆತಂಕವಾದಿಗಳು ಹೆಚ್ಚಾಗಿರುವ ಎರಡು ಜಿಲ್ಲೆಗಳನ್ನು ದಾಟಬೇಕು. ಹೀಗಾಗಿ ನಿಮಗೆ ಇನ್ನೂ ಹೆಚ್ಚಿನ ಭದ್ರತೆ ಕೊಡಬೇಕಾದ ಅವಶ್ಯಕತೆ ಇದೆ. ಹಾದಿಯಲ್ಲಿ ಬಾಂಬ್‌ಗಳನ್ನು ಇಟ್ಟಿರುವ ಸಾಧ್ಯತೆಯೂ ಇದೆ. ಹೀಗಾಗಿ ನಿಮ್ಮನ್ನು ಬೇರೆ ರೀತಿಯ ಬಾಂಬ್ ಪ್ರೂಫ್ ವಾಹನದಲ್ಲಿ ಕರೆದೊಯ್ಯುತ್ತೇವೆ ಎಂದ. ಸರಿ ಎಂದೆ.

ಸರಿಯಾಗಿ ಬೆಳಿಗ್ಗೆ 9.30ಕ್ಕೆ ತಯಾರಾಗಿ ಇಂಫಾಲ್ ಬಿಟ್ಟೆ ವಿಶೇಷ ರೀತಿಯ ವಾಹನವೊಂದರಲ್ಲಿ ನನ್ನನ್ನು ಕರೆದೊಯ್ದರು. ನನ್ನ ಡ್ರೈವರ್ ಜೊತೆಗೆ ಭದ್ರತಾ ಅಧಿಕಾರಿ ನನ್ನ ವಾಹನದಲ್ಲಿ ಕುಳಿತಿದ್ದ. ಕಿಟಕಿಗೆ ಹಾಗೂ ವಿಂಡ್ ಸ್ಕ್ರೀನ್‌ಗೆ ಬುಲೆಟ್ ಪ್ರೂಪ್ ಆದ ಹಸಿರು ಬಣ್ಣದ ಗಾಜುಗಳನ್ನು ಅಳವಡಿಸಿದ್ದರಿಂದ ಹೊರಗಿನ ದೃಶ್ಯಗಳು ಮಸುಕು ಮಸುಕಾಗಿಯೇ ಕಾಣುತ್ತಿದ್ದವು. ಮುಂದುಗಡೆ ಎರಡು ವಾಹನಗಳಲ್ಲಿ ಕಮಾಂಡೋಗಳು ಇದ್ದರು. ಹಿಂದುಗಡೆ ಎರಡು ವಾಹನಗಳಲ್ಲಿ ಕಮಾಂಡೋಗಳು. ಹಾಗೂ ಹೀಗೂ 2 ಗಂಟೆಗಳ ಪ್ರವಾಸದ ನಂತರ ಪರವಾಗಿಲ್ಲಪ್ಪ ನನಗೇನೂ ಆಗಲಿಲ್ಲ ಎಂದುಕೊಳ್ಳುವಷ್ಟರಲ್ಲಿ ಹತ್ತಿರದಲ್ಲೇ ಒಂದು ಸಣ್ಣಘಟನೆ ನಡೆದಿತ್ತು. ಸೈಕಲ್ ಒಂದಕ್ಕೆ ಬಾಂಬ್ ಇಟ್ಟು ಆತಂಕವಾದಿಗಳು ಬಾಂಬ್ ಸಿಡಿಸಿದ್ದರು. 5 ಜನರ ಹೆಣಗಳು ರಸ್ತೆಯಲ್ಲಿ ಬಿದ್ದಿದ್ದವು. ಆ ಸ್ಥಳವನ್ನು ದಾಟಿಕೊಂಡು ಮುಂದೆ ಲೋಕ್‌ಟಾಕ್ ಸರೋವರ ತಲುಪಿದೆವು. ನಾನು ವಾಹನದಿಂದ ಇಳಿದೆ. ಬೆಳಗಿನ ಜಾವ ಹೆಚ್ಚಾಗಿ ನೀರುಕುಡಿದಿದ್ದರಿಂದ ನನಗೆ ಮೂತ್ರಾಲಯಕ್ಕೆ ಹೋಗಬೇಕಾಗಿತ್ತು. ನನ್ನ

ಭದ್ರತಾಅಧಿಕಾರಿಗೆ ಇಲ್ಲಿ ಎಲ್ಲಾದರು ಹತ್ತಿರ ಇರುವ ಐ.ಬಿ.ಗೆ ಹೋಗೋಣ, ನಾನು ಮೂತ್ರ ಮಾಡಬೇಕು ಎಂದೆ. ಅವನು ಆಗಲಿ ಎಂದು ನನ್ನನ್ನು ಒಂದು ಐ.ಬಿ.ಗೆ ಕರೆದುಕೊಂಡು ಹೋದ. ನನ್ನ ಹಣೆಬರಹಕ್ಕೆ ಆ ಐ.ಬಿ.ಯಲ್ಲಿ ಇದ್ದಂತಹ ಟಾಯ್ಲೆಟ್ ದುರಸ್ಥಿಯಲ್ಲಿತ್ತು. ಇದೇನಪ್ಪಾ ಗ್ರಹಚಾರ ಎಂದು ಹಾಗೆಯೇ ವಾಪಸ್ಸಾದೆ. ಇಲ್ಲಿ ಎಲ್ಲೂ ಹತ್ತಿರದಲ್ಲಿ ಬೇರೆ ಟಾಯ್ಲೆಟ್ಇಲ್ಲವೇ ಎಂದು ಕೇಳಿದೆ. ಇಲ್ಲ ಎಂದ. ಇನ್ನೇನೂ ಮಾಡಲು ಆಗುವುದಿಲ್ಲವಲ್ಲಾ ಎಂದು ಲೋಕ್‌ಟಾಕ್ ಸರೋವರದಲ್ಲಿ ನೋಡಬೇಕಾದ್ದನ್ನು ನೋಡಿಕೊಂಡು ಮುಂದಿನ ಜಾಗಕ್ಕೆ ಹೋಗೋಣ ಎಂದು ಕಾರ್‌ನಲ್ಲಿ ಕುಳಿತೆ.

ಕಾರ್ ಮುಂದಕ್ಕೆ ಹೋಯಿತು. ಅಲ್ಲಿಂದ ನಾವು ಹೋಗಬೇಕಾದ ಊರಿನ ರಸ್ತೆ ಕಚ್ಚಾ ರಸ್ತೆ. ಬರೀ ಗುಂಡಿಗಳಿಂದ ತುಂಬಿತ್ತು. ಒಂದೊಂದು ಗುಂಡಿಯಲ್ಲಿ ನಮ್ಮ ಕಾರ್ ಇಳಿದಾಗಲೂ ನನ್ನ ಬ್ಲಾಡರ್‌ಚೀರಾಟ ನಡೆಸಿತ್ತು. ಅಷ್ಟರಲ್ಲಿ ನಮ್ಮ ವಾಹನದ ಏರ್‌ಕಂಡಿಷನರ್ ಕೂಡ ಕೆಟ್ಟು ಹೋಯಿತು ಎಂದನಿಸುತ್ತದೆ. ಭಾರೀ ಶೆಖೆ. ಕಿಟಕಿ ತೆರೆಯಿರಪ್ಪಾ ಎಂದೆ. ಇಲ್ಲಾ ಸಾರ್ ಇದು ಬುಲೆಟ್ ಫ್ರೂಫ್ ವಾಹನ ಕಿಟಕಿತೆಗೆದರೆ ಆತಂಕವಾದಿಗಳು ಗುಂಡು ಹಾರಿಸಿ ನಿಮ್ಮನ್ನು ಸಾಯಿಸುತ್ತಾರೆ ಎಂದ ನನ್ನ ಭದ್ರತಾ ಅಧಿಕಾರಿ. ಮತ್ತೆ ವಾಹನ ಮುಂದೆ ಚಲಿಸಿತು.

ಅರ್ಧಗಂಟೆ ಕಳೆಯುವಷ್ಟರಲ್ಲಿ ನನಗೆ ಪ್ರಾಣವೇ ಹೋದ ಹಾಗಾಯಿತು. ಒಂದುಕಡೆ ತಡೆಯಲಾರದ ಶೆಖೆ. ಇನ್ನೊಂದಡೆ ಮೂತ್ರ ತಡೆದುಕೊಂಡು ಹೊಟ್ಟೆನೋವು. ಕಡೆಗೆ ನಾನೇ ಜೋರುದನಿಯಲ್ಲಿ ''ನಿಲ್ಲಿಸಿ ಕಾರ್'' ಎಂದೆ, ಕಾರ್ ನಿಂತಿತು. ''ಬಾಗಿಲು ತೆರೆಯಿರಿ'' ಎಂದು ಕಿರುಚಿದೆ. ಬಾಗಿಲು ತೆರೆದರು ನಾನು ಕಾರಿನ ಕೆಳಗೆ ಇಳಿದ ಕೂಡಲೇ ಹತ್ತು ಕಮಾಂಡೋಗಳು ಎಕೆ.56 ಬಂದೂಕುಗಳನ್ನು ಹಿಡಿದು ನನ್ನನ್ನು ಸುತ್ತುವರಿದರು. ನೀವೆಲ್ಲಾ ದೂರ ಸರಿಯಿರಿ ಎಂದು ಹಿಂದಿ ಭಾಷೆಯಲ್ಲಿ ಜೋರುದನಿಯಲ್ಲಿ ಹೇಳಿದೆ. ಅವರುಗಳಿಗೆ ಏನು ಮಾಡಬೇಕು ಎಂದು ತೋಚಲಿಲ್ಲ.

ಅಷ್ಟರಲ್ಲಿ ಕಮಾಂಡೋ ಒಬ್ಬನ ಹೆಸರು ನೋಡಿದೆ ''ಲಕ್ಷಣನ್'' ಎಂದು ಬರೆದಿತ್ತು. ನನಗೆ ಮೂತ್ರಕ್ಕೆ ತುಂಬಾ ಅವಸರವಾಗಿದೆ ಎಂದು ಅವನಿಗೆ ತಮಿಳಿನಲ್ಲಿ ಹೇಳಿದೆ. ಅವನು ಸರಿ ಎಂದು ತನ್ನ ಜತೆಗಾರರಿಗೆ ಏನೋ ಹೇಳಿದ. ಇಬ್ಬರು ಕಮಾಂಡೋಗಳು ನನ್ನ ಎಡಬಲದಲ್ಲಿ, ನಾಲ್ಕು ಜನ ನಾನು ಇರುವ ಜಾಗದಿಂದ ಆರೇಳು ಅಡಿ ದೂರದಲ್ಲಿ ಬಂದರು. ಲಕ್ಷಣನ್ ನನ್ನನ್ನು ಒಂದು ಜಾಗಕ್ಕೆ ಕರೆದೊಯ್ದು ಈ ಜಾಗ ಪರವಾಗಿಲ್ಲವೇ ಎಂದ. ಯಾವ ಜಾಗವಾದರೂ ಪರವಾಗಿಲ್ಲ ಆದರೆ ನೀವೆಲ್ಲಾ ದೂರ ಹೋಗಿ ಎಂದೆ. ನನ್ನ ಮಾತನ್ನು ಯಾರೂ ಕೇಳಲಿಲ್ಲ. ವಿಧಿಯಿಲ್ಲದೆ ಪ್ರಕೃತಿ ನಿಯಮ ಪೂರೈಸಿದೆ.

ಆಹಾ ಎಂದು ನಿಟ್ಟುಸಿರು ಬಿಟ್ಟು ನನ್ನ ಕಾರಿಗೆ ವಾಪಸ್ಸಾಗಿ ಪ್ರಯಾಣ ಮಂದುವರಿಸಿದೆ. ಒಂದು ದಿನಕ್ಕೂ ವಿಐಪಿ ಆಗುವುದು ಬೇಡ ಭದ್ರತಾ ಸಿಬ್ಬಂದಿಯ ಅನುಕೂಲವಂತೂ ಬೇಡವೇ ಬೇಡ ಎಂದು ಅಂದೇ ನಿರ್ಧರಿಸಿದೆ.

✵

# ಗಾಸಿಪ್‌ರಾಜ

**- ಅಣ್ಣಾಸ್ವಾಮಿ ಮೊದಲಿಯಾರ್**

''**ನಮ್ಮ** ರಾಜಣ್ಣ ಅದೇ, ನನ್ನ ಬಾಲ್ಯ ಗೆಳೆಯ ರಾಜಣ್ಣ ನಿಮಗೆ ಗೊತ್ತಿರಬೇಕಲ್ಲ!''

''ಏನಂದ್ರೀ ಗೊತ್ತಿಲ್ಲವೇ?! ಅಯ್ಯೋ ರಾಮ ನಾನು ನೋಡಿ, ಗಾಸಿಪ್ ಪತ್ರಿಕೆ ಸಂಪಾದಕ ಗಾಸಿಪ್‌ರಾಜ ಅಂದ್ರೆ ಎಲ್ಲರಿಗೂ ಗೊತ್ತಾಗುತ್ತೇ!'' ಅವನ ಬಗ್ಗೇನೆ ಹೇಳೋಕೆ ಹೊರಟೆ.

ನಾನು ಅವನು ಹುಟ್ಟಿ ಬೆಳೆದದ್ದು ಒಂದೇ ಹಳ್ಳಿಯಲ್ಲಿ, ಅವನ ಮನೆ ನಮ್ಮ ಮನೆ ಅಕ್ಕಪಕ್ಕದ ಮನೆಗಳು. ಅವನ ತಂದೆ ಶ್ಯಾನುಭೋಗರಾಗಿದ್ದರು. ಭಲೇ ತರಲೆ ಮನುಷ್ಯ! ತಾನೇ ಇಬ್ಬರ ಮಧ್ಯೆ ವ್ಯಾಜ್ಯ ತಂದು ಹಾಕಿ ತಮಾಷೆ ನೋಡುವ ಮನುಷ್ಯ. ನಂತರ, ತಾನೇ ಮುಂದೆ ನಿಂತು ಇಬ್ಬರ ವ್ಯಾಜ್ಯ ನಿಲ್ಲಿಸಿ, ಇಬ್ಬರಿಂದಲೂ ಕೈ ಬೆಚ್ಚಗೆ ಮಾಡಿಕೊಳ್ಳುವ ಹವ್ಯಾಸ. ಅದಕ್ಕೇ ಜನ ''ಅವನ ಸಹವಾಸ ಕರಡಿ ಸಹವಾಸ!'' ಅನ್ನುತ್ತಿದ್ದರು. ಈ ಶ್ಯಾನುಭೋಗರಿಗೆ ಮೂರು ಹೆಣ್ಣುಮಕ್ಕಳ ನಂತರ ಹುಟ್ಟಿದವನು ರಾಜಣ್ಣ. ಒಬ್ಬನೇ ಮಗ! ಕೇಳಬೇಕೆ ಮನೆಯಲ್ಲಿ ಯುವರಾಜನಂತೆ ಬೆಳೆದ. ಅವನ ತಾಯಿ ಅನ್ನಪೂರ್ಣಮ್ಮ ಮಹಾಸಾಧ್ವಿ. ಮೂವರು ಹೆಣ್ಣುಮಕ್ಕಳೂ ತಾಯಿಯಂತೆ ಸಾಧು ಸ್ವಭಾವದವರು. ಇವನು ಮಾತ್ರ ತಂದೆಯಂತೆ! ಕೆಲವು ಗುಣಗಳಲ್ಲಿ ತಂದೆಯನ್ನು ಮೀರಿಸುತ್ತಿದ್ದ.

ಶಾಲೆಯಲ್ಲಿ ನನ್ನ ಸಹಪಾಠಿ, ಪಕ್ಕದ ಮನೆಯ ಗೆಳೆಯ, ನನ್ನ ವಯಸ್ಸಿನವನು, ಬೀದಿಯ ಹುಡುಗರ ನಾಯಕ, ಹುಡುಗರ ಗುಂಪಿಗೆ ಅವನು ರಾಜ, ನಾನು ಸೇನಾಧಿಪತಿ. ರಾಜ ನೀಡುವ ಆಜ್ಞೆಯನ್ನು ಸೇನಾಧಿಪತಿಯಾದ ನಾನು ನನ್ನ ಗುಂಪಿನೊಂದಿಗೆ ಹೋಗಿ ನಡೆಸಬೇಕು. ಇದು ರಾಜಣ್ಣನ ರಾಜ್ಯಭಾರ. ಇವನ ರಾಜ್ಯಭಾರದಲ್ಲಿ ನಮ್ಮೂರಿನ ಜನ ತಲ್ಲಣಗೊಂಡಿದ್ದರು. ''ಅವನ ಜೊತೆ ಸೇರಬೇಡ! ಕೆಟ್ಟು ಹೋಗ್ತೀಯ!!'' ಎಂದು ನಮ್ಮ ಮನೆಯಲ್ಲಿ ಛೀಮಾರಿ ಹಾಕಿದರೂ, ನನ್ನ ಅವನ ಗೆಳೆತನ ಪ್ರೈಮರಿ ಶಾಲೆಯಿಂದ ಕಾಲೇಜಿನಲ್ಲಿ ಓದಿ ಪದವೀಧರರಾಗುವವರೆಗೆ ಮುಂದುವರಿದಿತ್ತು. ರಾಜಣ್ಣನ ವರ್ಚಸ್ಸು-ವ್ಯಕ್ತಿತ್ವ ಹಾಗಿತ್ತು. ಅವನು ನಡೆಸುವ ದಂಡಯಾತ್ರೆಯಲ್ಲಿ ನಮಗೆ ಏನೋ ಒಂದು ರೀತಿಯ ಮೋಜು. ಅವನ ದಂಡಯಾತ್ರೆ ಯಾರನ್ನೂ ಬಿಟ್ಟಿದ್ದಿಲ್ಲ.

ಊರಮುಂದಿನ ಮಾವಿನ ತೋಪಿನಲ್ಲಿ ಇವನ ರಾಯಸಭೆ ನಡೆಯುತ್ತಿತ್ತು. ಕಾಮಣ್ಣನ ಹಬ್ಬ ಬಂದರೆ ಯಾರ್‍ಯಾರ ಮನೆ ಹಿತ್ತಲಿಗೆ ನುಗ್ಗಬೇಕು, ಯಾವ ತೋಪಿನಲ್ಲಿ ಯಾವ ಹಣ್ಣುಗಳನ್ನು ತರಬೇಕು, ಪಟೇಲರ ತೆಂಗಿನ ತೋಪಿನಿಂದ ಎಳನೀರುಗಳನ್ನು, ಗುಡಿಬಳಿಯ ಬಾಲ್ಯದ ಮರದ ಹಣ್ಣುಗಳನ್ನು ಕೀಳುವುದು ಹೇಗೆ? ಇವೆಲ್ಲ ಅವನ ರಾಜದರ್ಬಾರಿನಲ್ಲಿ ನಡೆಯುವ ಚರ್ಚೆಗಳು.

ಈ ಯೋಜನೆಗಳು ಕಾರ್ಯಗತವಾದಾಗ ಊರಿನವರು ಕಂಗಾಲು!

ಪ್ರೈಮರಿ ಸ್ಕೂಲಿನಲ್ಲಿ ಓದುವಾಗ ಕನ್ನಡ ವ್ಯಾಕರಣದ ಮೇಷ್ಟ್ರು ಮಾತಿಗೆ ಮುಂಚೆ ಬಿದಿರಿನ ಕಡ್ಡಿಯಿಂದ ಹೊಡೆಯುತ್ತಿದ್ದರು. ಸವರ್ಣದೀರ್ಘಸಂಧಿ, ಯಣ್‌ಸಂಧಿ, ಲೋಪಸಂಧಿ, ಬಹೂರ್ವಿೀಹಿಸಮಾಸ ಮೊದಲಾದ ವ್ಯಾಕರಣ ಸೂತ್ರಗಳನ್ನು ಸರಿಯಾಗಿ ಹೇಳದಿದ್ದರೆ ಮೈ ಬಾಸುಂಡೆ ಬರುವ ಹಾಗೆ ಹೊಡೆಯುತ್ತಿದ್ದರು. ಅವರ ಮೇಲೆ ರಾಜಣ್ಣನ ಕಣ್ಣುಬಿತ್ತು. ಅವರಿಗೆ ನಶ್ಯಹಾಕುವ ಚಟವಿತ್ತು. ಒಂದು ದಿನ ನಶ್ಯದ ಡಬ್ಬಿಯನ್ನು ಟೇಬಲ್ಲಿನ ಮೇಲಿಟ್ಟು ತೂಕಡಿಸುತ್ತಿದ್ದರು. ಯಾವಾಗಲೂ ಜೇಬಿನಲ್ಲಿ ಸಿದ್ದವಾಗಿಟ್ಟಿರುತ್ತಿದ್ದ ಖಾರದಪುಡಿಯನ್ನು ರಾಜಣ್ಣ ಡಬ್ಬದಲ್ಲಿದ್ದ ನಶ್ಯದ ಪುಡಿ ಜೊತೆ ಬೆರಸಿ ತೆಪ್ಪಗೆ ಕುಳಿತ. ಎಚ್ಚರವಾದ ಮೇಲೆ ಕನ್ನಡ ವ್ಯಾಕರಣದ ಮೇಷ್ಟ್ರು ನಶ್ಯದ ಪುಡಿ ಮೂಗಿಗೇರಿಸಿ ತಾಂಡವ ನೃತ್ಯ ಮಾಡತೊಡಗಿದರು. ರಾಜಣ್ಣ ಮತ್ತವನ ಹಿಂಬಾಲಕರು ಬೆಂಚು ಕುಟ್ಟಿ ತಾಳಹಾಕತೊಡಗಿದರು. ಆಸ್ಪತ್ರೆ ಸೇರಿದ ಮಾಸ್ತರರು ಮತ್ತೆ ಶಾಲೆಗೆ ಬರಲಿಲ್ಲ. ಟ್ರಾನ್ಸ್‌ಫರ್ ಮಾಡಿಸಿಕೊಂಡು ಬೇರೆ ಶಾಲೆಗೆ ಪರಾರಿಯಾದರು.

ಹೈಸ್ಕೂಲಿನಲ್ಲಿ ಓದುವಾಗ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕರೆದೊಯ್ಯಲು ಶಾಲೆಯ ಪರವಾಗಿ ಐತಿಹಾಸಿಕ ಸ್ಥಳಗಳಾದ ಅಜಂತಾ, ಎಲ್ಲೋರ, ಬಾದಾಮಿ, ಐಹೊಳೆ ಸ್ಥಳಗಳಿಗೆ ಟ್ರಿಪ್ ಹಾಕಿದರು. ನಮ್ಮ ಶಾಲೆಯಲ್ಲಿ ವಿದ್ಯಾರ್ಥಿನಿಯರೂ ಇದ್ದ ಕಾರಣ, ಇಬ್ಬರು ಉಪಾಧ್ಯಾಯಿನಿಯರು, ನಾಲ್ಕುಜನ ಉಪಾಧ್ಯಾಯರು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಜೊತೆ ಹೊರಟರು. ಪ್ರಯಾಣ ಅಚ್ಚುಕಟ್ಟಾಗಿತ್ತು. ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರು. ರಾಜಣ್ಣ ಒಂದು ಕ್ಯಾಮರಾವನ್ನು ತಂದಿದ್ದ. ಅದನ್ನು ಕುತ್ತಿಗೆಗೆ ತಗುಲಿ ಹಾಕಿಕೊಂಡು ಜಬರ್‌ದಸ್ತಾಗಿ ಬಂದಿದ್ದ. ಕಂಡ ಕಲ್ಲುಗಳನ್ನು ಮರಗಿಡಗಳನ್ನು ಗುಹೆಗಳನ್ನು ಶಿಲ್ಪಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯುತ್ತಿದ್ದ. ಬಾದಾಮಿಯಲ್ಲಿ ನಾವು ಗುಹಾಂತರ ದೇವಾಲಯಗಳನ್ನು ನೋಡುವಾಗ, ದಿಗಂತ್ ಮಾಸ್ತರು, ರಮ್ಯಾ ಮಿಸ್ ತಪ್ಪಿಸಿಕೊಂಡು ಬಿಟ್ಟರು. ನಮ್ಮನ್ನೆಲ್ಲಾ ಒಂದು ಕಡೆ ನಿಲ್ಲಿಸಿ ಮಾಸ್ತರುಗಳು ಅವರನ್ನು ಹುಡುಕಲು ಹೋದರು. ರಾಜಣ್ಣ ಅವರಿಗೆ ತಿಳಿಯದ ಹಾಗೆ ತಾನೂ ಹೋದ. ಅರ್ಧಘಂಟೆಯ ನಂತರ ಉಪಾಧ್ಯಾಯರು ದಿಗಂತ್ ಸಾರ್ ಮತ್ತು ರಮ್ಯಾ ಮೇಡಂರನ್ನು ಹುಡುಕಿ ಕರಕೊಂಡು ಬಂದರು. ಅವರ ಹಿಂದೆ ರಾಜಣ್ಣನೂ ಬಂದು ನಮ್ಮ ಜೊತೆ ಸೇರಿಕೊಂಡ. ಊರಿಗೆ ವಾಪಸ್ಸಾದ ಮೇಲೆ ಐತಿಹಾಸಿಕ ಪ್ರದೇಶಗಳ ಪ್ರವಾಸ ಕುರಿತು ಎಲ್ಲರೂ ಪ್ರಬಂಧ ಕೊಡಬೇಕಾಯಿತು. ಪ್ರಬಂಧ ಸ್ಪರ್ಧೆಯಲ್ಲಿ ರಾಜಣ್ಣನ ಲೇಖನಕ್ಕೆ ಬಹುಮಾನ ಬಂತು. ಮುಖ್ಯೋಪಾಧ್ಯಾಯರು 'ರಾಜಣ್ಣನ ಲೇಖನ ಪತ್ರಿಕಾ ವರದಿಯಂತಿದೆ!' ಎಂದು ಶ್ಲಾಘಿಸಿದರು. ರಾಜಣ್ಣ ಪರ್ತಕರ್ತನಾಗುವ ಕನಸು ಕಾಣತೊಡಗಿದ.

ಟೆಸ್ಟ್‌ನಲ್ಲಿ ಕಾಪಿ ಮಾಡುತ್ತಿದ್ದ ರಾಜಣ್ಣ ದಿಗಂತ್ ಮಾಸ್ತರಿಗೆ ಸಿಕ್ಕಿಬಿದ್ದ. ದಿಗಂತ್ ಮಾಸ್ತರರು ಅವನನ್ನು ಹೆಡ್ಮಾಸ್ಟರ ಬಳಿಗೆ ಕರೆದುಕೊಂಡು ಹೋಗಿ ದೂರು ನೀಡಿ ಅವನನ್ನು ಶಾಲೆಗೆ ಬರದಂತೆ ಒಂದುವಾರ ಸಸ್ಪೆಂಡ್ ಮಾಡಿದರು.

ಮಾರನೆಯ ದಿನ ಊರಿನಲ್ಲಿ ಕಾಂಪೌಂಡುಗಳ ಮೇಲೆ, ಶಾಲೆಯ ಗೋಡೆಯ ಮೇಲೆ ದಿಗಂತ್ ಮಾಸ್ತಾರು ಮತ್ತು ರಮ್ಯಾ ಮೇಡಂ ಬಗ್ಗೆ ಬಣ್ಣಬಣ್ಣದ ಕಥೆಗಳನ್ನು ಬರೆಯಲಾಗಿತ್ತು. ಶಾಲೆಯಲ್ಲಿ ದೊಡ್ಡ ಸುದ್ದಿಯಾಯಿತು. ಲೋಕಲ್ ಪೇಪರ್ ತುಂಬ ಇದೇ ಸುದ್ದಿ. ಜೊತೆಗೆ ದಿಗಂತ್ ಮೇಷ್ಟ್ರು ಮತ್ತು ರಮ್ಯಾ ಮೇಡಂ ಪರಸ್ಪರ ತೋಳ ಬಂಧಿಗಳಾಗಿರುವ ನಾನಾ ರೀತಿಯ ಫೋಟೋಗಳು ಅಚ್ಚಾಗಿದ್ದವು. ಊರಿನಲ್ಲಿ ದೊಡ್ಡ ರಗಳೆಯಾಯಿತು. ಈ ವದಂತಿ ಹರಡಿದವರ್ಯಾರು ತಿಳಿಯಲಿಲ್ಲ! ರಮ್ಯಾ ಮೇಡಂ ಮನೆಯವರು ಮತ್ತು ದಿಗಂತ್ ಸಾರ್ ಮನೆಯವರಿಗೂ ಜಗಳ, ಪಂಚಾಯಿತಿಯಾಗಿ ಇಬ್ಬರ ಪ್ರೇಮಪ್ರಕರಣ ನಿಜವೆಂದು ಸಾಬೀತಾಗಿ ಕೊನೆಗೆ ಅವರಿಬ್ಬರ ಮದುವೆಯಲ್ಲಿ ಕೊನೆಗೊಂಡಿತು. ಬೇಕೆಂದೇ ಬಾದಾಮಿ ಗುಹೆಯಲ್ಲಿ ದಿಗಂತ್ ಮತ್ತು ರಮ್ಯಾ ತಪ್ಪಿಸಿಕೊಂಡಿದ್ದರು. ಅವರು ನಿಕಟವಾಗಿರುವ ಫೋಟೋಗಳನ್ನು ರಾಜಣ್ಣ ತನ್ನ ಕ್ಯಾಮರಾದಲ್ಲಿ ಸೆರೆಹಿಡಿದಿದ್ದ. ಆ ಫೋಟೋಗಳನ್ನು ಲೋಕಲ್ ಪೇಪರ್ ಸಂಪಾದಕನಿಗೆ ಕೊಟ್ಟವನೂ ರಾಜಣ್ಣ. ಅಂದಿನಿಂದ ನಾವು ಅವನನ್ನು 'ಗಾಸಿಪ್‌ರಾಜ' ಎಂದು ಕರೆಯ ತೊಡಗಿದೆವು. ಹಾಗೆ ಕರೆದರೆ ಅವನಿಗೆ ಏನೋ ಖುಷಿ! ''ನಾನು ಜರ್ನಲಿಸಂ ಓದಿ, ಇನ್ವೆಸ್ಟಿಗೇಟಿಂಗ್ ಜರ್ನಲಿಸ್ಟ್ ಆಗ್ತೀನಿ'' ಎಂದು ಎಲ್ಲರ ಬಳಿ ಹೇಳುತ್ತಿದ್ದ.

ನಾವು ಸಹ್ಯಾದ್ರಿ ಕಾಲೇಜಿನಲ್ಲಿ ಓದುತ್ತಿದ್ದಾಗ, 'ಯಾನ' ಬೆಟ್ಟಕ್ಕೆ ದಟ್ಟವಾದ ಕಾಡಿನ ಹಾದಿಯಲ್ಲಿ 'ಚಾರಣ' ಹೊರಟಿದ್ದೆವು. ಕಾಡಿನ ನಡುವೆ ಒಂದು ಕಡೆ ಮುಗಿಲೆತ್ತರಕ್ಕೆ ಹೊಗೆ ಹೋಗುತ್ತಿತ್ತು. ನಿರ್ಜನ ಕಾಡಿನಲ್ಲಿ ಯಾರು ಹೊಗೆ ಹಾಕಿದ್ದರೋ ತಿಳಿಯಲಿಲ್ಲ. ಕಾಳ್ಗಿಚ್ಚು ಇರಬೇಕೆಂದು ನಮ್ಮ ಗೈಡ್ ಹೇಳಿದರು. ಈ ನಡುವೆ ಗಾಸಿಪ್‌ರಾಜ ರಾಜಣ್ಣ ನಮ್ಮ ಗುಂಪಿನಿಂದ ತಪ್ಪಿಸಿಕೊಂಡಿದ್ದ. ಅವನನ್ನು ಗೈಡ್ ಹುಡುಕಿಕೊಂಡು ಹೋಗಿ ಕರೆದುಕೊಂಡು ಬಂದರು. 'ಯಾನ' ಚಾರಣ ಬಹಳ ಚೆನ್ನಾಗಿತ್ತು. ಆ ನೆನಪು ಇಂದಿಗೂ ಹಸಿರಾಗಿದೆ. ನಾವು ಚಾರಣ ಮುಗಿಸಿಕೊಂಡು ಬಂದು ಒಂದು ವಾರದ ನಂತರ ಅಬಕಾರಿ ಇಲಾಖೆ ಪೋಲೀಸಿನವರು 'ಯಾನ' ಕಾಡಿನಲ್ಲಿ ಭಾರಿ ಪ್ರಮಾಣದಲ್ಲಿ ಕಳ್ಳಭಟ್ಟಿ ತಯಾರಿಸುತ್ತಿದ್ದವರನ್ನು ಹಿಡಿದರು. ಬಹಳ ವರ್ಷಗಳಿಂದ ಪೋಲೀಸಿನವರು ಆ ಗ್ಯಾಂಗ್ ಹಿಡಿಯಲು ಪ್ರಯತ್ನ ನಡೆಸಿದ್ದರು. ಸಿಕ್ಕಿಬಿದ್ದಿರಲಿಲ್ಲ. ಆ ಗುಂಪಿನ ಹಿಂದೆ ಪ್ರಭಾವಶಾಲಿಯಾದ ಒಬ್ಬ ರಾಜಕೀಯ ವ್ಯಕ್ತಿ ಇರುವ ಸಂಗತಿ ಬಯಲಾಯಿತು.

ರಾಜಣ್ಣನನ್ನು ಪೋಲೀಸ್ ಇಲಾಖೆಯವರು ನಿಖರವಾದ ಸುದ್ದಿಕೊಟ್ಟಿದ್ದಕ್ಕಾಗಿ ಅಭಿನಂದಿಸಿ, ಒಂದು ಪ್ರಮಾಣಪತ್ರ, ನಗದು ಬಹುಮಾನವನ್ನು ನೀಡಿದರು. ಇದರಲ್ಲಿ ಗಾಸಿಪ್‌ರಾಜ, ರಾಜಣ್ಣನ ಕೈವಾಡವಿರುವುದು ಆಗಲೇ ನನಗೆ ತಿಳಿದದ್ದು. ಯಾನ ಚಾರಣ ಸಮಯದಲ್ಲಿ ನಮ್ಮ ಗುಂಪಿನಿಂದ ತಪ್ಪಿಸಿ ಕೊಂಡಿದ್ದ ರಾಜಣ್ಣ ಹೊಗೆ ಬಂದ ಕಡೆಗೆ ಹೋಗಿ, ಮರೆಯಿಂದ ಕಳ್ಳಭಟ್ಟಿ ತಯಾರಿಸುವವರ ಫೋಟೋ ಹಿಡಿದು ತಂದಿದ್ದ. ಅದನ್ನು ಪೋಲೀಸಿನವರಿಗೆ ಕೊಟ್ಟಿದ್ದ. ಅವನ ಜೀವಕ್ಕೆ ಅಪಾಯವಾಗಬಹುದೆಂದು ಪೋಲೀಸಿನವರು ಅವನ ಹೆಸರನ್ನು ಬಹಿರಂಗ ಪಡಿಸಲಿಲ್ಲ.

ಪದವಿ ಪರೀಕ್ಷೆ ಮುಗಿದ ಮೇಲೆ ನಾನು ಇಂಜಿನಿಯರಿಂಗ್ ಪದವಿಗಳಿಸಿದೆ. ರಾಜಣ್ಣ ಬಿ.ಎ. ಮುಗಿಸಿದ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂ.ಎ. ಓದಿ, ಮಂಗಳೂರಿನಲ್ಲಿ ಜರ್ನಲಿಸಂನಲ್ಲಿ ಸ್ನಾತಕೋತ್ತರ ಪದವಿಗಳಿಸಿದ.

ನಾನು ಎಂ.ಬಿ.ಎ. ಮಾಡಿ ಸಾಫ್ಟ್‌ವೇರ್ ಇಂಜಿನಿಯರಾಗಿ ಒಂದು ವಿದೇಶಿ ಕಂಪೆನಿಗೆ ಸೇರಿಕೊಂಡೆ. ಅವನು ಒಂದು ಪ್ರಸಿದ್ಧ ದಿನಪತ್ರಿಕೆಯಲ್ಲಿ ಸಹಸಂಪಾದಕನಾದ. 'ಗಾಸಿಪ್‌ರಾಜ' ಎಂಬ ಸಂಕೇತ ನಾಮದಲ್ಲಿ ಚಲನಚಿತ್ರ ನಟ ನಟಿಯರ ಬಗ್ಗೆ, ರಾಜಕಾರಣಿಗಳ ಬಗ್ಗೆ ಅನೇಕ ರೀತಿಯ ಗಾಸಿಪ್(ವದಂತಿ)ಗಳನ್ನು ಬರೆಯುತ್ತಿದ್ದ. ಅದು ಯುವಜನರನ್ನು ಆಕರ್ಷಿಸಿ ಪತ್ರಿಕೆಯ ಸರ್ಕ್ಯುಲೇಷನ್ ಹೆಚ್ಚಾಯಿತು. ಮಂತ್ರಿಗಳನ್ನು ಕುರಿತು ಬರೆದ ವದಂತಿ ದೊಡ್ಡ ಹಗರಣವಾಗಿ ಪತ್ರಿಕೆಗೆ ಬೆದರಿಕೆಗಳು ಬರಲು ರಾಜಣ್ಣ ಕೆಲಸಕ್ಕೆ ರಾಜೀನಾಮೆ ನೀಡಿ ತನ್ನದೇ ಸ್ವಂತ ಪತ್ರಿಕೆಯೊಂದನ್ನು ಪ್ರಾರಂಭಿಸಿದ. 'ಗಾಸಿಪ್‌ರಾಜ' ಎಂದು ಪತ್ರಿಕೆಗೆ ಹೆಸರಿಟ್ಟ, ಅವನೇ ಸಂಪಾದಕನಾದ. ಜರ್ನಲಿಸಂ ಓದಿ ಕೆಲಸ ಸಿಗದೆ ಓಡಾಡುತ್ತಿದ್ದ ಕೆಲವು ಹುಡುಗರನ್ನು ವರದಿಗಾರರನ್ನಾಗಿ ಕೆಲಸಕ್ಕೆ ನೇಮಿಸಿಕೊಂಡ. ಪತ್ರಿಕೆಯಲ್ಲಿ ಕೆಲಸ ಮಾಡುವಾಗ ಪರಿಚಯವಾದ ಕೆಲವರಿಂದ ಜಾಹೀರಾತುಗಳು ಬಂದವು. ಕೆಲವು ನಟಿಯರು ಹಣಕೊಟ್ಟು ತಮ್ಮ ಬಗ್ಗೆ ಗಾಸಿಪ್ ಬರೆಯಲು ಹೇಳುತ್ತಿದ್ದರು. ಕೆಲವು ನಿರ್ಮಾಪಕರು ತಾವು ತೆಗೆದ ಸಿನಿಮಾ ಜನಪ್ರಿಯವಾಗಲೆಂದು ಇವನಿಗೆ ಹಣಕೊಟ್ಟು ಗಾಸಿಪ್ ಬರೆಯುವಂತೆ ಹೇಳುತ್ತಿದ್ದರು. ಇವನು ಮತ್ತು ಇವನ ವರದಿಗಾರರು ಸಣ್ಣ ಸನ್ನಿವೇಶವನ್ನು ಬೆಟ್ಟದಷ್ಟು ಮಾಡಿ ಬರೆಯುತ್ತಿದ್ದರು. ಕಾಲೇಜಿನ ಯುವತಿಯರು ಪತ್ರಿಕೆಯನ್ನು ಕೊಂಡು ಓದುತ್ತಿದ್ದರು. ಹುಡುಗಿಯರ ಕೈಯಲ್ಲಿ ಈ ಪತ್ರಿಕೆ ನೋಡಿ, ಕಾಲೇಜು ಹುಡುಗರೂ ಕೊಂಡು ಓದ ತೊಡಗಿದರು. ಬಸ್ಸಿನಲ್ಲಿ ಪ್ರಯಾಣ ಮಾಡುವಾಗ, ಐಟಿ ಕಂಪೆನಿಗಳಲ್ಲಿ ಕೆಲಸ ಮಾಡುವಾಗ ಕಾಲೇಜುಗಳಲ್ಲಿ ಈ ಗಾಸಿಪ್‌ಗಳ ಚರ್ಚೆ ನಡೆಯುತ್ತಿತ್ತು.

ಹಿಂದಿ, ತಮಿಳು, ತೆಲುಗು ಮತ್ತು ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಿದ್ದ ಹೀರೋ ಚಂದ್ರಕಾಂತ್ ಮತ್ತು ಹೀರೋಯಿನ್ ರಂಜಿತಾ ಬಗ್ಗೆ ಪ್ರತಿವಾರ ಗಾಸಿಪ್ ಇದ್ದೇ ಇರುತ್ತಿತ್ತು. ರಂಜಿತಾ, ಚಂದ್ರಕಾಂತನನ್ನು ಪ್ರೇಮಿಸುತ್ತಿದ್ದಳು. ಆದ್ದರಿಂದ ಅವಳಿಗೆ ಈ ಗಾಸಿಪ್‌ಗಳು ಇಷ್ಟವಾದವು. ಗಾಸಿಪ್ ರಾಜನನ್ನು ಮನೆಗೆ ಕರೆಸಿಕೊಂಡು ತಾನೇ ಕೆಲವು ಸಂಗತಿಗಳನ್ನು ತಿಳಿಸಿ, ದಿನಾಂಕ, ವೇಳೆ, ಸ್ಥಳ ಇವುಗಳ ನಿಖರವಾದ ವಿವರಗಳನ್ನು ತಿಳಿಸಿ ತಾವಿಬ್ಬರೂ ಭೇಟಿಯಾದಾಗ ನಡೆದ ಘಟನೆಗಳನ್ನು ಹೇಳುತ್ತಿದ್ದಳು. ಇದು ರಹಸ್ಯವಾಗಿರಲಿ ಎಂದು ಹಣವನ್ನು ಕೊಡುತ್ತಿದ್ದಳು. ಕೆಲವೊಮ್ಮೆ ಫೋಟೋಗಳನ್ನು ಕೊಡುತ್ತಿದ್ದಳು.

ಚಂದ್ರಕಾಂತನಿಗೆ 'ಹರ್ಪೀಜ್' ಖಾಯಿಲೆ ಬಂದು ಮಲಗಿದ. ಇದನ್ನು ಗುಟ್ಟಾಗಿಟ್ಟಿದ್ದ ರಾಜಣ್ಣನಿಗೆ ಹೇಗೋ ಗೊತ್ತಾಗಿ ತನ್ನ ಪತ್ರಿಕೆಯ ಮುಖಪುಟದಲ್ಲಿ 'ಚಂದ್ರಕಾಂತನಿಗೆ ಸರ್ಪದ ಸುತ್ತು' ಎಂದು ದಪ್ಪಕ್ಷರಗಳಲ್ಲಿ ಪ್ರಕಟಿಸಿದ. ಜೊತೆಗೆ ಹರ್ಪೀಜ್ ರೋಗದ ವಿವರಗಳನ್ನು ಬರೆದು 'ಇದು ಸೋಂಕುರೋಗ, ಚಂದ್ರಕಾಂತನೊಡನೆ ನಟಿಸುವ ಹೀರೋಯಿನ್‌ಗಳ ಗತಿ ದೇವರೇ ಗತಿ!' ಎಂದು ಬರೆದ. ರಂಜಿತಾ ಅವನನ್ನು ಭೇಟಿಯಾಗಿ ವಿಷಯ ತಿಳಿಸಿದ್ದಕ್ಕೆ

ಥ್ಯಾಂಕ್ಸ್ ಹೇಳಿ ಅವನಿಗೆ ಹತ್ತುಸಾವಿರ ಹಣ ನೀಡಿದಳು. ಅನೇಕ ನಟಿಯರು ಹಣ ನೀಡಿದರು. ಇವನು ತನ್ನ ವರದಿಗಾರರಿಗೆ ಬೋನಸ್ ಕೊಟ್ಟ.

ಚಂದ್ರಕಾಂತ್ ಈ ಹರ್ಪೀಜ್ ಖಾಯಿಲೆಗೆ ಚಿಕಿತ್ಸೆ ನೀಡುವುದರಲ್ಲಿ ಅಮೇರಿಕಾದಲ್ಲಿ ತರಬೇತಿ ಪಡೆದ ಡಾಕ್ಟರ್ ಬಳಿ ಚಿಕಿತ್ಸೆ ತೆಗೆದುಕೊಂಡು ಹತ್ತು ದಿನಗಳಲ್ಲಿ ವೈದ್ಯರ ಚಿಕಿತ್ಸೆಗೆ ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿದ್ದ.

ರಾಜಣ್ಣ ಚಂದ್ರಕಾಂತ್ ಗುಣಮುಖನಾದದ್ದನ್ನು ನಂಬದೆ ಅವನ ಬಗ್ಗೆ ಮಿಥ್ಯಾರೋಪಗಳನ್ನು ಮಾಡಿ ತನ್ನ ಪತ್ರಿಕೆಯಲ್ಲಿ ಬರೆಯುತ್ತಲೇ ಇದ್ದ. ಚಂದ್ರಕಾಂತನ ಜೊತೆಯಲ್ಲಿ ನಟಿಸಲು ಯಾವ ಹೀರೋಯಿನ್‌ಗಳು ಒಪ್ಪದೇ ಹೋದದ್ದರಿಂದ ಅವನಿಗೆ ಯಾವ ಚಿತ್ರವೂ ಬುಕ್ ಆಗದೆ ಮನೆಯಲ್ಲಿ ಕುಳಿತ. ತಾನು ಗುಣವಾಗಿರುವ ಬಗ್ಗೆ ತಿಳಿಸಲು ಚಂದ್ರಕಾಂತ ರಾಜಣ್ಣನಿಗೆ ಫೋನ್ ಮಾಡಿದ. ತನ್ನ ಆಳುಗಳನ್ನು ಕಳುಹಿಸಿದ, ರಾಜಣ್ಣ ಕಣ್ತಪ್ಪಿಸಿ ಓಡಾಡುತ್ತಿದ್ದ. ಚಂದ್ರಕಾಂತನ ಚಲನಚಿತ್ರವೊಂದು ಅದ್ದೂರಿಯಾಗಿ ನಿರ್ಮಾಣವಾಗುತ್ತಿತ್ತು. ಅರ್ಧ ಚಲನಚಿತ್ರ ಚಿತ್ರೀಕರಣವಾಗಿತ್ತು. ನಂತರ ಈ ಪ್ರಕರಣದಿಂದ ನಿಂತು ಹೋಗಿತ್ತು.

ಒಂದು ದಿನ ಚಂದ್ರಕಾಂತನ ಬಗ್ಗೆ ಒಂದು ವಿಶೇಷ ಸಂಚಿಕೆ ತರಲು ರಾಜಣ್ಣ ಸಿದ್ಧತೆ ಮಾಡಿ ಅರ್ಧರಾತ್ರಿಯಲ್ಲಿ ತನ್ನ ಸ್ಕೂಟರ್ ಮೇಲೆ ಮನೆಗೆ ಹೊರಟ. ಅಂದು ಅಮಾವಾಸ್ಯೆ. ಊರ ಹೊರಗಿನ ಪ್ರೆಸ್‌ನಲ್ಲಿ ತನ್ನ ಸಂಚಿಕೆಗಳನ್ನು ಪ್ರಿಂಟ್ ಮಾಡಿಸುತ್ತಿದ್ದ. ಪ್ರೆಸ್‌ನಿಂದ ಹೊರಟು ಬೆಂಗಳೂರು ಪ್ರವೇಶಿಸುವಾಗ ಫ್ಲೈಓವರ್ ಮೇಲೆ ಬರುತ್ತಿದ್ದ. ರಸ್ತೆಗಡ್ಡವಾಗಿ ವ್ಯಾನ್ ನಿಂತಿತ್ತು. ಇವನು ಸ್ಕೂಟರ್ ನಿಲ್ಲಿಸಿದ ಕೂಡಲೇ ನಾಲ್ಕುಮಂದಿ ರಸ್ತೆಬದಿಯ ಕತ್ತಲಿನಿಂದ ಬಂದರು. ಅವನ ಮೇಲೆ ಆಕ್ರಮಣ ಮಾಡಿದರು. 'ಇದು ಹರ್ಪೀಜ್ ಏಟು' 'ಇದು ಚಂದ್ರಕಾಂತನ ಏಟು' 'ಇದು ಸೋಂಕುರೋಗದ ಏಟು' 'ಇದು ಗಾಸಿಪ್ ಏಟು' ಎಂದು ಹೇಳುತ್ತಾ ಕಾಲುಗಂಟೆ ಹಾಕಿಸ್ಟಿಕ್‌ನಿಂದ ಹೊಡೆದರು. ರಾಜಣ್ಣ ನೆಲಕಚ್ಚಿದಾಗ ಹೊರಟುಹೋದರು. ಯಾರೋ ರಸ್ತೆಯಲ್ಲಿ ಕಾರಿನಲ್ಲಿ ಹೋಗುತ್ತಿದ್ದವರು ರಾಜಣ್ಣನ ದುರವಸ್ಥೆಯನ್ನು ನೋಡಿ ಆಸ್ಪತ್ರೆಗೆ ಸೇರಿಸಿದರು.

ಆದಿನ ರಾತ್ರಿ ಚಂದ್ರಕಾಂತನ ಸ್ಪೆಷಲ್ ಷೋ ಜನಪ್ರಿಯ ಟಿ.ವಿ. ಚಾನಲ್‌ನಲ್ಲಿ ಪ್ರಸಾರವಾಯಿತು. ಚಂದ್ರಕಾಂತ್ ಷಾರ್ಟ್ಸ್ ಹಾಕಿಕೊಂಡಿದ್ದ ಮೈ ಮೇಲ್ಭಾಗದಲ್ಲಿ ತುಂಡು ಬಟ್ಟೆಯನ್ನೂ ಹಾಕಿರಲಿಲ್ಲ. ಮೈಗೆ ಎಣ್ಣೆ ತೀಡಿದ್ದರಿಂದ ಮಿರಮಿರನೆ ದೇಹ ಹೊಳೆಯುತ್ತಿತ್ತು. ಜಿಮ್‌ನಲ್ಲಿ ತಾನು ಕಲಿತ ಕಸರತ್ತುಗಳನ್ನು ಮಾಡಿ ತೋರಿಸುತ್ತಿದ್ದ. ಯೋಗಾಭ್ಯಾಸದ ಕೆಲವು ಆಸನಗಳನ್ನು ಮಾಡಿ ತೋರಿಸಿದ. ಟಿ.ವಿ. ಕ್ಯಾಮರಾ ಅವನ ದೇಹದ ಇಂಚಿಂಚನ್ನೂ ತೋರಿಸುತ್ತಿತ್ತು. ಅವನ ಸಿಕ್ಸ್‌ಪ್ಯಾಕ್, ಬೈಸೆಪ್ ಮೊದಲಾದವುಗಳನ್ನು ನೋಡಿ ರಂಜಿತಾಳ ಹೃದಯ ಬಾಯಿಗೆ ಬಂತು. ಅನೇಕ ಮಂದಿ ಹೀರೋಯಿನ್‌ಗಳು ಉದ್ರೇಕಕ್ಕೆ ಒಳಗಾದರು. ಕಾಲೇಜು ಓದುವ ಯುವತಿಯ ಮೈ ಬೆಚ್ಚಗಾಯಿತು. ಅವನ ಮೈ ಮೇಲೆ ಎಲ್ಲೂ ಹರ್ಪೀಜ್‌ನ ಗುರುತು ಕೂಡ ಇರಲಿಲ್ಲ. ಆರೋಗ್ಯವಾಗಿ ದೃಢಕಾಯನಾಗಿದ್ದ.

ಈ ಕಾರ್ಯಕ್ರಮವನ್ನು ಪ್ರತಿಸಂಜೆ, ಬೆಳಿಗ್ಗೆ ಮೂರು ದಿನ ಪ್ರಸಾರ ಮಾಡಲಾಯಿತು. ಹೀರೋಯಿನ್‌ಗಳು ನಿರ್ಮಾಪಕರಿಗೆ, ನಿರ್ದೇಶಕರಿಗೆ ಫೋನ್ ಮಾಡಿ 'ನಾನು ಚಂದ್ರಕಾಂತರ ಜೊತೆ ಸಿನಿಮಾದಲ್ಲಿ ನಟಿಸುತ್ತೇನೆ. ಒಪ್ಪಂದದ ಪತ್ರ ತನ್ನಿ!' ಎಂದು ದುಂಬಾಲು ಬಿದ್ದರು. ಚಂದ್ರಕಾಂತನಿಗೆ ಹೊಸದಾಗಿ ಇಪ್ಪತ್ತು ಚಲನಚಿತ್ರಗಳಿಗೆ ಬೇಡಿಕೆ ಬಂತು. ಗಾಸಿಪ್‌ರಾಜ ರಾಜಣ್ಣನನ್ನು ಕೇಳುವವರೇ ಇಲ್ಲವಾಯಿತು. ಪೋಲೀಸಿನವರು ಸಾಕ್ಷಿ ಆಧಾರಗಳಿಲ್ಲವೆಂದು ಯಾರ ಮೇಲೂ ಕೇಸ್‌ಬುಕ್ ಮಾಡಲಿಲ್ಲ. ಅವನ ಪತ್ರಿಕೆಯ ಜನಪ್ರಿಯತೆ ಕಡಿಮೆಯಾಗಿ ಪತ್ರಿಕೆ ನಿಂತು ಹೋಯಿತು.

ಈಗ ರಾಜಣ್ಣ ತನ್ನ ಗಾಯಗಳನ್ನು ಗುಣಮಾಡಿಕೊಂಡು ಮನೆಗೆ ಬಂದಿದ್ದಾನೆ. ಗಾಸಿಪ್ ಬಗ್ಗೆ ಅವನಿಗಿದ್ದ ಹುಚ್ಚ ಬಿಟ್ಟುಹೋಗಿದೆ. ಈಗ ಧಾರ್ಮಿಕ ಅಥವಾ ಸಾಹಿತ್ಯ ಪತ್ರಿಕೆ ಹೊರತರುವ ಸನ್ನಾಹದಲ್ಲಿದ್ದಾನೆ.

✵

---

## ಮನೆ ಸ್ಕೋರ್

ನಮ್ಮ ತಾತ 98/1

ನಮ್ಮ ಅಜ್ಜ 86/1

ನಮ್ಮ ಅಪ್ಪ 60/2

ಚಿಕ್ಕಪ್ಪ ಮೋಸ 30/3

ಏನಿದು ಕ್ರಿಕೆಟ್ ಸ್ಕೋರಾ ಅಂದ್ರೆ

ಪುಟ್ಟ ಹೇಳಿದ

ನಮ್ಮ ತಾತನಿಗೆ 98 ಆಗಿದ್ದರೂ ಒಬ್ಬಳೇ ಹೆಂಡತಿ

ನಮ್ಮ ಅಜ್ಜನಿಗೆ 86 ಆಗಿದ್ದರೂ ಒಬ್ಬಳೇ ಹೆಂಡತಿ


ನಮ್ಮ ಅಪ್ಪನಿಗೆ 60 ವರ್ಷಕ್ಕೆ ಇಬ್ಬರು ಹೆಂಡತಿಯರು

ನಮ್ಮ ಚಿಕ್ಕಪ್ಪ 30 ವರ್ಷಕ್ಕೇ ಇಬ್ಬರಿಗೆ

ಡೈವೋರ್ಸ್ ಕೊಟ್ಟು

ಮೂರನೆಯವಳನ್ನು ಕಟ್ಕೊಂಡಿದ್ದಾನೆ ಅಂದ

- ಸುಕೇಶವ




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

**SIEMENS**
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಕನ್ನಡ - ತೆಲುಗು (ಸಂವಾದ)

**- ಪ್ರೊ. ಶ್ಯಾಮಲಾ ರವಿಶಂಕರ್**

**ಅ**ದೊಂದು ಕನ್ನಡಿಗರು (ಹೆಸರಿಗೆ) ನಡೆಸುತ್ತಿದ್ದ ಕಾಲೇಜು. ನಾನು ಸ್ವಲ್ಪ ಸಮಯ ಅಲ್ಲಿ ಕೆಲಸ ಮಾಡುತ್ತಿದ್ದೆ. ಕನ್ನಡ ಮಾಧ್ಯಮವಾಗಿ ಆಯ್ದುಕೊಳ್ಳುವ ಅವಕಾಶವಿದ್ದುದ್ದರಿಂದ ಅಷ್ಟಿಷ್ಟು ಕನ್ನಡನುಡಿ ಕೇಳಬಹುದಾಗಿತ್ತು. ಕನ್ನಡ ಮಾಧ್ಯಮದ ಹುಡುಗರ ಸಂಖ್ಯೆ ಕೈಬೆರಳಲ್ಲೇ ಎಣಿಸಬಹುದಾದಷ್ಟು. ಆದರೆ ಅವರಿಗೆ ಸಿಕ್ಕುತ್ತಿದ್ದ ಮರ್ಯಾದೆ (?), ವಿಶ್ವಾಸ ನಮ್ಮ ಪಾಲಿಗಿರಲಿಲ್ಲ. ಬಹಳಷ್ಟು ಶಿಕ್ಷಕರಿಗೆ ಕನ್ನಡ ಅರ್ಥಮಾಡಿಕೊಳ್ಳುವುದಿರಲಿ, ಯಾರಾದರೂ ಮಾತಾಡಿದರೂ ಅಣಕವಾಡುವ ಚಪಲ. ಅಳಿದುಳಿದಿದ್ದ ಹಿರಿಯರಿಗೆ ಇವರ ಅಣಕಕ್ಕೆ ಪ್ರತಿ ಅಣಕವಾಗಿ ಅಡ್ಡಾದಿಡ್ಡಿ ಮಾತಾಡುವುದು ಒಂದು ಸಂಪ್ರದಾಯವಾಗಿಬಿಟ್ಟಿತ್ತು!

ಇವೆಲ್ಲಾ ನಾನು ಸೇರಿದ ಕೆಲವೇ ದಿವಸಗಳಲ್ಲಿ ಅರ್ಥವಾಗಿ ಬಿಟ್ಟಿತು.

ಒಬ್ಬ ಕನ್ನಡದ ಕೂಸು ಇನ್ನೊಬ್ಬಳನ್ನು ಕುರಿತು, ''ಈ ದಿನ ಏನು ತಿಂಡಿ ನಿನ್ನ ಡಬ್ಬೀಲಿ?'' ಎಂದಳು.

ಇದನ್ನು ಕೇಳಿದ ತೆಲುಗು ತಲ್ಲಿ (ತೆಲುಗಿನಲ್ಲಿ) ''ಅದೇನು, 'ತಿಂಡಿ', 'ತಿಂಡಿ' ಅಂತ ಹೊಡ್ಕೋತೀರ, ಬೇರೇನೂ ಪದ ಸಿಕ್ಕೊಲ್ವಾ ನಿಮ್ಮ ಕನ್ನಡದಲ್ಲಿ ನಿಮ್ಮ ಆ 'ತಿಂಡೀಗೆ'?''

'ಫಟ್' ಬಂತು ಕನ್ನಡ ಕೂಸಿನಿಂದ ಉತ್ತರ - ಮತ್ತೊಂದು ಪ್ರಶ್ನೆಯ ರೂಪದಲ್ಲಿ! ''ಯಾಕೆ?, ಏನಾಗಿದೆ 'ತಿಂಡಿ' ಅನ್ನೋ ಪದಕ್ಕೆ? ಓಹೋ, ನಿಮಗೆ ತಿಂಡೀನೇ ಗೊತ್ತಿಲ್ಲದಿರಬಹುದೇನೋ?''

ತೆ.ತ. : ನಾವು 'ತಿಂಡಿ' ತಿನ್ನೊಲ್ಲ, ಟಿಫಿನ್ನು ತಿಂತೀವಿ.

ಕ.ಕೂ. : ಟಿಫಿನ್ನು? ಅದೆಂಥದ್ದು?

ತೆ.ತ. : (ನುಣಿಚಿಕೊಳ್ಳುವ ಯತ್ನದಲ್ಲಿ) ಅಲ್ಲಾ.... ಮತ್ತೆ.... 'ತಿಂಡಿ' ಅಂದ್ರೆ ಕನಿಷ್ಠ ತಿನ್ನೋಕ್ಕೂ ಗತಿಯಿಲ್ಲದವರಿಗೆ ಏನೋ ಒಂದಷ್ಟು ಕೊಡೋದಕ್ಕೆ 'ತಿಂಡಿ' ಅಂತೀವಿ. ಅದಕ್ಕೆ ಅಂದೆ ಅಷ್ಟೇ.

ಕ.ಕೂ. : ಓ, ನಾವು 'ಕೂಳು' ಅಂತೀವಿ, ಅದಾ ನಿಮ್ಮ 'ತಿಂಡಿ'? ನಿಮ್ಮೆಲ್ಲರಿಗೆ ಅದು ಸರಿಹೋಗ್ದಿದ್ರೆ ಒಂದು ಡಿಕ್ಷ್ನರಿನೇ ಬರೀರಿ, ಅದರಲ್ಲಿ ತಿಂಡಿ-ಟಿಫಿನ್ನು ವಗೈರೆ, ವಗೈರೆ.... (ಹಿನ್ನಲೆಯಲ್ಲಿದ್ದ ಕ.ಕೂ. ಪಕ್ಷದವರ ಘೊಳ್ಳೆಂಬ ಹರ್ಷೋದ್ಗಾರ).

ತೆ.ತ. : ಅದಿರಲಿ, ನೀವು ಯಾಕೆ 'ಮೇಜು', 'ಕುರ್ಚಿ' ಎಂದೆಲ್ಲಾ ಹಿಂದಿಯಿಂದ ಕದ್ದಿದ್ದೀರಾ? ನಿಮ್ಮ ಪದಗಳ ಜೋಡಣೆಯನ್ನೇ ನೋಡಿ 'ಹಾಡು ಹೇಳು' ಅಂತೀರ, ಹಾಡೇನು ಕಥೇನಾ ಅಥವಾ ಪುರಾಣಾನಾ ಹೇಳೋಕೆ? ಅದೇ ನಾವು? ಪಾಟಲನು ಪಾಡುತಾಮು!! ಹೆ.ಹೆ! (ತೆ.ತ. ಪಕ್ಷದ ಜಯಕಾರ!)

ಕ.ಕೂ. : ಹಾಡು – ಹಸೆ ಅಂದರೆ, ಜ್ಞಾಪಕಕ್ಕೆ ಬಂತು. ನೀವು ಯಾರಾದರೂ ಹೆಂಗಸರು ಬಂದರೆ, 'ಜಾಕೀಟು, ಗುಡ್ಡ ಪೆಟ್ಟು ಆಮೆಕು' ಅಂತೀರಲ್ಲಾ, ಮೊಟ್ಟ ಮೊದಲಿಗೆ 'ಜಾಕೀಟು' is a distortion of jacket. 'ಗುಡ್ಡ' ಅಂದರೆ ಚಿಂದಿ – ಚಿಂದಿ ಆಗಿರೋ ಕೊಳಕಲ ಬಟ್ಟೆ ತುಂಡು to be precise, ಸಾರಸೊ ಬಟ್ಟೇಗೆ ಅನ್ನೋಥರ ಪದ. ಲಕ್ಷಣವಾಗಿ ಕುಪ್ಪ ಸದ ಖಣ ಅನ್ನ ಬಹುದಲ್ಲಾ?'

ತೆ.ತ. : ಅದೇ ಮುತ್ತೈದೆಯರು ನಿಮ್ಮ ಮನೆಯಿಂದ ಹೊರಟಾಗ ಅರಿಶಿನ, ಕುಂಕುಮದ ಪಂಚವಾಳಾನ ಹಿಡ್ಕೊಂಡು ನೀವುಗಳು 'statue' ಅದ್ಹಾಂಗೆ ನಿಂತೇ ಇರಿತೀರಲ್ಲಾ, ಯಾಕೆ ಹಾಗೆ?

ಕ.ಕೂ. : ಏನಿಲ್ಲ, ನಿಮ್ಮ ಹಾಗೆ ಮನೆಗೆ ಬಂದು ಹೊರಟು ನಿಂತಿರೊ ಮುತ್ತೈದೆಯರಿಗೆ ಮುಖಕ್ಕೆಲ್ಲಾ ಕುಂಕುಮ ಬಳಿದು ಅವರ ಮೆಕಪ್ ಕೆಡಿಸಿ ಕಳಿಸೋಷ್ಟು ಅನಾಗರಿಕರಲ್ಲಾ ನಾವು.

ತೆ.ತ. : ಓಹೋ, ಅರ್ಥ ಆಯ್ತು! Make up is more important than tradition ಅಲ್ವಾ? (ತೆ.ತ. ಪಕ್ಷದವರ ಸಂತೋಷಕ್ಕೆ ಎಲ್ಲೆ ಇಲ್ಲದಂತಾಯಿತು)

ಕ.ಕೂ. : ಅದಕ್ಕೆ ಮುಂಚೆ ಅವರಿಗೆ (ಬಂದವರಿಗೆ) 'ಅನ್ನಂ ಪೆಟ್ಟು ಅಥವಾ ಟಿಫಿನ್ನು ಪೆಟ್ಟು' ಅಂತ ಆಳು/ಕಾಳುಗಳಿಗೋ ಇಲ್ಲದಿದ್ದರೆ ಸೊಸೆ/ಮಗಳಿಗೋ ಹೇಳಿತೀರಲ್ಲಾ, ಅದೇನ್ರೀ ಅದೂ, ಅನ್ನ ಇಡೋದು?

ತೆ.ತ. : ನೀವೇನು ಕಡಿಮೆ? 'ಅನ್ನ ಹಾಕ್ಲಾ, ಇನ್ನೊಂದು ಚಪಾತಿ ಹಾಕ್ಲಾ' ಅಂತೀರಲ್ಲಾ, ನಾವೆಲ್ಲಾ ನಾಯಿಗೆ ಬೆಕ್ಕಿಗೆ 'ಹಾಕಿತೀವಿ', ಅತಿಥಿಗಳಿಗಲ್ಲ!

ಕ.ಕೂ. : ನೀವ್ಯಾಕೆ ಸ್ನಾನ ಮಾಡು ಅನ್ನೋಕೆ 'ನೀಳ್ಳು ಪೋಸೊ' ಅಂತೀರ? ನಿಮ್ಮ ದೇಹ ಏನು ಬಂಡೇನಾ, ಅದರ ಮೇಲೆ ನೀರು ಹೊಯ್ಯೋಕೆ? ಅಂಗಡೀಗೆ ಹೋದ್ರೆ, 'ಅದಿ ಪಟ್ಟಿರಾ', 'ಇದಿ ಪಟ್ಟಿರಾ' ಅಂತೀರಲ್ಲಾ, ನಿಮ್ಮ ಅಂಗಡಿಗಳಲ್ಲಿ ಸಾಮಾನುಗಳು ಗುರುತ್ವಾಕರ್ಷಣೆಗೆ ಒಳಗಾಗದೆ ಆಕಾಶದಲ್ಲಿ ತಿರುಗ್ತಾ ಇರತ್ವಾ? ತುಂಬಾ ತಮಾಷೆ ಅನ್ಸುತ್ತೆ.

ಇಷ್ಟರಲ್ಲಿ enter ತಮಿಳ್ ತಂಗಚ್ಚಿ!

ತ.ತಂ. : ಅಬ್ಬ ಏಮಿ, ಪನೀ? 'ಪನೀ ಅಂಟಿ ಪನೀ!'

ಕ.ಕೂ.+ತೆ.ತ. : ಅದೇನಮ್ಮಾ ಅಂಥಾ ಕೆಲಸ ನಿನಗೆ, ಅದೂ ನಮಗ್ಯಾರಿಗೂ ಇಲ್ಲದಂಥದ್ದು?

ತ.ತಂ. : sorry, sorry, ನಮ್ಮ ಭಾಷೆ 'ಪನಿ'–ಅದೇ ಮಂಜು ಬೀಳತ್ತಲ್ಲ ಅದು, 'ಕೆಲಸ' ಅಲ್ಲಾ, ಅಂದಾಗ ಎಲ್ಲಾ ಪಾರ್ಟಿ alliance ಆಗಿ ನಕ್ಕಿದ್ದೇ ನಕ್ಕಿದ್ದು!

✵

ಹುರುಳಿ ಕಟ್ಟು...

# ನಾವು ಮತ್ತು ಆನೆ.....

- ಎಚ್. ಗೋಪಾಲಕೃಷ್ಣ

**ನ**ಮ್ಮ ಆಫೀಸಿನಲ್ಲಿ ಕೆಲಸಮಾಡುವವರಲ್ಲಿ ನಾನು ನೋಡಿರುವ ಜನರು ವಿವಿಧ ಬಗೆಯವರು. ಸೊಫಿಸ್ಟಿಕೇಟೆಡ್ ಸಂಸಾರದಿಂದ ಬಂದವರಿಂದ ಹಿಡಿದು ಅಷ್ಟೇನೂ ವಿದ್ಯೆಯ ಹಿನ್ನೆಲೆ ಹೊಂದಿರದ ಸಂಸಾರದಿಂದ ಬಂದವರೂ ಇದ್ದಾರೆ. ಅವರವರ ಜತೆಯಲ್ಲಿನ ನನ್ನ ಸಂಪರ್ಕದಿಂದ ಒಂದು ವಿಷಯ ಮನವರಿಕೆಯಾಗಿದೆ - ಅದೆಂದರೆ ಸಾಂಸಾರಿಕ ಹಿನ್ನೆಲೆ, ವಿದ್ಯೆ, ಆರ್ಥಿಕ ಪರಿಸ್ಥಿತಿ ಈ ಯಾವ ಹಿನ್ನೆಲೆಗಳೂ ಅವರವರು ವರ್ತಿಸುವ ಪ್ರಸಂಗಗಳ ಮೇಲೆ ಪರಿಣಾಮ ಹೊಂದಿಲ್ಲದಿರುವುದು. ಬದಲಿಗೆ ಪ್ರತಿಯೊಬ್ಬರೂ ಅವರವರದೇ ಆದ ಜೀವನ ಶೈಲಿಯನ್ನು ತಮಗೆ ತೋಚಿದ ರೀತಿಯಲ್ಲಿ ರೂಪಿಸಿಕೊಂಡಿರುವುದು. ನಮ್ಮ ಆಫೀಸಿನ ಒಬ್ಬ ಅಟೆಂಡರ್ ನನಗೆ ಬಹಳ ವರ್ಷಗಳಿಂದ ಗೊತ್ತಿರುವವನು. ಯಾರಿಗೂ ಏನೂ ತೊಂದರೆ ಕೊಡದೇ ಇರುವ ಸ್ವಲ್ಪ ಪೆದ್ದ ಗುಂಪಿಗೆ ಸೇರಿದವನು. ಯಾರಿಗೂ ಏನೂ ತೊಂದರೆ ಕೊಡದಿರುವವನನ್ನು ಪೆದ್ದ ಎಂದೇ ಎಲ್ಲಾ ಕಡೆ ಗುರುತಿಸುವುದು! ಪೆದ್ದ ಅಂತ ಅನಿಸಿದರೂ ಹೇಳಿದ ಕೆಲಸವನ್ನು ಮಾಡಿಕೊಂಡು ನಿರಾಳವಾಗಿ ಇರುವಾತ. ಯಾವುದೇ ರೀತಿಯ ಉದ್ವೇಗಗಳಿಗೆ ಅವನು ಈಡಾಗುವುದಿಲ್ಲ, ಹೊಸಾ ಐಡಿಯಾಗಳು ತಲೇಗೆ ಹೊಳೆಯದಿದ್ದರೂ ಹೇಳಿದ್ದನ್ನು ಮಾಡುವಷ್ಟರ ಮಟ್ಟಿಗೆ ತಲೆ ಓಡಿಸುತ್ತಾನೆ. ಅನಗತ್ಯವಾಗಿ ರಜಾ ಹಾಕುವುದು, ಸಂಬಂಧ ಇಲ್ಲದಿರುವ ವಿಷಯಗಳಲ್ಲಿ ತಲೆ ಹಾಕುವುದು ಮುಂತಾದ ದುರಭ್ಯಾಸಗಳು ಅವನಿಗಿಲ್ಲ.

ಅವನಿಗೆ ಒಬ್ಬ ಸ್ನೇಹಿತ. ಇವನು ಒಂದು ರೀತಿಯಲ್ಲಿ ಪಟಿಂಗ. ಅವನಿಗೂ ಇವನಿಗೂ ಗುಣದಲ್ಲಿ ಸ್ವಭಾವದಲ್ಲಿ ಉತ್ತರ ದಕ್ಷಿಣ. ಈತ ಕೆಲಸಗೇಡಿಗತನವನ್ನು ಮಿಕ್ಕವರಿಗೆ ಹೇಳಿಕೊಟ್ಟು ತಾನೂ ಕೆಲಸ ಮಾಡದೇ ಮಿಕ್ಕವರಿಗೂ ಮಾಡಲು ಬಿಡದಿರುವ ವ್ಯಕ್ತಿ - ಒಂದು ರೀತಿಯಲ್ಲಿ ಟ್ರೇಡ್ ಯೂನಿಯನ್ ಲೀಡರಿನ ಹಾಗೆ ವರ್ತನೆ. ಇವನಿಗೆ ತದ್ವಿರುದ್ಧ ಮೊದಲಿನ ವ್ಯಕ್ತಿ. ಯಾವುದೇ ಕೆಲಸ ಹೇಳಿ ಮಾಡುತ್ತಾನೆ, ತಾನೇ ತಾನಾಗಿ ಯಾವುದನ್ನೂ ನಿರ್ಧರಿಸುವವನಲ್ಲ ಮತ್ತು ನೀವು ಹಾಕಿದ ಗೆರೆಗೆ ಆದಷ್ಟೂ ಅಂಟಿಕೊಂಡಿರುವಾತ.

ಕಳೆದ ತಿಂಗಳು ಈ ಇಬ್ಬರೂ ಮೊದಲ ಬಾರಿಗೆ ಆಫೀಸಿನ ಕೆಲಸದ ಮೇಲೆ ಹೊರ ಊರಿಗೆ ಹೋಗಬೇಕಾಯಿತು. ಇಬ್ಬರಿಗೂ ತಾಖೀತು ಮಾಡಿ ಕಳಿಸಿಯಾಯಿತು. ಹೇಗಿದ್ದರೂ ಪಟಿಂಗ ಜತೆಯಲ್ಲಿದ್ದಾನೆ, ನಿಭಾಯಿಸುತ್ತಾನೆ ಎನ್ನುವ ಧೈರ್ಯ ನಮಗೆ. ಆದರೂ ಏನಾದರೂ ಎಡವಟ್ಟು ಮಾಡಿ ಇನ್ನೊಬ್ಬನನ್ನು ಸಿಕ್ಕಿಸಿಬಿಡುತ್ತಾನೋ ಎನ್ನುವ ಅಳುಕೂ ಇತ್ತು. ಆದರೂ ಧೈರ್ಯ ಮಾಡಿ ಇಬ್ಬರನ್ನೂ ಜತೆ ಮಾಡಿ ರವಾನಿಸಿದ್ದೆ. ಅವರುಗಳು ವಾಪಸ್ಸು ಬರುವವರೆಗೆ

ಒಂದು ರೀತಿಯ ಕಳವಳ ಮನಸ್ಸಿನಲ್ಲಿತ್ತು. ಯಾವಾಗ ಫೋನು ಹೊಡೆದುಕೊಂಡು ಇವರುಗಳ ಪರಿಪಾಡುಗಳನ್ನು ಊದುತ್ತೋ ಅನ್ನುವ ಆತಂಕವೂ ಇತ್ತು.

ಅವರುಗಳು ಊರಿಗೆ ವಾಪಸ್ಸು ಬಂದು ಡ್ಯೂಟಿ ರಿಪೋರ್ಟು ಮಾಡಿಕೊಂಡ ನಂತರ ಅವರಿಗೆ ಹೇಳಿಕಳಿಸಿದೆ. ಮೊದಲನೆಯವನು ಬಂದ. ಎರಡನೆಯವನು ಅವತ್ತು ರಜಾ ಹಾಕಿದ್ದ ಅವನು ಬರಲಿಲ್ಲ ಇವನ ಸಂಗಡ. ಲೋಕಾಭಿರಾಮವಾಗಿ ಒಂದೆರೆಡು ಮಾತನಾಡಿ ಆಫೀಸಿನ ಕೆಲಸದ ಕಡೆಗೆ ಬಂದೆ.

ಹೇಗಿತ್ತು ಹೊಸಾ ಅನುಭವ..... ಅಂದೆ.

ಚೆನ್ನಾಗಿತ್ತು ಸಾರ್. ಎಲ್ಲರೂ ತುಂಬಾ ಚೆನ್ನಾಗಿ ನಮ್ಮನ್ನ ನೋಡಿಕೊಂಡರು, ಪಾಪ ನಮ್ಮ ಜತೇಲೇ ಇರ್ತಾಇದ್ದರು – ಬೆಳಿಗ್ಗೆ ನಮ್ಮೂರಿನ ಹಾಗೇ ಒಳ್ಳೇ ಬ್ರೇಕ್ ಫಾಸ್ಟು.... ಊಟಕ್ಕೆ ಮೊದಲು ನಾಲ್ಕೈದು ಸರ್ತಿ ಕಾಫಿ, ಊಟ ಅಂದರೆ ನಾರ್ತು ಸೌತು ಎರಡೂ ಇರೋ ಹಾಗೆ ಕಾಂಬಿನೇಷನ್ನು.

ಊಟ ತಿಂಡಿ ಎಲ್ಲಾವುದಕ್ಕೂ ಏನುಬೇಕು ಏನುಬೇಕು ಅಂತ ಕೇಳೀ ಕೇಳೀ ತರಿಸುತ್ತಾ ಇದ್ದರು.

ಅವನ ಊಟತಿಂಡಿಯ ಸಂಗತಿ ಇನ್ನೂ ಮುಂದುವರೆಯುತ್ತಲೇ ಇತ್ತು ಅಂತ ತೋರುತ್ತೆ.

ಅಲ್ಲಪ್ಪಾ ಕೆಲಸ ಹೇಗಾಯಿತು? ಅಂದೆ ಬರೀ ಊಟ ತಿಂಡಿ ವಿಷಯ ಹೇಳ್ತಿದ್ದಾನಲ್ಲಾ ಅನ್ನುವ ಅಸಹನೆಯಲ್ಲಿ.

ಅಸಹನೆ ನನ್ನ ಧ್ವನಿಯಲ್ಲಿ ಇದ್ದದ್ದು ಅವನಿಗೆ ಗೊತ್ತಾಗಲಿಲ್ಲ ಅಂತ ತೋರುತ್ತೆ.

ಅದೇ ಗೆಲುವಿನಲ್ಲಿಯೇ ಮುಂದುವರೆಸಿದ.

ಕೆಲಸದ ವಿಷಯವೇ ಸಾರ್? ಗೊತ್ತಿಲ್ಲದೇ ಇರೋದನ್ನ ಹೇಳಿಕೊಟ್ಟರು ಏನಾದರೂ ಸಮಸ್ಯೆ ಇದ್ದರೆ ಅವಾಗಲೇ ಸಮಸ್ಯೆ ಬಗೆ ಹರಿಯುವ ಹಾಗೆ ಸಲಹೆ ಕೊಡ್ತಾ ಇದ್ದರು. ಅವರಿಗೆ ಗೊತ್ತಿಲ್ಲದೇ ಇರೋದನ್ನ ನಾವು ಕೆಲಸ ಮಾಡುವುದನ್ನು ನೋಡಿ ಅರ್ಥಮಾಡಿಕೊಂಡು ಕೇಳಿ ತಿಳಿದುಕೊಂಡರು.

ಗುಡ್ ಯು ಎಂಜಾಯ್ಡ್ ದಿ ವರ್ಕ್..... ವೆರಿ ಗುಡ್..... ಅಂದೆ

ಹೌದು ಸಾರ್ ಖುಷಿಯಾಯಿತು, ಮತ್ತೆ ಇನ್ನೊಂದು ಸಲ ಅಲ್ಲೀಗೆ ಕೆಲಸ ಇದ್ದರೆ ನಾನೇ ಹೋಗೋಣ ಅನಿಸುತ್ತೆ...

ಪರವಾಗಿಲ್ರೀ ಹೊರಗಡೆ ಕೆಲಸ ಅಷ್ಟೊಂದು ಇಷ್ಟ ಪಟ್ಟಿದ್ದೀರೀ ಅದು ನಮಗೂ ಸಮಾಧಾನದ ಸಂಗತಿ ಅಂತ ಉಬ್ಬಿಸಿ ಕಳಿಸಿದೆ.

ಎರಡು ಮೂರು ದಿವಸಗಳ ನಂತರ ಎರಡನೆಯವನೂ ಬಂದ. ಅವನ ಅನುಭವ ವಿಚಾರಿಸಲು ಕರೆದೆ.

ಹೇಗಿತ್ರೀ ಹೊಸಾ ಕಡೆ ಕೆಲಸ? ಅಂತ ಶುರು ಮಾಡಿದೆ.

ಹಾರಿಬಲ್ಲು ಸಾರ್.... ಅಂದ!

ಯಾಕೆ ಏನಾಯ್ತು?

ಏನು ಸಾರ್? ಯಾವಾಗ ನೋಡಿದರೂ ನಮ್ಮ ಹಿಂದೇನೇ ಇರ್ತಾರೆ, ಅದೇನೋ ಕದ್ದು ಬಿಡ್ತೀವಿ ಅನ್ನೋ ಹಾಗೆ..... ನಾವೇನು ಕಳ್ಳರಾ?

ಕುತೂಹಲ ಹೇಗೆ ಹುಟ್ಟಿತು ಅಂದರೆ ಮಾತಿಗೆ ಎಳೆದೆ.

ನಿಮ್ಮನ್ನ ಜಾಸೂ ಮಾಡ್ತಾ ಇದ್ದರಾ?

ಹೌದು ಸಾರ್. ಉಣ್ಣಬೇಕಾದರೂ ನಮ್ಮ ಜತೆ, ಕೆಲಸ ಮಾಡಬೇಕಾದರೂ ನಮ್ಮ ಹಿಂದೆ, ಕುತೂಹಲದಿಂದ ನಾವು ಮಾಡೋದನ್ನ ನೋಡೋದೂ ಅಲ್ಲದೇ ನಮಗೆ ಕೆಲಸ ಗೊತ್ತಿದೆಯೋ ಇಲ್ಲವೋ ಅಂತ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನ ಎಲ್ಲರೂ ಕೇಳೋದೇ....

ಬಿಡ್ರೀ ಊಟತಿಂಡಿ ಹೇಗಿತ್ತ್ರೀ?

ಸರಿ ಹೋಗಲಿಲ್ಲ ಸಾರ್. ಎಲ್ಲವೂ ಅವರ ಥರಹವೇ ಅಲ್ಲಿಂದ ಜನ ಇಲ್ಲೀಗೆ ಬಂದಾಗ ನಾವು ಅವರಿಗೆ ಹೇಗೆ ಬೇಕೋ ಹಾಗೆ ಮಾಡ್ತೀವೀ ನೋಡಿ ಸಾರ್ ಅಲ್ಲಿ ಹಾಗಿಲ್ಲ. ಅವರೇನು ಮಾಡ್ತಾರೋ ಅದೇ ತಿನ್ನಬೇಕು..... ಹೊಟ್ಟೆ ಕೆಟ್ಟು ಹೋಯಿತು, ಅದಕ್ಕೇ ರಜಾ ಮುಂದುವರೆಸಬೇಕಾಯಿತು.

ಹೋಗಲಿ ಕೆಲಸ ಇಷ್ಟ ಪಟ್ರಿರಾ?

ಅದೇನು ಸಾರ್? ಇಲ್ಲಿ ಮಾಡಿದ್ದೇ ಅಲ್ಲೂ ಮಾಡಿದ್ದು. ಸರಿಯಾಗಿ ಮಾಡ್ತೀವೋ ನಮಗೆ ಕೆಲಸ ಬರುತ್ತೋ ಇಲ್ಲವೋ ಅಂತ ಅವರಿಗೆ ನಮ್ಮ ಬಗ್ಗೆ ಸಂಶಯ ಆದರಿಂದ ಯಾವಾಗ ಕೆಲಸ ಮಾಡಬೇಕಾದರೂ ಅಲ್ಲಿನ ಇಬ್ಬರೋ ಮೂರುಜನವೋ ನಮ್ಮ ಜತೇನೇ ಇರ್ತಾ ಇದ್ದರು. ಅದು ಹೇಗೆ ಇದು ಹೇಗೆ ಅಂತ ನಮ್ಮನ್ನ ಕೊಶ್ಚನ್ ಬೇರೆ ಮಾಡ್ತಿದ್ದರು, ತಲೆ ಕೆಟ್ಟುಹೋಯ್ತು.

ಒಂದೇ ಅನುಭವವನ್ನು ಇಬ್ಬರು ಹೇಗೆ ಹಂಚಿಕೊಳ್ಳುತ್ತಿದ್ದಾರೆ ಅನ್ನಿಸಿತು. ನಾವು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿದರೆ ಪ್ರಪಂಚ ಬಹಳ ಚೆನ್ನಿರುತ್ತೆ ಅಂತ ಯಾರೋ ಮ್ಯಾನೇಜ್ ಮೆಂಟಿನ ಗುರು ಹೇಳಿದ ಮಾತು ನೆನಪಿಗೆ ಬಂತು ! ಹಾಗೆ ನೋಡಿದರೆ ಒಂದೊಂದು ಅನುಭವವೂ ಅವರವರ ನೋಟಕ್ಕೆ ಕುರುಡರು ಆನೆ ನೋಡಿದ ಹಾಗೆ ಅಂತ ಮತ್ತೊಬ್ಬ ಗುರು ಹೇಳಿದ್ದೂ ನೆನಪಿಗೆ ಬರಬೇಕೇ?

ಆನೆಗಳನ್ನು ನಾವು ಕುರುಡರು ನೋಡುವ ರೀತಿಯಲ್ಲಿ ಅದು ನಮಗೆ ಅನುಭವ ನೀಡುವುದಂತೆ

✵

---

**ಜಾಣರು**

ಒದದೇ ಒದದೇ ಕೆಟ್ಟಿದ್ದ
ಕೂಚುಬಟ್ಟ
ಒದು ಕೈ ಬಿಟ್ಟು ಬ್ಯಾಟ್ ಹಿಡಿದು
ಕೋಟಿ ಕೋಟಿ ಬಾಚಿಬಿಟ್ಟ

-ಸುಕೇಶವ